REGISTERED NO. M. 1393.

ಈ ಪ್ರತಿ ಒಂದಾಣೆ

ಕಂಠೀರವ

KANTEERAVA
THE ONLY KANARESE
BI-WEEKLY.

ಶ್ರೀಮದ್ಭೂಮಿತಲೇಷು ಭಾರತಮಹೀಭಾಗಃ ಪ್ರಶಾಸನ್ಮಹೀ
ಪಾಲೇಷ್ವಾಂಗಲನಾಯಕೋ ನರಕುಲವ್ರಾತೇಷು ಚಾರ್ಯಾನ್ವಯಃ।
ಶಸ್ತ್ರಸ್ತ್ರದ್ವದಮೂಷು ಸಂವ್ಯವಹೃತಿಪ್ರಾಗಲ್ಭ್ಯಮಾತ್ತೋಽನ್ವಹಂ
ಜೀಯಾದ್ವಿಶ್ವಜನೀನವೃತ್ತಿಚತುರಶ್ಶ್ರೀಕಂಠಕಂಠೀರವಃ ॥

ನರರ ಕುಲಗಳೊಳಾರ್ಯವಂಶವು; ಧರೆಯ ದೇಶಗಳೊಳಗೆ ಭಾರತ
ವರಸುತನಗಳೊಳಾಂಗ್ಲರೊಡೆತನ, ನುಡಿಗಳೊಳು ಮೆರೆವಾ ॥
ತಿರುಳಗನ್ನಡವೊಂದಕೊಂದೊ । ಪ್ಪಿರುವ ತೆರ, ಕಂಠೀರವನು ಮೆರೆ
ದಿರಲಿ ವಂಶಕೆ ಧರೆಗೆ ನೃಪತಿಗೆ ನುಡಿಗೆ ಸೊಬಗೆನಿಸೀ! ॥

ಸಂಪುಟ ೧೪ | ಮಂಗಳೂರು, ೧೯೩೬ನೇ ಇಸವಿ ದಶಂಬರ ತಾರೀಕು ೧ನೇ ಮಂಗಳವಾರ | ಸಂಚಿಕೆ ೬೯.
VOL. XVIII | MANGALORE, TUESDAY, DECEMBER 1, 1936. | NO. 69

ಅಮೃತಾಂಜನ

ಅಮೃತಾಂಜನ



(Regd.)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುನೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೊಡಿಮೆ ನೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಯಉಪದ್ರವ, ತಲೆಹುಣ್ಣು, ವ್ರಣ ನೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೊ

AMRUTANJAN DEPOTS
BOMBAY. MADRAS. CALCUTTA.

ಬೊಂಬಾಯಿ——————ಮದ್ರಾಸ್——————ಕಲ್ಕತ್ತಾ

ಮಂಗಳೂರಲ್ಲಿ ಶಾಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Estd. 1908
Church Gate Street, Fort - - BOMBAY.

SPECIAL FEATURES.

(1) Rebate on yearly payment of policies.
(2) Rebate for larger assurances.
(3) Accident Risk covered on small extra premiums.
(4) Attractive Bonuses.

It pays you to represent this Company.
Wanted Agents in unrepresented parts.

APPLY TO:
KOCHIKAR BROTHERS,
Madras Branch Secretaries.

1936
OUR VALUATION YEAR

Take a BOMBAY LIFE Policy now, and share in the profits

Bonus declared in 1933. **Rs. 18** Per thousand per year on Endowment Assurances.

RECORD OF BONUSES ALLOTTED

Whole Life Assurances. Rs.	Year.	Endowment Assurances. Rs.
10	1912	10
20	1925	12·8
28	1930	15
30	1933	18
23	Per thousand per year	

Bonus declared in 1933. **Rs. 23** Per thousand per year on Whole Life Assurances.

Branches: 337 Rd. s. | Visveswarapuram Circle Bangalore City. | Soumyalayam Puthiyara Calicut. | Car Street Mangalore. | Udipi S. India. | Charni Rd. Bombay No. 4.

Absolute Safety of Investments, Complete Security to Depositors,
Comprehensive and Efficient Service to the Public,
ARE THE OUTSTANDING FEATURES OF

The Canara Industrial & Banking Syndicate, Limited,

(Incorporated in British India.)

THE PIONEER AND HIGHLY PROGRESSIVE COSMOPOLITAN BANK OF

KARNATAKA

With 25 Branches spreading over 8 Districts in South India.

ESTD. 1925.) Head Office:—"Mukunda Nivas", UDIPI.

ANNOUNCEMENT.

We have much pleasure in announcing that two Branches of our Bank have been opened in October, 1936, one at KASARGODE (S. Kanara Dt.) & the other at SAGAR (Shimoga Dt.) on the 24th and on the 29th respectively, where all kinds of Banking business are transacted. It gives us greater pleasure to announce that four more Branches will be opened in 1936 at Byadgi, Prodattur, Tadpatri, and Nandyal on the 29th November, 3rd December, 16th December, and 18th December respectively. The large number of our clients as well as the general public are requested to take advantage of the numerous facilities offered by us at low rates.

"Mukunda Nivas",
UDIPI,
3—11—1936.

P. A. Pai Brothers,
Managing Agents.

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ ?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವ ಚದುರಂಗ ಆಡುವವರೆ? ನೀವು ಯಾರಾದರೂ ಸರಿ-ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ: ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ, ಸ್ಫೂರ್ತಿಯೂ ತೋರಿಬರುವುದು.

ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ. (ಟಪ್ಪಾಲು ಖರ್ಚು ಪ್ರತ್ಯೇಕ)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,

ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.

ನೆಲ್‌ಸನ್ನ ಯುಟ್ರೊವನ್ ಹೆಂಗಸರ

ಎಲ್ಲಾ ರೋಗಗಳಿಗೂ ಖಂಡಿತವಾದ ದಿವ್ಯ ಔಷಧ

ಉಪಯೋಗಗಳು

ಅಲ್ಪ ಸಮಯದಲ್ಲಿ ಲುಕೋರಿಯಾ, ಮೆಟ್ರೊರೊಡಿಯ; ಮನೊರಿಜಿಯಾ, ಮಿಸ್‌ಕೆರಿಜ್, ಬಿನ್ನೋವು ಮತ್ತು ಡಿಸ್‌ಮೆನೊರಿಯಾ ಗುಣಪಡಿಸುತ್ತದೆ. ಅನೇಕ ಡಾಕ್ಟರುಗಳಿಂದ ಪರೀಕ್ಷಿಸಲಾಗಿರುತ್ತದೆ.

Nelson's Convulsion Cure
Best For
INFANTILE CONVULSIONS

ಇಂಪೀರಿಯಲ್ ಫಾರ್ಮಸ್ಯೂಟಿಕಲ್ ಕಂಪೆನಿ,
ಪೋಸ್ಟ್ ಬೋಕ್ಸ ನಂಬ್ರ 3559, :: ಬೊಂಬಾಯಿ
ಇವರಿಂದ ತಯಾರಿಸಲ್ಪಡುತ್ತದೆ.

ದಿ ರಿಲೈಯನ್ಸ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಹೊಸತರುಗು ಪೇಟೆ, ಬಿಂಗಳೂರು ಸಿಟಿ.

ಕ್ಲೈಮನ್ ಹಣ ರೂ. 3,16,000 (3 ಲಕ್ಷ ರೂ.ಗೆ)ಗೆ ಮೇಲ್ಪಟ್ಟ ಪಾವತಿಯಾಗಿರುತ್ತೆ.

ಮೈಸೂರು ಸರ್ಕಾರದ ಕಂಪೆನಿ ರೆಗ್ಯುಲೇಷನ್ ನಂ. VIII 1917ರ ಪ್ರಕಾರ ಸ್ಥಾಪಿತವಾದದ್ದು; ಮತ್ತು ಇಂಡಿಯನ್ ಲೈಫ್ ಅಷ್ಯೂರೆನ್ಸ್ ಆಕ್ಟ್ VI (1912)ರ ಪ್ರಕಾರ ಠೇವಣಾತಿ (Deposit) ಇಟ್ಟು, ಅಧರ ನಿಯಮಗಳಿಗೊಳಪಟ್ಟಿದೆ.

ಈ ಕಂಪೆನಿಯ ಅತಿ ಮುಖ್ಯವಾದ ಪತ್ತು ಲಾಭಕರವಾದ ನವೀನ ಪರತ್ತುಗಳನ್ನು ಗಮನಿಸಿರಿ. (1) ಶುರುವಾದ ಲಾಗಾಯ್ತು ಪಹರ ಒಂದಕ್ಕೆ ರೂ. 1000ಗೆ ರೂ. 15ರಂತೆ ಗ್ಯಾರಂಟಿಯಾದ ಬೋನಸ್ಸನ್ನು ಕೊಡುವ ಪಾಲಿಸಿಗಳು. (2) ಸರೆಂಡರ್ ವ್ಯಾಲ್ಯುವಿನ ಶೇಕಡ 90% ರಷ್ಟು ಸಾಲ ಪಡೆಯುವಿಕೆ. (3) ಇಮ್ಮಡಿ ವಿಮೆ ಹಣ ಪಡೆಯುವಿಕೆ; (4) ಸ್ಥಿರವಾದ ಅಶಕ್ತತೆಯ ರಿಯಾಯಿತಿ; (5) ವೈದ್ಯಪರೀಕ್ಷೆಯೇ ಇಲ್ಲದೆ ಮಕ್ಕಳ ಹೆಸರಿನಲ್ಲಿ 5000 ರೂ.ಗೆ ವಿಮೆ ಮಾಡಿ, ಪಾಲಿಸಿಯೊಂದನ್ನು ಹೊಂದಬಹುದಾದ ನವೀನ ಕ್ರಮ. (6) ಸ್ತ್ರೀ ಜೀವ ವಿಮಾ ಮಾಡುವ ಕ್ರಮ. ನಮ್ಮ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಸಮರ್ಥರಾದ ಮತ್ತು ಅನುಭವ ಶಾಲಿಗಳಾದ ಏಜಂಟರುಗಳು ಬೇಕು.

1936ನೇ ಸಪ್ಟಂಬರ ತಿಂಗಳಲ್ಲಿ 16 ಮರಣಗಳು ರಿಪೋರ್ಟಾಗಿರುವದರಿಂದ ಮ್ಯೂಚುವಲ್ ಬೆನೆಫಿಟ್ ಸ್ಕೀಮಿನ ಎಲ್ಲಾ ಮೆಂಬರರೂ ಎಂದಿನಂತೆ ಒಂದು ತಿಂಗಳೊಳಗಾಗಿ ತಮ್ಮ ಚಂದಾ ಹಣವನ್ನು ಕಳುಹಿಸಬೇಕಾಗಿ ಅರಿಕೆ ಮತ್ತು ಅವರು ಇಷ್ಟಪಟ್ಟಲಿ ತಮ್ಮ ಸರ್ಟಿಫಿಕೇಟುಗಳನ್ನು ಜೀವನವಿಮೆ ಪಾಲಿಸಿಗಳಿಗೆ ಬದಲಾಯಿಸಬಹುದು.

ಹೆಚ್ಚಿನ ವಿವರಗಳಿಗೆ ಬರೆಯಿರಿ

ತಿರುಪತಿ ಬಲಿಜಾ ಅಂಡ್ ಕಂಪೆನಿ, ಮ್ಯಾನೇಜಿಂಗ್ ಏಜಂಟರುಗಳು.

1935ನೇ ಇಸ್ವಿಯ ಎ. ಐ. ಐ. ಪ್ರದರ್ಶನದಲ್ಲಿ ಬಂಗಾರದ ಬಹುಮಾನ ಪದಕವು ದೊರಕಿದೆ.

ನಿಮ್ಮ ಕೂದಲು ತನ್ನ ಸ್ವಾಭಾವಿಕ ಬಣ್ಣವನ್ನು ಕಳೆಯುತ್ತದೆ ಮತ್ತೂ ಹೊಳಪಿನ ಮೃದುತ್ವವನ್ನು ಪಡೆಯುತ್ತದೆ– ಈ ನಿಮ್ಮ ಗುಟ್ಟನ್ನು ಯಾರೂ ತಿಳಿಯರು. ಇಂದೇ ಒಂದು ಬಾಟಲಿಯನ್ನು ತರಿಸಿ– ಅಪರಪ್ಪು ಒಳ್ಳೆದು ಇಂಡಿಯದಲ್ಲಿ ಇನ್ನೊಂದಿಲ್ಲ.

1 ಪೆಟ್ಟಿಗೆಗೆ ರೂ. 1—2. 6 ಪೆಟ್ಟಿಗೆಗಳಿಗೆ ರೂ. 5--0.
3 ಪೆಟ್ಟಿಗೆಗಳಿಗೆ ,, 2—12. 12 ಪೆಟ್ಟಿಗೆಗಳಿಗೆ ರೂ. 9—0.
ಪೋಸ್ಟೇಜಿನ ಸಹಿತ ಬೆಲೆ ಇಂಡಿಯಕ್ಕೆ ಮಾತ್ರ.

ಇಂಡಿಯಕ್ಕೆ ಸೋಲ್ ಡಿಸ್ಟ್ರಿಬ್ಯೂಟರ್ಸ್:—

THE MAQBOOL AGENCY,
Bombay 3. Tel: "AGENCY."

ನಾವು ಕಂಡಾಣಿ ಇದೇ ಮೊದಲು ಕೊಳ್ಳುವವರಿಗೆ ಔಷಧಗಳು ಕೆಲಸವನ್ನು ಸಾಹುಕಾರರಿಗೆ ನುಚ್ಚಿನಾದ ಒಪ್ಪಿಯು ನರ್ತನಾನ.

ನ್ಯೂ ಮೊಡಲ್ ಗಡಿಯಾರ.

3 ವರುಷಗಳ ಗ್ಯಾರಂಟಿ.

(ದಿವಸಕ್ಕೆ ಒಂದಾವರ್ತಿ ಬೀಗ ಕೊಡುವುದು.)

ಈ ಗಡಿಯಾರಗಳು ಹೊಸದಾಗಿ ತಯಾರು ಮಾಡಿ ತರಿಸಿದ್ದೇವೆ. ನೀಮೆಯ ನಿಕ್ಕಲ್ ಲೋಹದ ಸ್ಟಾಂಡಿನಲ್ಲಿ ತಯಾರಿಸಿದ್ದೇವೆ. ಈ ಗಡಿಯಾರವು ಖರಾರು ಗಂಟಿಯನ್ನು ತೋರಿಸುವುದು. ಖಾತ್ರಿಯಾದ 3 ವರುಷಗಳ ಗ್ಯಾರಂಟಿ ಕೊಡುವೆವು. ಈ ಗಡಿಯಾರಗಳನ್ನು ಗುಡಿ, ಸ್ಕೂಲು, ರೀಡಿಂಗ್ ರೂಮ್ ಹಾಲುಗಳಲ್ಲಿ ಮುಂತಾದ ಜಾಗದಲ್ಲಿ ಗೋಡೆಗೆ ತಗಲಿಸಿದರೆ ಅಂದವಾಗಿರುವುದು. ಕ್ರಯ ಗಡಿಯಾರ 1ಕ್ಕೆ ರೂ. 3. ಟಪಾಲು ಖರ್ಚು ಪ್ರತ್ಯೇಕ.

ವಿ. ಎಸ್. ವಾಚ್ ಕಂಪೆನಿ,
8, 3-11. ಇರುಳಪ್ಪನ ಬೀದಿ, ಮದ್ರಾರು.

ವೆಂಕಟಗಿರಿ ಮಹಾತ್ಮೆ

೭೯೯ ಪದ್ಯಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕಾಗದ. ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಸೂರೆಯಾಗುವಂತೆ ಗ್ಲೇಜ್ ಕಾಗದದಲ್ಲಿ ೧೪ ಹಾಫ್ ಟೋನ್ ಚಿತ್ರಗಳಿಂದ ಕೂಡಿದೆ.

ಸುಂದರ ಮುದ್ರಣ.

ಬೆಲೆ ರೂಪಾಯಿ ೧—೮—೦.

ಟಪಾಲು ಹಾಗಲು ಬೇರೆ.

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವಗರ್ಸ್ಥರಾದ ಮೂಲ್ಕಿ ಕವಿ ರಾಮ ಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿತು. ಸುಲಭ ಶೈಲಿ, ಪರ್ವರಿಗೂ ಅನುನಿತ್ಯ ಪಠನ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಅಷ್ಟಪತ್ರದ 168 ಪುಟಗಳು. ಕಿತ್ತಾನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1 – 8 - 0. ಟಪ್ಪಾಲು ಖರ್ಚಿಗಳು ಬೇರೆ.

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

ಪಿಟೀಲು, ವೀಣಾ, ಕೊಳಲು, ಹಾರ್ಮೋನಿಯಮ್ ಮತ್ತು ಸಶಾಸ್ತ್ರ ಗಾಯನವನ್ನು ಶಿಕ್ಷಕರ ಸಹಾಯವಿಲ್ಲದೆ ಕಲಿಯುವ

ಹಾರ್ಮೋನಿಯಂ ಶಿಕ್ಷಕ

ಇದರಲ್ಲಿ ಯಾವತ್ತೂ ಕನ್ನಡ ನಾಟಕದೊಳಗಿನ ಪದಗಳೂ ಮತ್ತು ಸುರಾತಿ ನಾಟಕದೊಳಗಿನ ಪದಗಳು, ಹಿಂದೂಸ್ಥಾನೀ ಜೀಜುಗಳ ಗ್ರಾಮೋಫೋನಿನಲ್ಲಿ ಕೊಟ್ಟ ಪದಗಳ ಸಶಾಸ್ತ್ರ ಸುಲಭ ನೊಟೇಶನ್ ಕೊಟ್ಟಿರುತ್ತದೆ.

ಕನ್ನಡ ಲಿಪಿ ಭಾಗ ೩, ಪ್ರತಿಯೊಂದು ಭಾಗಕ್ಕೆ ಬೆಲೆ ೧೫ ಆಣೆ.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡಬೇಕು.

B. V. PHATAK,
Fort MIRAJ, (S.M.C.)

ಕಾರಣ ಮತ್ತು ಪರಿಣಾಮ

ಮೈಸೂರು ಗಂಧದ ಸಾಬೂನನ್ನು
ನಿತ್ಯವೂ ಉಪಯೋಗಿಸುವುದರ
ಪರಿಣಾಮವೇನೆಂದರೆ,
ಶಾರೀರಕ ಯೋಗ್ಯತೆಯ
ರಮ್ಯವಾದ ಅನುಭವವಾಗಿದೆ
ಅದು ಚರ್ಮವನ್ನು ಕೂಡ
ಕಾಪಾಡುತ್ತದಲ್ಲದೆ,
ಅದನ್ನು ಕೋಮಲವಾಗಿಯೂ
ನುಣುಪಾಗಿಯೂ ಇರಿಸುತ್ತದೆ

ಇದರ ಕಾರಣವೇನೆಂದರೆ,
ಬಿ. ಪಿ. ಗುಣವಿಶೇಷದ
ಶುದ್ಧವಾದ ಮೈಸೂರು
ಗಂಧದ ಎಣ್ಣೆಯು
ಈ ತಯಾರಿಯ ಸ್ವಚ್ಛ ದಿನಸುಗ
ಳೊಡನೆ ಮಿಶ್ರವಾಗುತ್ತಿರುವುದೇ.

ಮೈಸೂರು ಗಂಧದ ಸಾಬೂನು

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.
GOVT. SOAP FACTORY,
BANGALORE.

ಶಿಶುಸಂಬಂಧವಾದ

ಯಕೃತ್ತು ಮತ್ತು ಪ್ಲೀಹದೋಷಗಳಿಗೆ

ಶಿಶುಸಂಬಂಧವಾದ ಯಕೃತ್ತು ಮತ್ತು ಪ್ಲೀಹದೋಷಗಳು ದೇಹದಲ್ಲಿ ಅಪರೂಪವಾಗಿ ಬರುವ ಜ್ವರದಿಂದಲೂ ಆಗಾಗ್ಗೆ ಮಲಬದ್ಧತೆಯಿಂದಲೂ ಆರಂಭವಾಗಿ,ಇದು ಗಣನೆಗೆ ಬಾರದೆ ಕ್ರಮೇಣ ಜ್ವರ, ಹೊಟ್ಟೆ ಬೆಳೆಯುವಿಕೆ, ವಾಂತಿ, ಲಕ್ಷಿಸತಕ್ಕ ಮಲಬದ್ಧತೆ ಅಥವಾ ಅನೇಕ ವೇಳೆ ಮಲವಿಸರ್ಜನೆಯುಂಟಾಗುತ್ತದೆ. ಶಿಶುವು ತನ್ನ ರುಚಿಯನ್ನೂ, ಉಲ್ಲಾಸವನ್ನೂ ಕಳಕೊಳ್ಳುತ್ತದೆ ಮತ್ತು ಕರ್ಕಶ ಸ್ವಭಾವಿಯೂ, ಕೃಶವೂ ಆಗುತ್ತಾ ಬರುತ್ತದೆ. ಮೋರೆಯು ಸಪ್ಪನಾಗಿ ಮೂತ್ರವು ಬಣ್ಣವನ್ನು ಹೊಂದಿ ಅದನ್ನು ಅಲ್ಲಿಯೇ ಆರಲು ಬಿಟ್ಟರೆ ಬಿಳಿ ಮಂಡಲವನ್ನು ಬಿಡುತ್ತದೆ. ಮಲವು ಬಹಳವಾಗಿಯೂ, ದೀರ್ಘವಾಗಿಯೂ, ಕೆಸರಿನಂತೆಯೂ ಆಗಿ ಪಚ್ಚೆಯಾ ಬಿಳಿ ವರ್ಣವುಳ್ಳುದಾಗಿ ದುರ್ವಾಸನೆಯನ್ನು ಕೊಡುತ್ತದೆ.

ಯಕೃತ್ತು ಬಹಳ ನೋವನ್ನುಂಟುಮಾಡುತ್ತದೆ, ಜ್ವರವು ಏರುತ್ತದೆ ಮತ್ತು ಅರಸಿನ ಮುಂಡಿಗೆಯು ಆರಂಭವಾಗುವದು; ಆನಂತರ ವೃದ್ಧಿಯಾಗಿ, ಚರ್ಮ, ಕಣ್ಣುಗಳು ಮತ್ತು ಮೂತ್ರ ಕಡುಹಳದಿ ಬಣ್ಣವನ್ನು ಹೊಂದುತ್ತವೆ. ಕಾಲುಗಳು, ಕೈಗಳು ಮತ್ತು ಕೆಲವು ಸಲ ಮುಖ ಕೂಡ ಬಾತುಕೊಳ್ಳುತ್ತವೆ. ಹೊಟ್ಟೆಯ ಮೇಲಣ ನರಗಳು ಕಾಣುವಂತೆ ಹೊರಕ್ಕೆ ಬರುತ್ತವೆ. ರೋಗಿಯು ಸರಿಯಾದ ಔಷಧೋಪಚಾರವನ್ನು ಪಡೆಯದಿದ್ದಲ್ಲಿ ಮೂರ್ಚ್ಛಾಸ್ಥಿತಿಯಲ್ಲಿ ಮರಣವನ್ನು ಹೊಂದ್ರಬಹುದು.

ಅನೇಕ ವೈದ್ಯಕೀಯ ಜನರು ಈ ರೋಗವನ್ನು ಯಾವ ಔಷಧವೂ ಅಂಕೆಗೆ ತರುವದಿಲ್ಲವೆಂದು ಅಭಿಪ್ರಾಯಪಡುತ್ತಾರೆ. ಆದರೆ ರುಜುವಾತುಗಳು ಸಿದ್ಧಾಂತಿಸುವವೇನೆಂದರೆ ಈ ಭಯಂಕರ ಯಕೃತ್ತು ಮತ್ತು ಪ್ಲೀಹದೋಷಗಳು ಗುಣಕಾರಿಯಾಗುವ ಔಷಧೋಪಚಾರವೆಂದರೆ ಜಮ್ಮಿ ವೆಂಕಟರಮಣಯ್ಯನವರ ಲಿವರ್ ಕ್ಯೂರ್.

ಪತ್ರಕಗಳಿಗೂ ವಿಶೇಷ ಮಾಹಿತಿಗೂ ಬರೆಯಿರಿ:—

ಡಾಕ್ಟರ್ ಜಮ್ಮಿ ವೆಂಕಟರಮಣಯ್ಯ
ಲಿವರ್ ಮತ್ತು ಸ್ಪ್ಲೀನ್ ಸ್ಪೆಶಲಿಸ್ಟ್
ಮೈಲಾಪುರ್, ಮದ್ರಾಸು

THE
Popular Insurance Co., Ltd.
Head Office:—MANGALORE, S. India.

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಕಾರ್ಯಾಲಯ:—ಮಂಗಳೂರು, ದ. ಇಂಡಿಯ.

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು.

(ಭಾರತದ ವಿಮಾಪ್ರಪಂಚದಲ್ಲಿ ಯೋಗ್ಯಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ)

ಈ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ- ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಪ್ರಥಮ ಮೌಲ್ಯವೇತನದಲ್ಲಿಯೇ
ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದಕ್ಕೆ ರೂಪಾಯಿ ೧೦/- ಬೋನಸ್ ಹಂಚಲಾಗಿದೆ.

ದ. ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ವ್ಯವಹಾರಕುಶಲರೂ, ಯೋಗ್ಯರೂ ಆದ ಏಜಂಟರು ಸಂಬಳ ಮತ್ತು ಕಮಿಶನಿನ ಮೇಲೆ ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. — ಯಥೋಚಿತವಾದ ಪುರಸ್ಕಾರಗಳಿವೆ. — ತಪ್ಪದೆ ವ್ಯವಹಾರ ಬೆಳಸಿರಿ.

ಮಾಹಿತಿಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ

ಡಿ. ಗೋಪಾಲಾಚಾರ್ಲುರವರ

ಜೀವಾಮೃತ

ಜೀವಾಮೃತವು ಬಲಹೀನತೆಯಿಂದುಂಟಾಗುವ ನೋವುಗಳನ್ನು ನಿವಾರಿಸಿ ಶರೀರಕ್ಕೆ ಸಂಪೂರ್ಣ ಆರೋಗ್ಯವನ್ನೂ ಶಕ್ತಿವೃದ್ಧಿಯನ್ನೂ ಉಂಟುಮಾಡಿ, ನರಗಳ ಪಟುತ್ವವನ್ನೂ, ಮಾಂಸಪುಷ್ಟಿಯನ್ನೂ, ಹೆಚ್ಚಾದ ಬಲ, ತೇಜಸ್ಸು, ಜ್ಞಾಪಕಶಕ್ತಿಗಳನ್ನೂ ವೃದ್ಧಿಪಡಿಸುವುದು.

ಜೀವಾಮೃತವು ಆರೋಗ್ಯವನ್ನು ಪುನರುತ್ಪತ್ತಿಮಾಡುವ ಪ್ರಾಣದಾಯಕವೆನ್ನಬಹುದು..

ತಯಾರಸುವವರು:—
ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ಸ್ಟೋಕಿಸ್ಟರು:—ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

THE NEDUNGADI BANK, LIMITED.
ದಿ ನೆಡುಙಾಡಿ ಬೇಂಕ್, ಲಿಮಿಟೆಡ್,

ಹೆಡ್ ಆಫೀಸ್:—ಕಲ್ಲಿಕೋಟೆ. (ಸ್ಥಾಪನೆ 1899ರಲ್ಲಿ).

ಶಾಖೆಗಳು:—ಒಟ್ಟಪಾಲಂ, ಪಾಲ್ಘಾಟ್, ಬಡಗರ, ತಿರೂರ್, ಎರ್ನಾಕುಳಂ, ತ್ರಿಚೂರ್, ಅಲ್ಲಪ್ಪಿ, ಮಂಗಳೂರು, ತಲಚೇರಿ, ತ್ರಿವೇಂಡ್ರಮ್, ಮದ್ರಾಸ್, ಕೊಯಂಬುತ್ತೂರು, ಕೊಚ್ಚಿ, ಮಂಜೇರಿ, ಕ್ಯೂಲಾಂಡಿ ಮತ್ತೂ ಕುಮಾರಮೆಲ್ಲೂರು.

ಇಂಡಿಯದ ಮತ್ತೂ ಬರ್ಮಾದ ಯಾವತ್ತು ಪ್ರಾಮುಖ್ಯ ಪಟ್ಟಣಗಳಲ್ಲಿಯೂ ಏಜನ್ಸಿಗಳು.

ಪ್ರತಿಯೊಂದು ಬಗೆಯ ಬ್ಯಾಂಕಿಂಗ್ ವಹಿವಾಟುಗಳು.

ಎಲ್ಲ ಶೇವಣಾತಿಗಳಿಗೂ ಆಕರ್ಷಕವಾದ ಬಡ್ಡೀ ದರಗಳು.

ಚೆಯರ್‌ಮ್ಯಾನರು:—ರಾವ್‌ಬಹದೂರ್ ಡಾಕ್ಟರ್ ಪಿ. ಕೆ. ವಾರಿಯರ್, ಮದ್ರಾಸಿನ ಸರ್ಜನ್ ಜನರಲರ (ನಿವೃತ್ತ) ಪರ್ಸನಲ್ ಅಸಿಸ್ಟಾಂಟರು.

ಯಾವತ್ತು ಪತ್ರವ್ಯವಹಾರವೂ ಸೆಕ್ರಟರಿಗಳೊಂದಿಗೆ.

ಈ ವಾರದ ಕಥೆ:—

ಗ್ರೀಕಿನ ಒಂದು ಪ್ರೇಮಕಥೆ.

(ಶ್ರೀ॥ ಬಿ. ಶಂಕರ ಭಟ್ಟ.)

ಕಾಮದೇವ ಮತ್ತು ರತಿದೇವಿಯ ಮಧುರ ಮಿಲನ.

ಗ್ರೀಕ್ ದೇಶವು ಕಥೆಗಳ ಗಣಿಯು. ಯುರೋಪಿನ ಈ ಮನೋಹರ ಉದ್ಯಾನದಲ್ಲಿ, ಎಲ್ಲಿ ಕಲೆಯ ಅಭೂತಪೂರ್ವ ಉನ್ನತಿಯೂ, ಸೌಂದರ್ಯದ ಸ್ವಚ್ಛಂದವಿಕಾಸವೂ, ಭಾವುಕತೆಯ ಉದ್ಗಮವೂ ಆಗಿತ್ತೋ ಅಲ್ಲಿ ಕಲ್ಪನೆಯ ಹಾರಾಟಕ್ಕೇನೂ ಬಾಧೆಯಿರಲಿಲ್ಲ. ಮಧುರ ಮದಿರೆಯನ್ನು ಕುಡಿದು, ಪ್ರಚುರತೆಯಿಂದ ಹರಡಿದ ಪ್ರಾಕೃತಿಕ ಸೌಂದರ್ಯದಿಂದ ಕಣ್ಣು ಗಳನ್ನು ತೃಪ್ತಿಗೊಳಿಸಿ ಭಾವುಕರಾದ ಗ್ರೀಕ್ ಕವಿಗಳು ಮತ್ತು ಕಲಾಕಾರರು ತಮ್ಮ ಆದರ್ಶಗಳ ಸೃಷ್ಟಿಯಲ್ಲಿ ತೊಡಗಿದರು. ಮೊದಲು ದೇವತೆಗಳ ನಿವಾಸಸ್ಥಾನವಾದ 'ಓಲಂಪಸ್' ಕಲ್ಪಿಸಲ್ಪಟ್ಟಿತು. ಆ ಮೇಲೆ ಪ್ರೇಮ, ಸೌಂದರ್ಯ, ಪ್ರತಿಭೆ, ಸಂಗೀತ, ಕಲೆ ಮೊದಲಾದುವುಗಳ ಅಧಿಪತಿಗಳಾದ ದೇವತೆಗಳಿಗೆ ನಾಮ ಕರಣವಾಯಿತು. ಭಾರತೀಯ ಆರ್ಯರಂತೆಯೇ ಗ್ರೀಕರು ಕೂಡ ವರುಣ, ಯಮ, ಅಗ್ನಿ ಮೊದಲಾದವರ ಅಸ್ತಿತ್ವವನ್ನು ಮನ್ನಿಸಿ ದೇಶಕಾಲಾನುಸಾರ ಅವರನ್ನು ಹೆಸರು ಮತ್ತು ಗುಣಗಳಿಂದ ವಿಭೂಷಿತರನ್ನಾಗಿ ಮಾಡಿದರು. ಜೀಯಸ್ (Zeus) ಈ ಎಲ್ಲಾ ದೇವತೆಗಳಿಗೂ ಅಧಿಪತಿ ಅಂದರೆ 'ಇಂದ್ರ'ನಾಗಿದ್ದನು. ಹೇರಳು ಇಂದ್ರಾಣಿಯಾಗಿದ್ದು ಪಟ್ಟದ ರಾಣಿಯಾಗಿದ್ದಳು. ಇವಳಲ್ಲದೆ ಜೀಯಸ್ಸಿಗೆ ಆರು ಮಂದಿ ಬೇರೆ ರಾಣಿಯರಿದ್ದರು. ಹೇರಳು ಈರ್ಷ್ಯಾಲುವೂ ಕಲಹಪ್ರಿಯಳೂ ಆಗಿದ್ದಳು. ಗ್ರೀಕರ ದೇವತೆಗಳೆಂದರೆ ಮನುಷ್ಯರಿಗಿಂತ ಸ್ವಲ್ಪ ಮೇಲಿನ ದರ್ಜೆಯವರಷ್ಟೆ. ಮತ್ತೇನೂ ಇಲ್ಲ. ದೇವತೆಗಳೂ ಕೂಡ ಪ್ರೇಮೋನ್ಮತ್ತರಾಗುತ್ತಾರೆ. ಈರ್ಷ್ಯಾಗ್ನಿಯು ಅವರ ಹೃದಯದಲ್ಲಿ ಕೂಡ ಧಗಧಗಿಸುತ್ತಿತ್ತು. ಕ್ರೋಧವು ಅವರ ಮೂಗಿನ ಮೇಲೆ ಕುಣಿಯುತ್ತಿತ್ತು. ದೈವೀ ಅಧಿಕಾರ ಮತ್ತು ಅಮರತ್ವದಿಂದಾಗಿ ಇವರು ಇವುಗಳನ್ನು ಸಮಯಾಸಮಯಗಳ ವಿಚಾರವಿಲ್ಲದೆ ಪ್ರದರ್ಶಿಸುತ್ತಿದ್ದರು. ತಮ್ಮೊಳಗೆ ಮಾತ್ರವಲ್ಲ, ಮರ್ತ್ಯಲೋಕದ ಮನುಷ್ಯರ ಮೇಲೂ ಕೂಡ ಪ್ರೇಮ, ಪಕ್ಷಪಾತ, ಮತ್ಸರ ಮೊದಲಾದವುಗಳನ್ನು ಪ್ರದರ್ಶಿಸುತ್ತಿದ್ದರು. ಭೌತಿಕಸುಂದರಿಯರ ಪ್ರೇಮಪಾಶದಲ್ಲಿ ದೇವತೆಗಳು ಬದ್ಧರಾಗುತ್ತಾರೆ. ಈ ಸ್ತ್ರೀಯರಲ್ಲಿ ಸಂತಾನ ಉತ್ಪನ್ನವಾದರೆ ಆ ಸಂತಾನಕ್ಕೆ ಅರ್ಧ ದೇವತ್ವವನ್ನು ಕೊಡುತ್ತಾರೆ. ಇದಲ್ಲದೆ ವಿಶೇಷ ಪರಿಸ್ಥಿತಿಯಲ್ಲಿ ಮನುಷ್ಯರನ್ನು ದೇವತೆಗಳನ್ನಾಗಿ ಮಾಡಿ ಅಮರತ್ವವನ್ನು ಕೂಡ ಕೊಡಬಲ್ಲವರಾಗಿದ್ದರು.

ಇಂತಹ ವಿಷಯಗಳೊಂದಿಗೆ ವಿಶೇಷ ಸಂಬಂಧವುಳ್ಳವಳು ಪ್ರೇಮದ ಅಧಿಷ್ಠಾತ್ರಿಯಾದ ದೇವಿ ಅಫ್ರೋಡಾಯಿಟ್ ಯಾ ವೀನಸಳಾಗಿದ್ದಾಳೆ. ವೀನಸಳು ಇಂದ್ರನ ಪುತ್ರಿ ಲಕ್ಷ್ಮಿಯಂತೆ. ಈಕೆಯ ಪ್ರಾದುರ್ಭಾವವು ಸಮುದ್ರದಿಂದಾಯಿತು. ಈಕೆಯ ರಥವನ್ನು ಹಂಸಗಳು ಎಳೆಯುತ್ತವೆ. ಕ್ಯೂಪಿಡ್ ಯಾ ಕಾಮದೇವನು ಪ್ರೇಮದೇವಿಯ ಪುತ್ರನು. ಇದರ ಕಲ್ಪನೆಯನ್ನು ಕಲಾಕಾರರು ತಂತಮ್ಮ ಅಭಿರುಚಿಗನುಸಾರವಾಗಿ ಕಲ್ಪಿಸಿದ್ದಾರೆ. ಬಹು ಜನರು ಈತನನ್ನು ನಗ್ನನಟವರನನ್ನಾಗಿಯೂ ಕಣ್ಣಿಗೆ ವಸ್ತ್ರ ಕಟ್ಟಿಕೊಂಡು ಕೈಯಲ್ಲಿ ಧನುಸ್ಸನ್ನು ಹಿಡಿದುಕೊಂಡು ಬೆನ್ನಿನಲ್ಲಿ ತೂಣೀರ ಉಳ್ಳವನನ್ನಾಗಿಯೂ ಕಲ್ಪಿಸಿದ್ದಾರೆ.

ಇದೇ ಕ್ಯೂಪಿಡ್ ಅಥವಾ ಕಾಮದೇವನ ಹಾಗೆ ಒಬ್ಬ ಪಾರ್ಥಿವಸುಂದರಿಯಾದ ಸಾಯಿಕೆ (Psyche) ಅಥವಾ ರತಿಯ ಪ್ರೇಮದ ಅನುರಾಗಾಥೆಯು ಪ್ರೇಷಿತವಾಗಿದೆ. ಇದರ ಕಥಾನಕವು ಸುಂದರ ಮಾತ್ರವಲ್ಲ ದಾರ್ಶನಿಕತೆಯು ಅಧಿಕ ಹೃದಯಗ್ರಾಹಿಯಾಗಿದೆ. ಪ್ರೇಮವು ಭೇದಭಾವವನ್ನು ನೋಡುವುದಿಲ್ಲ. ಪ್ರೇಮದಲ್ಲಿ ಸಂದೇಹಕ್ಕೆ ಸ್ಥಾನವಿಲ್ಲ. ಸಂದೇಹ ಹುಟ್ಟಿದರೆ ಪ್ರೇಮಸೂತ್ರವು ತುಂಡಾದೀತು. ಆದರೆ ತ್ಯಾಗ ಮತ್ತು ಸಂಲಗ್ನತೆಯಲ್ಲಿ ಅಸಂಭವವನ್ನು ಸಂಭವನನ್ನಾಗಿ ಮಾಡುವ ಶಕ್ತಿಯಿದೆ. ಈ ಪ್ರೇಮಗಾಥಾ ದ್ವಾರಾ ಅಮರತ್ವವು ಕೂಡ ಪ್ರಾಪ್ತವಾದೀತು.

ಗ್ರೀಕಿನ ಪ್ರತಾಪಿಯಾದ ರಾಜನೊಬ್ಬನಿಗೆ ಮೂವರು ಪುತ್ರಿಯರಿದ್ದರು. ಅವರಲ್ಲಿ ಇಬ್ಬರನ್ನು ಯೋಗ್ಯ ವರರಿಗೆ ಮದುವೆ ಮಾಡಿಕೊಟ್ಟಿದ್ದನು. ಆದರೆ ಸಣ್ಣವಳೂ ಸುಂದರಿಯೂ ಆದ ಸಾಯಿಕೆಯು ಅವಿವಾಹಿತಳಾಗಿದ್ದಳು. ಆಕೆಯ ಹೆಸರು ಬಹು ದೂರದ ವರೆಗೆ ಹರಡಿತು. ಆಕೆಯ ಸೌಂದರ್ಯವನ್ನು ನೋಡಲು ದೂರದೂರದಿಂದ ಭಾವುಕ ಜನರು ಬರುತ್ತಿದ್ದರು. ಆದರೆ ಅವರ ಹೃದಯದಲ್ಲಿ ವಾಸನೆಯ ಲವಲೇಶವೂ ಇಲ್ಲದೆ ಶ್ರದ್ಧೆಯಿತ್ತು. ಈ ಸೌಂದರ್ಯಪೂಜೆಯು ವೃದ್ಧಿಹೊಂದುತ್ತಾ ಹೊಂದುತ್ತಾ ಪ್ರೇಮದ ಅಧಿಷ್ಠಾತ್ರಿಯಾದ ವೀನಸ್ಸಿನ ಮಂದಿರದಲ್ಲಿ ಪೂಜೆಯು ಬಂದಾಯಿತು. ಉಪಾಸಕರು ಬಂದು ಈ ಜೀವಂತ ಸೌಂದರ್ಯ ಪ್ರತಿಮೆಯನ್ನು ಪೂಜಿಸತೊಡಗಿದರು. ವೀನಸ್ಸಿಗೆ ಈರ್ಷ್ಯೆ ಹುಟ್ಟಿ ಆಕೆಯು ಕ್ಯೂಪಿಡ್ ಅಥವಾ ಕಾಮದೇವನ ಸಹಾಯ ಬೇಡಿದಳು.

ತಾಯಿಮಕ್ಕಳು ತಂತ್ರ ಹೂಡಿದರು. ಕಾಮದೇವನು ಸಾಯಿಕೆಗೆ ಪುಷ್ಪಾಸ್ತ್ರ ಬಿಟ್ಟು ಅತ್ಯಂತ ನೀಚನೂ ಘೃಣಾಸ್ಪದನೂ ಆದ ಪುರುಷನಲ್ಲಿ ಪ್ರೇಮ ಉತ್ಪನ್ನವಾಗುವಂತೆ ಮಾಡಬೇಕೆಂದು ನಿಶ್ಚಯವಾಯಿತು. ಆಕೆಯು ಅಂತಹನನ್ನು ಮದುವೆಯಾಗಿ ಆಕೆಯ ಅರ್ಧವಿಕಸಿತಸೌಂದರ್ಯಜೀವನವು ಅಸಮಯದಲ್ಲಿ ಸಮಾಪ್ತಿಯಾಗಬೇಕು.

ಆದರೆ ಬಾವಿ ತೋಡುವವನೇ ಬಾವಿಗೆ ಬೀಳಬೇಕಾಗುತ್ತದೆಂದು ಕೆಲವು ಸಲ ಅವನಿಗೆ ಗೊತ್ತಾಗುವುದಿಲ್ಲ. ಕಾಮದೇವನ ಅವಸ್ಥೆಯೂ ಹಾಗೆಯೇ ಆಯಿತು. ಪುಷ್ಪಾಸ್ತ್ರಗಳಿಂದ ಆಕೆಯನ್ನು ಹೊಡೆಯಬ್ಬೇಕೆಂದು ಬಂದ ಕಾಮದೇವನು ಆಕೆಯ ಕಟಾಕ್ಷಪಾತದಲ್ಲಿ ಸಿಲುಕಿಕೊಂಡಿದ್ದನು. ಆಕೆಯ ಸೌಂದರ್ಯದಲ್ಲಿ ಅಂತಹ ಮೋಹಕತೆಯಿತ್ತು. ತನ್ನ ತಾಯಿಯನ್ನು ಮರೆತು ಕಾಮದೇವನು ತಾನು ಈಕೆಯ ಸೌಂದರ್ಯವನ್ನಲ್ಲದೆ ಇನ್ನೇನನ್ನೂ ಪಾನವಾಡಲಿಕ್ಕಿಲ್ಲವೆಂದು ಪ್ರತಿಜ್ಞೆ ಮಾಡಿದನು.

ಫಲತಃ ಕಾಮದೇವನು ಸಾಯಿಕೆಯು ಯಾರಾದರೊಬ್ಬನನ್ನು ಪ್ರೀತಿಸುವಂತೆ ಮಾಡುವುದಕ್ಕಾಗಿ ತನ್ನ ಸಾಯಕಗಳನ್ನು ಪ್ರಯೋಗಿಸಲಿಲ್ಲ. ದೂರದೂರದ ಪ್ರಸಿದ್ಧ ರಾಜಕುಮಾರರು ಬಂದು ಆಕೆಯನ್ನು ನೋಡಿ ಈ ಸೌಂದರ್ಯವು ಪೂಜಾರ್ಹವಾದುದೇ ವಿನಾ ಉಪಯೋಗಕ್ಕರ್ಹವಾದುದಲ್ಲವೆಂದು ಹಿಂದಿರುಗುತ್ತಿದ್ದರು. ಸಾಯಿಕೆಯ ತಂದೆತಾಯಿಗಳು ಜ್ಯೋತಿಷಿಗಳೊಡನೆ ನಿಮಿತ್ತ ಕೇಳಿದರು. ಅದಕ್ಕವರು 'ಸಾಯಿಕೆಯನ್ನು ನವವಧುವಿನಂತೆ ಶೃಂಗರಿಸಿ ಒಂದು ಉತ್ತುಂಗ ಪರ್ವತದ ಮೇಲೆ ಬಿಡಬೇಕೆಂದೂ ಅಲ್ಲಿ ದೇವತೆಯಿಂದಲೂ ಅಧಿಕನಾದವನು ವಿವಾಹವಾಗುತ್ತಾನೆಂದೂ, ಸೌಂದರ್ಯದ ಅಧಿದೇವತೆಯೊಂದಿಗೆ ಸ್ಪರ್ಧೆಗೆ ನಿಲ್ಲುವ ಈ ರಮಣೀರತ್ನವನ್ನು ಸಾಮಾನ್ಯಮಾನವನು ವರಿಸಲು ಸಾಧ್ಯವಿಲ್ಲವೆಂದೂ' ಹೇಳಿದರು.

ದೇವವಾಣಿಯ ಅವಹೇಳನಮಾಡುವ ಸಾಮರ್ಥ್ಯವು ಯಾರಲ್ಲಿದೆ? ವಸ್ತ್ರಾಲಂಕಾರಭೂಷಿತಳಾದ ಈ ಸುಂದರಿಯನ್ನು ಪರ್ವತಶಿಖರದ ಮೇಲೆ ನಿರ್ಜನಪ್ರದೇಶದಲ್ಲಿ ಕೊಂಡುಹೋಗಿ ಒಬ್ಬಳನ್ನೇ ಬಿಟ್ಟು ಬಂದರು.

ಭವಿಷ್ಯವಾಣಿಯ ಅನುಸಾರವಾಗಿ ಇಂದು ಸಾಯಿಕೆಯ ವಿವಾಹದ ಮೊದಲನೇ ರಾತ್ರಿಯು. ಆಕೆಯು ಆ ಭಯಾನಕ ನಿರ್ಜನಪ್ರದೇಶದಲ್ಲಿ ತನ್ನನ್ನು ಯಾವುದಾದರೂ ಹಿಂಸ್ರಪ್ರಾಣಿಯು ಎದುರಿಸಿದರೆ ಏನು ಮಾಡಲಿ ಎಂದು ಚಿಂತಿಸುತ್ತಾ ಚಿಂತಿಸುತ್ತಾ ನಿದ್ರಿಸಿದಳು. ದೇವತೆಗಳು ಕಳುಹಿಸಿದಂತಹ ಸುಗಂಧವಾಯುವೊಂದು ಬಂದು ಆಕೆಯನ್ನು ಹಾರಿಸಿಕೊಂಡು ಹೋಗಿ ಸ್ವರ್ಗದಲ್ಲಿರುವ ಕಾಮದೇವನ ಆನಂದ ಮಹಲಿಗೆ ತೆಗೆದುಕೊಂಡು ಹೋಗಿ ಅಲ್ಲಿ ಪುಷ್ಪಶಯ್ಯೆಯ ಮೇಲೆ ಮಲಗಿಸಿತು. ಸಾಯಿಕೆಯು ರಾತ್ರೆ ಇಡೀ ನಿದ್ರಿಸಿ ಪ್ರಾತಃಕಾಲದಲ್ಲೆಚ್ಚತ್ತಳು.

ನಾಲ್ಕು ಕಡೆಗೂ ಆಶ್ಚರ್ಯಜನಕ ದೃಶ್ಯವಿತ್ತು. ಶ್ವೇತ ಶಿಲಾಭವನದ ಸಮೀಪದಲ್ಲಿ ಕಲಕಲ ಧ್ವನಿಯಿಂದ ನದಿಯೊಂದು ಹರಿಯುತ್ತಿತ್ತು. ಋತುರಾಜನು ವಾಸಿಸುವ ಉದ್ಯಾನದ ಶೋಭೆಯನ್ನು ಏನೆನ್ನಲಿ! ಗೋಡೆಗಳಲ್ಲಿ ರತ್ನಖಚಿತ ಚಿತ್ರಗಳೂ ಮಾಡಿನಲ್ಲಿ ಬಂಗಾರದ ತಗಡುಗಳೂ ಇದ್ದುವು. ಸಾಯಿಕೆಯು ಮನಸ್ಸಿನಲ್ಲೇ 'ಎಂತಹ ಮಧುರ ಸ್ವಪ್ನವಿದು? ಇದು ಎಷ್ಟರ ತನಕ ಉಳಿದೀತು?' ಎಂದು ಆಲೋಚಿಸಿದಳು.

ಆಶ್ಚರ್ಯವೆಂದರೆ ಅನಂಗನ ಈ ಕ್ರೀಡಾಸ್ಥಳದಲ್ಲಿ ಒಂದೇ ಒಂದು ಸಾಕಾರಪ್ರಾಣಿಯಿರಲಿಲ್ಲ. ಅಕಸ್ಮಾತ್ತಾಗಿ ಮನಸ್ಸಿನ ವಿಚಾರಗಳು ಶಬ್ದಮೂಲಕ ಹೊರಗೆ ಬಂದು ಮುಗ್ಧಳಾದ ಸಾಯಿಕೆಯು ಹೇಳುತ್ತಾಳೆ—'ಇದು ಯಾವ ವೈಭವವು? ಈ ಪ್ರಾಸಾದದ ಭಾಗ್ಯಶಾಲೀ ಅಧಿಪತಿಯು ಯಾರು?' ವೀಣಾವಿನಿಂದಿತ ಅದೃಶ್ಯ ಸ್ವರವೊಂದು ಉತ್ತರಕೊಟ್ಟಿತು.—'ಇದರ ಅಧಿಷ್ಠಾತ್ರಿಯು ನೀನೇ ಸರಿ, ನಾವು ನಿನ್ನ ಸೇವಕರು, ಏನು ಬೇಕೋ ಆಜ್ಞಾಪಿಸು.'

ಈ ಅದೃಶ್ಯ ಅನುಚರರು, ಇವಳಿಗೆ ಸ್ನಾನ ಮಾಡಿಸಿ, ಸ್ವಾದುಭೋಜನವನ್ನೂಟ ಮಾಡಿಸಿ, ಸುಗಂಧಿತ ಬೀಸಣಿಗೆಗಳಿಂದ ಗಾಳಿ ಬೀಸಿ ಹಂಸತೂಲಿಕಾತಲ್ಪದಲ್ಲಿ ಮಲಗಿಸಿ ನಿದ್ರೆ ಮಾಡಿಸಿದರು. ಮತ್ತು ಮಧುರ ಸಂಗೀತವನ್ನು ಹಾಡಿ ಆಕೆಯನ್ನು ಎಬ್ಬಿಸಿದರು. ಈ ಪ್ರಕಾರ ಹಗಲು ಕಳೆದು ರಾತ್ರಿಯಾಯಿತು.

ಶಯನಗೃಹವು ರತಿಕಾಮದೇವರಿಗೆ ಯೋಗ್ಯವಾಗುವಂತೆ ಸಜ್ಜಾಗಿತ್ತು. ದುಗ್ಧಫೇನದಂತಿರುವ ಶ್ವೇತಶಯ್ಯೆಯ ಮೇಲೆ ಕಾಲಿಡುತ್ತಲೇ ಸಾಯಿಕೆಯ ಹೃದಯವು ಆನಂದದಿಂದ ನರ್ತಿಸಿತು. ಉತ್ಸುಕತೆಯಿಂದ ಆಕೆಯ ಹೃದಯವು ಅರಳಿತು, ಇಂದು ಯಾರು ಆಕೆಯ ಜೀವನಕಲಿಕೆಯನ್ನು ಪ್ರಸ್ಫುರಿತನನ್ನಾಗಿ ಮಾಡಿಯಾನು? ಯಾರು ಅವಳ ಭಾಗ್ಯಕ್ಕೆ ಸ್ವಾಮಿಯಾದಾನು?

ಅಕಸ್ಮಾತ್ತಾಗಿ ರತ್ನಸ್ತಂಭದೀಪವು ಮಂದವಾಗಿ ಸಮೀಪದಲ್ಲೇ ಒಂದು ಛಾಯೆಯು ಬಂದಂತಾಯಿತು. ಮೃದುಲ ಚುಂಬನಗಳಿಂದ ಆಕೆಯು ಸ್ವರ್ಗೀಯ ಸುಖವನ್ನು ಹೊಂದಿ ತನ್ನನ್ನು ತಾನೇ ಮರೆತಳು. ಯಾವನೋ ಒಬ್ಬನ ಬಾಹುಪಾಶಗಳಿಂದ ಬಂಧಿತಳಾಗಿ ಆತನ ಹೃದಯಹಾರವಾಗಿ ಮಾಡಲ್ಪಟ್ಟಳು. ಇಷ್ಟರಲ್ಲಿ—'ಸುಭಗೆ! ನಾನು ನಿನ್ನ ಪತಿಯು, ನನ್ನ ಹೆಸರು ಕೇಳಬೇಡ, ನನ್ನ ರೂಪರಾಶಿಯನ್ನು ನೋಡಲು ಆಶಿಸಬೇಡ, ಕೇವಲ ನನ್ನ ಅಚಲಪ್ರೇಮದ ಮೇಲೆ ವಿಶ್ವಾಸವಿಡು. ಹೀಗೆ ಮಾಡಿದರೆ ನಿನ್ನ ಮತ್ತು ನನ್ನ ಕಲ್ಯಾಣವಾದೀತು!' ಎಂದು ಒಂದು ಅವ್ಯಕ್ತ ಮಧುರ ಸ್ವರವು ಕೇಳಿಸಿತು.

ಸಾಯಿಕೆಯು—ಯಾರನ್ನು ನಾವು ರತಿದೇವಿಯೆಂದು ಕರೆಯುತ್ತೇವೆಯೋ ಆಕೆಯು—ತನ್ನ ಹೃದಯವನ್ನು ಆತನಿಗೆ ಸಮರ್ಪಿಸಿದಳು. ಪ್ರೇಮಭರಿತ ಶಬ್ದಗಳಿಂದ ರತಿಯ ಅದೃಶ್ಯಪತಿಯು ತನ್ನ ಪ್ರೇಮಗಾಥೆಯನ್ನು ಆಕೆಯ ಮುಂದೆ ಹಾಡಿದ್ದನು ಬೆಳಗಾಗುವುದಕ್ಕೆ ಮೊದಲೇ ಈ ರಹಸ್ಯಮಯ ಪ್ರೇಮಿಯು ರಾತ್ರೆಗೆ ಬರುತ್ತೇನೆಂದು ನಂಬಿಗೆಯಿತ್ತು ಹೊರಟುಹೋದನು.

ಪ್ರತಿನಿತ್ಯ ಹೀಗೆ ಆಗುತ್ತಿತ್ತು. ರತಿಯು ಕಣ್ಣೀರು ತುಂಬಿಕೊಂಡು ತನ್ನ ಪತಿಯು ಹಗಲು ಕೂಡ ತನ್ನೊಡನಿರಬೇಕೆಂದು ಅನುರೋಧಿಸುತಿದ್ದಳು. ಆದರೆ ಆತನು ತನ್ನ ನಿಶ್ಚಯದಿಂದ ಎಳ್ಳಷ್ಟೂ ಅಲುಗಾಡಲಿಲ್ಲ. ಸಾಯಿಕೆಗೆ ಎಷ್ಟು ಉತ್ಕಂಠೆಯಿದ್ದರೂ ಪತಿಯ ಮುಖದರ್ಶನವಾಗುತ್ತಿರಲಿಲ್ಲ. ಪ್ರತಿದಿನವೂ ಆಕೆಗೆ—'ನಾನು ಯಾರಾದರೇನು? ನನ್ನ ಚಿಂತೆಯನ್ನು ಬಿಡು, ಪ್ರೇಮದ ಮೇಲೆ ವಿಶ್ವಾಸವಿಡು' ಎಂಬ ಉತ್ತರವು ಬರುತ್ತಿತ್ತು.

ಈಗ ರತಿಗೆ ಆಲಸ್ಯವಾಗತೊಡಗಿತು. ಒಬ್ಬಳೇ ಕುಳಿತು ಕುಳಿತು ಆಕೆಗೆ ತನ್ನ ಅಕ್ಕಂದಿರ ನೆನಪಾಗತೊಡಗಿತು. ಒಂದು ದಿನ ರಾತ್ರಿ ಆಕೆಯು ತನ್ನ ಪತಿಯೊಡನೆ ತನ್ನ ಅಕ್ಕಂದಿರನ್ನು ಕರ

(೬ನೇ ಪುಟಕ್ಕೆ ಮುಂದರಿಸಿದೆ)

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.

"ಗೋನೋಕಿಲರ್"

(ರಿಜಿಸ್ಟರ್ಡ್)

ಡಾ. ಜಸಾನಿಯವರ
ಜಗತ್ಪ್ರಸಿದ್ಧ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

GONO KILLER

ಇಂದಿನ ಆಧುನಿಕ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ಸಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅಸುಧವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರಪಥದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವಿಕೆ ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ ೫೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಖರ್ಚು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ,
ಗಿರಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer: Dr. D. N. JASANI,
GIRGAUM BACK ROAD, BOMBAY 4.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ:—ಇದು ವೃನರ್ವಸು ಅತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟಿದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—2—0. ಅಂಚೆಯ ವೆಚ್ಚ ಬೇರೆ.

ಜೃವನಪ್ರಾಶ:—ಜೃವನನೆಂಬ ವೃದ್ಧ ಮಹರ್ಷಿಗೆ ಅಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3—0—0 ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಪ್ರಾಣಂತಿಯರ ನವಜೀವನಕ್ಕೆ ಸಂದನ
ವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಸಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭ ಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

೩ ದಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ ರೂ. 2-0-0. ಪೋಸ್ಟೇಜು ವಗೈರೆ ಬೇರೆ

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ, ಮಂಗಳೂರು, ದ. ಕನ್ನಡ.

THE RADHA BANK, LTD.
MANGALORE. (*Branch*)
'TEMPLE VIEW' GANAPATHI TEMPLE ST., WEST.

ದಿ ರಾಧಾ ಬೇಂಕ್, ಲಿಮಿಟೆಡ್,
ಮಂಗಳೂರು. (ಬ್ರಾಂಚ್)
'ಟೆಂಪಲ್ ವ್ಯೂ' ಗಣಪತಿ ಟೆಂಪಲ್ ರಸ್ತೆ.

ಚಾಲ್ತಿ ಠೇವಣಾತಿಗಳು ಸಾ। ಶೇ। 2½.
ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ। ಶೇ। 4.
ಕಾಯಂ ಠೇವಣಾತಿಗಳು.
3 ತಿಂಗಳ ಬಾಬ್ತು ಸಾ। ಶೇ। 3. 6 ತಿಂಗಳ ಬಾಬ್ತು ಸಾ। ಶೇ। 4½. 12 ತಿಂಗಳ ಬಾಬ್ತು ಯಾ ಅದರ ಮೇಲೆ ಸಾ। ಶೇ। 6
ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುತ್ತವೆ.
ಚಿನ್ನಾಭರಣಗಳ ಈಡಿನ ಮೇಲೆ ಸಾಲಗಳನ್ನು ಕೂಡಾ ಕೊಡುತ್ತದೆ.
H. S. RAMA RAO, *Manager.*




ಹರಳೆಣ್ಣೆಯೊಡನೆ
CASTOPHENE
COMPOUND
CASTOR OIL
CHOCOLATES
A delicious Chocolate Laxative.
ಕ್ಯಾಸ್ಟೊಫೇನಿನೊಡನೆ
ಕೆಸ್ಟೊಫೇನ್
ಹರಳೆಣ್ಣೆಯಿಂದ ಮಕ್ಕಳಿಗೆ ಎಷ್ಟೊಂದು ದುಃಖ! ಈಗ ಅದನ್ನು ಕೊಡಬೇಕಾಗಿಲ್ಲ. ಕಾರಣ, ವಿಜ್ಞಾನಿಗಳು ಅದರ ಬದಲು ಆದರ್ಶಪ್ರಾಯದ ಇನ್ನೊಂದನ್ನು ಪೂರ್ಣಮಾಡಿದ್ದಾರೆ—ಕೆಸ್ಟೊಫೇನ್ ಕೇಸ್ಟರ್ ಆಯಿಲ್ ಚಾಕೊಲೆಟ್‌ಗಳು. ಸೇವನೆಗೆ ಮಿಠಾಯಿಯಷ್ಟು ರುಚಿಯಾದ ಈ ಭೇದಿಯ ಬಿಲ್ಲೆಗಳನ್ನು ಡಾಕ್ಟರರೂ, ನರ್ಸುಗಳೂ ಅದರ ಸಂಪೂರ್ಣ ಆದರೆ ವೃದುವಾದ ಕೆಲಸಕ್ಕಾಗಿ ಹೆಚ್ಚು ಶಿಫಾರಸು ಮಾಡುತ್ತಾರೆ. ಇದು, ಮಕ್ಕಳಷ್ಟೇ, ಪ್ರಾಯಸ್ಥರಿಗೂ ಆದರ್ಶಪ್ರಾಯವಾಗಿದೆ. ಯಾವಾಗಲೂ ಒಂದು ಬಾಟಲಿ ಕೈಯಲ್ಲಿಟ್ಟುಕೊಳ್ಳಿ.
CASTOPHENE
CASTOR OIL CHOCOLATES

ಕೇರಳ ಗಂಧದ ಸಾಬೂನು

ಉತ್ಕೃಷ್ಟವಾದ ಸಾಧನಗಳಿಂದ ಯೋಗ್ಯರಾದ ಹಿಂದೀ ರಸಾಯನ ಶಾಸ್ತ್ರ ಪಂಡಿತರಿಂದ ಸಿದ್ಧವಾಗುತ್ತವೆ.

ಚೀಫ್ ರೆಪ್ರೆಸೆಂಟೇಟಿವ್:—ಆರ್. ಸಿ. ಬಲಾಲ್, ಕಲ್ಲಿಕೋಟೆ.

ದಿ ಝಾಂಡು ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಮುಂಬಾಯಿ

ಜೀವಕಾಲದಲ್ಲೆಲ್ಲ ಆರೋಗ್ಯವಾಗಿರಲಿಕ್ಕೂ, ಆರೋಗ್ಯಕರವಾದ ದೀರ್ಘ ಜೀವನಕ್ಕೂ
ಝಾಂಡೂರವರ ಕೇಸರೀ ಜೀವನವನ್ನೇ ಸೇವಿಸಲು ಆರಂಭಿಸಿರಿ.
ನೂತನ ದೇಹದಾರ್ಢ್ಯವನ್ನೂ, ಹೊಸ ಶಕ್ತಿಯನ್ನೂ, ಧಾರಾಳವಾದ ರಕ್ತವನ್ನೂ ಉಂಟುಮಾಡುವ ಆದರ್ಶಪ್ರಾಯವಾದ 'ಟಾನಿಕ್' ಇದು.

ಝಾಂಡೂರವರ ಕೇಸರೀ ಜೀವನ

ಇದು, ವಕೀಲರು, ವಿದ್ಯಾರ್ಥಿಗಳು, ಪ್ರೊಫೆಸರುಗಳು ಇವರೇ ಮೊದಲಾದ ಮೆದುಳಿನ ಕೆಲಸ ಮಾಡುವವರಿಗೂ ಬಹಳ ಉಪಯೋಗಕರವಾಗಿದ್ದು ಅವರ ಮೆದುಳಿನ ಶಕ್ತಿಯನ್ನು ಹೆಚ್ಚಿಸುವುದೂ ಅಲ್ಲದೆ, ಜ್ಞಾಪಕಶಕ್ತಿಯನ್ನೂ ವೃದ್ಧಿಗೊಳಿಸುತ್ತದೆ.

1 ಪೌಂಡಿನ ಬಾಟ್ಲಿ 1ಕ್ಕೆ ರೂ. 5—0—0. ½ ಪೌಂಡು ರೂ. 2—12—0.
" ¼ ಪೌಂಡು ರೂ. 1—9—0.

ನಮ್ಮ ಸೋಲ್ ಏಜಂಟರಲ್ಲಿ ದೊರಕುತ್ತವೆ. ನಮ್ಮ ಸಬ್ ಏಜಂಟರುಗಳಲ್ಲಿಯೂ ದೊರಕುತ್ತವೆ:—
(1) ಷಾ ಅಂಡ್ ಕೋ., ಡೈನುಂಡ್ ಬಿಲ್ಡಿಂಗ್ಸ್, ಮುಂಗಳೂರು.
(2) ಪಿ. ಎ. ಪೈ ಬ್ರದರ್ಸ್, ಉಡುಪಿ. (3) ವಿ. ವಿ. ಶೆಣೈ, ಕಾರ್ಕಳ.
ಏಜೆನ್ಸಿ ಪತ್ರುಗಳಿಗೆ ಸೋಲ್ ಏಜೆಂಟರಿಗೆ ಬರೆದುಕೊಳ್ಳಿ:—
ದಾಮೋದರ್ ಅಂಡ್ ಕೋ., 78, ಚೈನಾ ಬಜಾರ್ ರೋಡ್, ಮದ್ರಾಸ್.

'ಕಂಠೀರವ' ಪತ್ರಿಕೆಗೆ ಇಂದೇ ಚಂದಾದಾರರಾಗಿರಿ!

(೪ನೇ ಪುಟದಿಂದ)

ತೆರಬೇಕೆಂದು ಹಟತೊಟ್ಟಳು. ಆಗ ಪತಿಯು 'ಅವರನ್ನು ಕರತರುವುದು ಬೇಡ. ಅವರನ್ನು ಕರತಂದರೆ ನನ್ನ ಗುಟ್ಟನ್ನು ಕೇಳ್ತಾರು. ಆಗ ನಿನಗೆ ಕಷ್ಟವಾದೀತು' ಎಂದನು. ಆದರೆ ರತಿಯ ಹಟವು ಕಾಮದೇವನನ್ನು ಕೂಡ ಸೋಲಿಸಿತು. ಆತನು ರತಿಯನ್ನು ಕರೆಯಲಿಕ್ಕೆ ಕಳುಹಿಸಿದ ವಾಯುವನ್ನೇ ಆಕೆಯ ಅಕ್ಕಂದಿರನ್ನೂ ಕರೆಯಲಿಕ್ಕೆ ಕಳುಹಿಸಿದನು. ಬೆಳಗಾಗುತ್ತಲೆ ಆಕೆಯ ಅಕ್ಕಂದಿರು ಆಕೆಗೆ ದೊರಕಿದರು. ರತಿಯು ಅಕ್ಕಂದಿರನ್ನು ಕಂಡು ಆನಂದಗೊಂಡಳು. ಮತ್ತು ಪ್ರತಿಯೊಂದು ವಸ್ತುಗಳನ್ನೂ ಪ್ರೀತಿಯಿಂದ ತೋರಿಸತೊಡಗಿದಳು. ಆ ಅಕ್ಕಂದಿರು ಒಂದು ಬದಿಯಿಂದ ಪ್ರೇಮವನ್ನೂ ಮತ್ತೊಂದು ಬದಿಯಿಂದ ಈರ್ಷ್ಯೆಯನ್ನೂ ತೋರಿಸುತ್ತಾ ಬಂದರು. ಇಬ್ಬರು ಪ್ರೇಮಿಗಳೆ ಭಾಗ್ಯಾಕಾಶವನ್ನು ಮುಚ್ಚುವಂತಹ ಕಾಲಮೇಘವು ಇದೇ ಕಾಲದಲ್ಲಿ ಉತ್ಪನ್ನವಾಯಿತು.

ಇಬ್ಬರು ಅಕ್ಕಂದಿರೂ ಬಹಳ ಉತ್ಸುಕತೆಯಿಂದ ಸಾಯಿಕೆಯು ವೈಭವಶಾಲಿಯಾದ ಪತಿಯ ಹೆಸರನ್ನು ಕೇಳಿ ಆತನನ್ನು ನೋಡಬೇಕೆಂಬ ಇಚ್ಛೆಯನ್ನು ತೋರಿಸಿದರು. ಸಾಯಿಕೆಯು ಇಂದು ಮೊದಲನೆಯ ಬಾರಿ ದುಃಖಿತಳಾದಳು. ಆಕೆಯು ತನ್ನ ಅಕ್ಕಂದಿರಿಗೆ 'ತನ್ನ ಗಂಡನು ಅತಿ ಸುಂದರನಾದ ರಾಜಕುಮಾರನೆಂದೂ ಆತನು ಹಗಲಿಡೀ ಬೇಟೆಯಾಡಿ ರಾತ್ರೆ ಬರುತ್ತಾನೆ'ಂದೂ ತಿಳಿಸಿ ಎಲ್ಲಿಯಾದರೂ ತನ್ನ ಗುಟ್ಟು ಅಕ್ಕಂದಿರಿಗೆ ತಿಳಿಯಬಾರದೆಂದು ಅವರಿಗೆ ಅನೇಕ ವಸ್ತುಗಳನ್ನು ಉಪಹಾರವಿತ್ತು ಕಳುಹಿಸಿಕೊಟ್ಟಳು.

ಆದರೆ ಎರಡನೇ ದಿನ ಆ ಅಕ್ಕಂದಿರು ತಂಗಿಯ ರಹಸ್ಯವನ್ನು ತಿಳಿಯಲಿಕ್ಕಾಗಿ ಪುನಃ ಬಂದರು. ಮಧುರಮಧುರ ವಚನಗಳಿಂದ ಈ ಅಬೋಧ ಬಾಲಿಕೆಯನ್ನು ಮರುಳುಗೊಳಿಸಿ ಈ ಸಲ 'ಆಕೆಯ ಗಂಡನು ಒಬ್ಬ ವ್ಯಾಪಾರಿಯೆಂದೂ ಆತನು ಹಗಲಿಡೀ ವ್ಯಾಪಾರಮಾಡಿ ರಾತ್ರೆಗೆ ಬರುತ್ತಾನೆಂದೂ' ತಿಳಿದರು. ಈಗ ಅಕ್ಕಂದಿರಿಗೆ ತಮ್ಮ ತಂಗಿಯ ಗಂಡನ ವಿಷಯವಾಗಿ ಏನೋ ಗುಟ್ಟುಮಾಡುತ್ತಾಳೆಂದೂ ಸಂಶಯಪಟ್ಟರು. ಸಾಯಂಕಾಲವಾಗುತ್ತಲೇ ಅಕ್ಕಂದಿರಿಗೆ ವಸ್ತ್ರಾಭರಣಗಳ ಉಪಹಾರವಿತ್ತು ತಂಗಿಯು ಕಳುಹಿಸಿಬಿಟ್ಟಳು.

ಮೂರನೆಯ ದಿನ ಭಾವೀ ಅಮಂಗಲದ ಆಶಂಕೆಯಿಂದ ರತಿಯ ರಹಸ್ಯಮಯ ಪತಿಯು ಆಕೆಯನ್ನು ಬಾಹುಪಾಶದಿಂದ ಬಂಧಿಸಿಕೊಂಡು 'ನಿನ್ನ ಅಕ್ಕಂದಿರು ನಿನಗೆ ಪ್ರಲೋಭನ ತೋರಿಸಿ, ನೀನು ನನ್ನ ಮುಖದರ್ಶನಮಾಡಬೇಕೆಂದು ಆಗ್ರಹ ತೊಟ್ಟಾರು. ಆದರೆ ಅದೆ ನಮ್ಮ ಸುಖಸ್ವಪ್ನದ ಅಂತ್ಯವೆಂದು ತಿಳಿ; ಆದುದರಿಂದ ನೀನು ಜಾಗ್ರತೆಯಿಂದ ಇರಬೇಕು' ಎಂದು ತಿಳಿಸಿದನು. ರತಿಯು ತಾನು ಯಥಾಶಕ್ತಿಯಾಗಿ ಪ್ರಯತ್ನಿಸುತ್ತೇನೆಂದು ತನ್ನ ಕಣ್ಣುಗಳಿಂದಲೇ ಮೂಕಸ್ವೀಕೃತಿಯನ್ನಿತ್ತಳು.

ಭಾಗ್ಯಚಕ್ರವು ಯಾವಾಗಲೂ ತಿರುಗುತ್ತಲೇ ಇರುತ್ತದೆ. ಮೂರನೇ ದಿನ ಅಕ್ಕಂದಿರು ಬಂದು ಆಕೆಗೆ ಆಶೆ ತೋರಿಸಿ ಆಕೆಯ ಪತಿಯ ಮುಖವನ್ನು ಆಕೆಯು ಇಷ್ಟರ ವರೆಗೂ ನೋಡಿಲ್ಲವೆಂದು ಹೇಳಿಸಿದರು. ಆಗ ಅಕ್ಕಂದಿರು ಹೇಳುತ್ತಾರೆ— 'ಸಾಯಿಕೆ! ನೀನು ಯಾವನೋ ಒಬ್ಬ ಭಯಂಕರ ರಾಕ್ಷಸನನ್ನು ತನ್ನ ಪತಿಯೆಂದು ತಿಳಿದುಕೊಂಡಿದ್ದಿ. ನಿನ್ನ ಗಂಡನು ಸುಂದರಾಕೃತಿಯೂ ಒಳ್ಳೆಯವನೂ ಆಗಿದ್ದರೆ ಆತನಿಗೆ ತನ್ನ ಪರಿಚಯವನ್ನು ಹೇಳಿದರೆ ಬರುವ ನಷ್ಟವೇನು? ಈ ಮಾಯಾಜಾಲದಿಂದ ಬಿಡುಗಡೆ ಹೊಂದಿ ಭಾವೀ ನರಕಯಾತನೆಯಿಂದ ಬದುಕಿಕೊ.'

ಸಾಯಿಕೆಯು ಭಯಭೀತಳಾಗಿ 'ತಾನೇನು ಮಾಡಲಿ' ಎಂದಳು.

'ಸಾಯಿಕೆ! ನೀನು ರಾತ್ರೆ ಮಲಗುವಾಗ ನಿನ್ನ ಹಾಸಿಗೆಯ ಸವಿೂಪದಲ್ಲಿ, ಒಂದು ದೀಪವನ್ನೂ ಒಂದು ಕತ್ತಿಯನ್ನೂ ಇಟ್ಟುಕೊಳ್ಳಬೇಕು. ಅವನು ಬಂದಾಗ ದೀಪ ಹೊತ್ತಿಸಿ ಆತನ ರೂಪವನ್ನು ನೋಡಬೇಕು. ಆತನು ಖಂಡಿತವಾಗಿ ಒಬ್ಬ ರಾಕ್ಷಸನು. ನಿನ್ನ ಕೈಯಲ್ಲಿದ್ದ ಕತ್ತಿಯು ಆತನ ಪ್ರಾಣಗಳನ್ನು ತೆಗೆದೀತು. ಆಗ ನಿನ್ನ ರಕ್ಷಣೆಯಾಗುತ್ತದೆ' ಎಂದು ಅಕ್ಕಂದಿರು ಉಪದೇಶವಿತ್ತರು.

ಸುಖದಲ್ಲಿ ತೇಲಾಡುತ್ತಿದ್ದ ಸಾಯಿಕೆಯ ಹೃದಯದಲ್ಲಿ ತಳಮಳವೆಬ್ಬಿಸಿ ಆಕೆಯ ಸ್ವರ್ಗಸಂಸಾರವನ್ನು ಭಸ್ಮಮಾಡಲು ಉಪಾಯ ಮಾಡಿ ಆ ದುಷ್ಟೆಯರು ಹೊರಟುಹೋದರು. ಸಾಯಿಕೆಯು ಎಲ್ಲವನ್ನೂ ಸಿದ್ಧಮಾಡಿಟ್ಟಳು. ಮನ್ಮಥಸಜನು ಸವಿೂಪದಲ್ಲಿ ಬಂದು ನಿದ್ರಿಸುತ್ತಲೇ ಆತನ ಶಿಥಿಲ ಆಲಿಂಗನದಿಂದ ಬಿಡಿಸಿಕೊಂಡು ದೀಪಹಚ್ಚಿ ತನ್ನ ಕಲ್ಪನೆಯು ರಾಕ್ಷಸನ ಅಂತ್ಯಮಾಡಲು ಉದ್ಯತಳಾದಳು.

ಆದರೆ ಪ್ರಕಾಶದ ಪ್ರಥಮ ರಶ್ಮಿಯು ಶ್ವೇತಶಯ್ಯೆಯ ಮೇಲೆ ನಿದ್ರಿಸಿದ ಮನೋಜ್ಞನ ಮನೋಹರ ರೂಪದ ಮೇಲೆ ಬೀಳುತ್ತಲೇ ಸಾಯಿಕೆಗೆ ಆತ್ಮವಿಸ್ಮರಣವಾಗಿ ಆಕೆಯ ಕೈಯಲ್ಲಿದ್ದ ಕತ್ತಿಯು ಜಣಜಣ ಶಬ್ದಮಾಡುತ್ತಾ ಶ್ವೇತಶಿಲೆಯ ನೆಲದ ಮೇಲೆ ಬಿದ್ದಿತು. ಸವಿೂಪದಲ್ಲಿದ್ದ ತೂಣೀರದಿಂದ ಬಾಣವೊಂದು ಬಂದು ಆಕೆಗೆ ತಗಲಿತು. ಪ್ರೇಮಸ್ರೋತವು ಆಕೆಯ ಹೃದಯದಿಂದ ಉಕ್ಕಿಬಂದು ಆಕೆಯು ಕಾಮದೇವನಿಗೆ ಚುಂಬನ ಮಾಡಲೆಂದು ಬಗ್ಗುವಾಗ ದೀಪದ ಬಿಸಿ ಎಣ್ಣೆಯ ಬೊಟ್ಟೊಂದು ಮನಸಿಜನ ಮೇಲೆ ಬಿದ್ದು ಆತನು ಬೆಚ್ಚಿಬಿದ್ದು ಎಚ್ಚೆತ್ತನು.

'ಪ್ರಿಯೇ, ವಿದಾಯವು. ಸಂದೇಹದ ಈ ತೀಕ್ಷ್ಣಧಾರೆಯು ನಿನ್ನ ಮತ್ತು ನನ್ನ ಮಧ್ಯದಲ್ಲಿದ್ದ ಪ್ರೇಮಸೂತ್ರವನ್ನು ತುಂಡು ಮಾಡಿತು. ಇನ್ನು ಚಿರವಿಯೋಗಾಗ್ನಿಯಲ್ಲಿ ನಾವಿಬ್ಬರೂ ಬೇಯಬೇಕಾಗುತ್ತದೆ. ನಿನ್ನ ಹತ್ತಿರ ನಾನು ಇನ್ನು ಬರುವುದು ಅಸಂಭವವಾಗಿದೆ' ಎಂದನು.

ಸಾಯಿಕೆಯು ಮೂರ್ಛೆಹೊಂದಿ ಬಿದ್ದುಬಿಟ್ಟಳು. ವ್ಯಥಿತ ಹೃದಯನಾದ ಮನೋಜನು ಆ ರಂಗಮಹಲಿನಿಂದ ಹೊರಟು ಹೋದನು. ಅಲ್ಲಿ ಉಳಿದುದು ಮೂರ್ಛಿತ ಸಾಯಿಕೆಯೂ ಮತ್ತು ಅತೀತ ಸುಖದ ಸ್ಮೃತಿಯೂ ಮಾತ್ರ.

* * * * *

ದುಃಖಿತ ರತಿಯು ರಾತ್ರೆ ಹಗಲು ಕಂಡಕಂಡಲ್ಲಿ ತಿರುಗುತ್ತಾ ಆತ್ಮಹತ್ಯ ಮಾಡಿಕೊಳ್ಳಲು ಪ್ರಯತ್ನಿಸಿದಳು. ಆದರೆ ಆಕೆಯು ಯಮನಿಗೂ ಬೇಡವಾದಳು. ವೃತ್ಯುವು ಕೂಡ ತನ್ನ ಅಂಧಕಾರಮಯ ಪ್ರದೇಶಗಳನ್ನು ಉತ್ತಮ ಕುಸುಮಗಳಿಂದ ಶೃಂಗರಿಸಲಿಚ್ಛಿಸುತ್ತಾನೆಯೇ ವಿನಾ ಹಾಳು ಕುಸುಮಗಳಿಂದಲ್ಲ.

ಸಹಾನುಭೂತಿಯ ಆಸೆಯಿಂದ ರತಿಯು ತನ್ನ ಅಕ್ಕಂದಿರ ಬಳಿಗೆ ಹೋದಳು. ಅಲ್ಲಿ ಈಗ ಅವಳನ್ನು ಕೇಳುವವರೇ ಇಲ್ಲ. ಅವರ ಶುಷ್ಕ ವ್ಯವಹಾರವನ್ನೂ ವ್ಯಂಗ್ಯೋಕ್ತಿಗಳನ್ನೂ ಆಕೆಗೆ ಸಹಿಸಲಾಗಲಿಲ್ಲ. ಆಕೆಯು ಆ ನಿರ್ಜನ ಪರ್ವತಶಿಖರಕ್ಕೆ ಹೋದಳು. ಅಲ್ಲಿಂದ ಕಾಮದೇವನಿಂದ ಪ್ರೇರಿತವಾದ ವಾಯುವು ಆಕೆಯನ್ನು ಕೆಳಗುರುಳಿಸಿತು. ಹೀಗೆ ರತಿಯು ಎಲ್ಲೆಲ್ಲಿಯೂ ಆಶ್ರಯ ದೊರಕದೆ ವಿಯೋಗಜ್ವಾಲೆಯಿಂದ ಜ್ವಲಿಸುತ್ತಾ ಕಂಡಕಂಡಲ್ಲಿ ಅಲೆಯುತ್ತಿದ್ದಳು. ಕಾಮದೇವನದು ಕೂಡ ಇದೇ ಅವಸ್ಥೆಯಾಗಿತ್ತು. ಕಾದ ಎಣ್ಣೆಯು ಆತನ ಕುತ್ತಿಗೆಯಲ್ಲಿ ಬಿದ್ದ ವ್ರಣವೂ ವಿಯೋಗದಿಂದ ಹೃದಯದಲ್ಲುಂಟಾದ ವೇದನೆಯೂ ಆತನನ್ನು ದಹಿಸುತ್ತಿದ್ದುವು. ಮನೋಜನು ತನ್ನ ಬಾಣಗಳಿಂದ ತಾನೇ ಹೊಡೆಯಲ್ಪಟ್ಟವನಾಗಿ ಅನೇಕ ಯಾತನೆಗಳನ್ನು ಅನುಭವಿಸಬೇಕಾಯಿತು. ಯಾರೋ ಒಬ್ಬ ಚಾಡಿಗಾರನು ಆತನ ತಾಯಿ ವೀನಸಳೊಡನೆ ಆತನ ಪ್ರೇಮಕಥೆಯನ್ನೆಲ್ಲಾ ಹೇಳಿಬಿಟ್ಟನು. ತನ್ನ ಮಗನ ಪತನಕ್ಕಾಗಿಯೂ ಆತನು ತನ್ನ ಪ್ರತಿಸ್ಪರ್ಧಿಯೊಡನೆ ಪ್ರೇಮ ಬೆಳೆಸಿದ್ದಕ್ಕಾಗಿಯೂ ಆಕೆ ವಿಶೇಷ ಕೋಪಗೊಂಡಳು. ಇದರ ಫಲವಾಗಿ ಆಕೆಯು ಮಗನನ್ನು ಒಂದು ಕತ್ತಲೆಕೋಣೆಯಲ್ಲಿ ಕೈದಿಯಾಗಿಟ್ಟಳು. ಅನ್ಯ ದೇವತೆಗಳು ಕಾಮದೇವನ ಬಿಡುಗಡೆಗಾಗಿ ಪ್ರಯತ್ನಿಸಿದರು. ಆದರೆ ಒಬ್ಬ ಮಾನವಳು ತನ್ನ ಮೇಲೆ ಜಯಹೊಂದಿದ ಕೋಪದಿಂದ ಕ್ಷುಬ್ಧಳಾದ ಆಕೆಯು ಯಾರ ಮಾತನ್ನೂ ಕೇಳಲಿಲ್ಲ. ಕಾಮದೇವನ ಬಾಣಗಳು ಶಾಂತವಾದುವು, ಇದರಿಂದಾಗಿ ಜಗತ್ತಿನಿಂದ ಆನಂದ, ಆಕಾಂಕ್ಷೆ ಮತ್ತು ಪ್ರೇಮವು ಮಾಯವಾಗಿ ಸ್ವರ್ಗದಲ್ಲಿ ಕೂಡ ಇದೇ ಅವಸ್ಥೆಯುಂಟಾಯಿತು.

ವೀನಸಳ ಕ್ರೋಧವು ದಿನೇ ದಿನೇ ಅಭಿವೃದ್ಧಿಯಾಗತೊಡಗಿತು. ಆಕೆಯು 'ಸಾಯಿಕೆಗೆ ಯಾರಾದರೂ ಸಹಾಯ ಮಾಡಿದರೆ ತನ್ನ ಪ್ರತಿಹಿಂಸೆಗೆ ತುತ್ತಾಗಬೇಕಾದೀತೆಂದೂ, ಸಾಯಿಕೆಯನ್ನು ಹಿಡಿದು ತಂದುಕೊಟ್ಟವರಿಗೆ ಪ್ರೇಮದೇವಿಯಾದ ತಾನು ಏಳು ಚುಂಬನಗಳನ್ನಿತ್ತು ಕೃತಾರ್ಥರನ್ನಾಗಿ ಮಾಡುತ್ತೇನೆ'ಂದೂ ಜಗತ್ತಿನಲ್ಲಿ ಉದ್ಘೋಷಣೆ ಮಾಡಿಸಿದಳು.

ಹೀಗಿರಲು ಸಾಯಿಕೆಗೆ ಎಲ್ಲಿಯೂ ಆಶ್ರಯ ದೊರಕದಿರಲು ಸ್ವತಃ ಆಕೆಯೇ ನಿರಾಶಳಾಗಿ ಕಡೆಗೆ ಅಫರೋಡಾಯಿಟಿನ ಮನೆ ಬಾಗಿಲಿಗೆ ಬಂದಳು. ಆಕೆಯ ಹೆಸರು ಕೇಳುತ್ತಲೇ ದ್ವಾರಪಾಲಕರು ಆಕೆಯ ಜುಟ್ಟು ಹಿಡಿದು ಎಳೆದು ತಂದು ದೇವಿಯ ಮುಂದೆ ನಿಲ್ಲಿಸಿದರು.

ದೇವಿಯು ಪ್ರತಿಹಿಂಸೆ ಮತ್ತು ಭರ್ತ್ಸನಾಪೂರ್ಣ ಮುಗುಳುನಗೆಯಿಂದ ಸಾಯಿಕೆಗೆ ಸ್ವಾಗತವಿತ್ತು, 'ತನ್ನ ಪ್ರೇಮಿಯೊಂದಿಗೆ ಸೇರಲು ಬಂದೆಯೋ? ಆತನು ತನ್ನ ಅಪಕೃತ್ಯಗಳ ಪ್ರಾಯಶ್ಚಿತ್ತವನ್ನನುಭವಿಸುತ್ತ ಕತ್ತಲೆಕೋಣೆಯಲ್ಲಿ ಬಿದ್ದಿದ್ದಾನೆ. ಅಲ್ಲದಿದ್ದರೆ ತನ್ನ ಅತ್ತೆಯನ್ನು ತನ್ನ ದರ್ಶನದಿಂದ ಕೃತಾರ್ಥಗಳನ್ನಾಗಿ ಮಾಡಲು ಬಂದೆಯೋ? ನನ್ನಂತಹ ಸ್ತ್ರೀಯೊಂದಿಗೆ ಸ್ಪರ್ಧೆಗೆ ನಿಂತರೆ ಏನಾಗುತ್ತದೆಂದು ನಿನಗೆ ಈಗಲಾದರೂ ಗೊತ್ತಾಯಿತೋ?' ಎಂದು ಹೇಳಿದಳು.

ಹೀಗೆ ಹೇಳಿ ಆಕೆಗೆ ವಿವಿಧ ಯಾತನೆಗಳನ್ನು ಕೊಡಲಿಕ್ಕೆ ದಕ್ಷರಾದ ಸೇವಕರಿಗೆ ಆಜ್ಞಾಪಿಸಿದಳು. ಮರುದಿನ ಹತ್ತು ವಿಧದ ಧಾನ್ಯಗಳನ್ನು ಬೆರೆಸಿ ರಾಸಿ ಹಾಕಿ ಅದರೆದುರಿಗೆ ರತಿಯನ್ನು ತಂದು ಕುಳ್ಳಿರಿಸಿದರು. ಆಗ ವೀನಸಳು ಅಲ್ಲಿ ಬಂದು—'ಎಲೆ ಸಾಯಿಕೆ! ನೀನು ನನ್ನ ಮಗನಿಗೆ ಯೋಗ್ಯ ಪತ್ನಿಯೋ ಎಂದು ನೋಡಬೇಕಾಗಿದೆ, ಆದುದರಿಂದ ಈ ಧಾನ್ಯದ ಕಾಳುಗಳನ್ನು ಸಂಜೆಯಾಗುವುದರೊಳಗೆ ಬೇರೆ ಬೇರೆ ಮಾಡಬೇಕು. ಒಂದೇ ಒಂದು ಕಾಳು ಒಂದಕ್ಕೊಂದು ಬೆರಸಿರಬಾರದು' ಎಂದು ಆಜ್ಞಾಪಿಸಿ ಆಕೆಯನ್ನೂ ಧಾನ್ಯದ ರಾಶಿಯನ್ನೂ ಒಂದು ಕೋಣೆಯೊಳಗೆ ಹಾಕಿ ಬಂದು ಮಾಡಿದರು. ಆಕೆಯು ಅಳುತ್ತಾ ಕೂತಳು.

ಒಂದು ಚಿಟ್ಟೆ ಹುಳವು ಆಕೆಯ ಅಪೂರ್ವ ಸೌಂದರ್ಯಕ್ಕೆ ಮರುಳಾಗಿ ಸಾವಿರಾರು ಚಿಟ್ಟೆಗಳನ್ನು ಕರೆದು ಕತ್ತಲಾಗುವುದಕ್ಕೆ ಮೊದಲೇ ಕಾಳುಗಳನ್ನು ಬೇರೆ ಬೇರೆ ಮಾಡಿಕೊಟ್ಟಿತು.

(೧೯ನೇ ಪುಟಕ್ಕೆ ಮುಂದರಿಸಲಾಗಿದೆ)

OLD FAMOUS

EAST & WEST

INSURANCE CO., LTD.

Bonus declared Rs. 15 per thousand per annum

Annual premium income over Rs. 5,00,000

Insurance in Force over Rs. 1,00,00,000

,,Life Fund over Rs. 10,00,000

Prompt settlement of claims.

Low rates of premiums and various attractive plans.

Attractive and liberal agency contracts are offered to honest, influential gentlemen

Inquiries solicited at:—

PADUBIDRI BROS.,

Chief Agents.

Maharashtra & Karnataka & East & West Khandesh Dist.,

BOMBAY 8.

ಬಾಲಾರ್ಕಮಧು

ಚಿಕ್ಕಮಕ್ಕಳಿಗೆ ಪುಷ್ಟಿಯನ್ನೂ, ಆರೋಗ್ಯವನ್ನೂ, ಅದ್ಭುತ ಶಕ್ತಿಯನ್ನೂ ಕೊಡುವುದು.
ಶೀಸೆ 1ಕ್ಕೆ 12 ಆಣೆ; ಟ. ಖ. 9 ಆಣೆ.

ಶ್ಲೀನ್‌ಷಾ ಲಿವರ್

ಪ್ಲೀಹ, ಪಿತ್ತಕೋಶ, ಅಥವಾ ಮಕ್ಕಳ ಗೆಡ್ಡೆರೋಗ ಇದಕ್ಕೆ ಚಿಕ್ಕಬಿಂದು ದಿವ್ಯೌಷಧವು.
ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು.
ಒಂದು ತಿಂಗಳ ಔಷಧದ ಕ್ರಯ ರೂ. 3-0-0; ಟ. ಖ. 6 ಆಣೆ.

ಯಂ. ಎ. ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ, ಮೈಸೂರು ಸೀಮೆ.

ಯೋಗ್ಯ ದರದಲ್ಲಿ ಉತ್ತಮ
ದೇವಪೂಜಾ ಸಾಮಗ್ರಿ

ಅಪೇಕ್ಷಿಸುವವರು ಇಂದೇ ನಮ್ಮ ಖಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಪುಕಟಾ ಕಳುಹಿಸಿಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇಕಾಷ್ಟು ಸೈಜಿನಲ್ಲಿ ಖಾತ್ರಿಯಾಗಿ ಸಜಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲವಾಗಿರುವ ಮಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ, Kalmanje Vyasacharya,
ಭಾಂಡೆ ವ್ಯಾಪಾರಿ, Brass-ware Merchant,
ಉಡುಪಿ, ದ. ಕ. Udipi, S. K.

DIAMONDS! DIAMONDS!
BEST BRILLIANCY!

K. R. K. SHET,

Near Mission High School, MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು! ಎಮ್ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಜುವೆಲ್ಲರ್,
ಮಿಶ್ಶನ್ ಹೈ ಸ್ಕೂಲ್ ಬಳಿ, ಮಂಗಳೂರು.

ಕೂದಲು ರಂಗು ಬಿಡಿ.

ಈ ಎಣ್ಣೆಯಿಂದ ಕೂದಲು ಬೂದಿ ಬಣ್ಣವಾಗುವುದು ನಿಲ್ಲುತ್ತದೆ. ಹೇರಿನಿಂದಲೇ, ಬಿಳಿ ಕೂದಲು ಕಪ್ಪಾಗಿ ಬೆಳೆದು, 60 ವರ್ಷದ ವರೆಗೂ ಹಾಗೇ ಉಳಿಯುತ್ತದೆ. ಹಾಗಾಗದಿದ್ದರೆ, ಎರಡಪ್ಪು ಬೆಲೆಯನ್ನು ಹಿಂದಿರುಗಿಸುವೆವೆಂದು ಗ್ಯಾರೆಂಟಿ. ಕೆಲವು ಬಿಳಿ ಕೂದಲುಗಳಿದ್ದರೆ, ರೂ. 3ರ ಬಾಟಲಿಗೂ, ಹೆಚ್ಚು ಬಿಳಿ ಕೂದಲಿದ್ದರೆ ರೂ. 5ರ ಬಾಟಲಿಗೂ ಅರ್ಧ ಭಾಗಕ್ಕೂ ಹೆಚ್ಚಾಗಿ ಅಥವಾ ಪೂರಾ ಭಾಗದಲ್ಲಿ ಬಿಳಿ ಕೂದಲಿದ್ದರೆ ರೂ. 9ರ ಬಾಟಲಿಗೂ ಆರ್ಡರ್ ಮಾಡಿ.

BAL KALA STORES,
12, 28-7. P. O. Kansi Simri (Darbhanga.)

ವರ್ಷಾಂತರಗಳ ಪ್ರಯತ್ನವೂ, ಸಾಹಸವೂ ತಾಜಾ ವಜ್ರಗಳ ಬದಲು ಈ ಯೋಗ್ಯ ಸಾಧನವನ್ನು ಕಲ್ಪಿಸಿದೆ.

MODERN DIAMONDS

ಅದರ ಅದ್ವಿತೀಯವಾದ ಸೌಂದರ್ಯವೂ ಕಣ್ಣನ್ನು ಕೊರೈಸುವ ಬಿಳಿ ಪ್ರಕಾಶವೂ ಕೂಡಲೇ ಚಿತ್ತವನ್ನು ಆಕರ್ಷಿಸುತ್ತದೆ.

ಶ್ರೀಮತಿ ಸರೋಜಿನಿದೇವಿಯವರ ಅಭಿಪ್ರಾಯ:

"ಮೊಡರ್ನ್ ಡಾಯಮಂಡ್ಸ್"ಗಳು ವೈಜ್ಞಾನಿಕ ಚಾತುರ್ಯದ ಬಹಳ ಸಾಜೂಕಾದ ಮಾದರಿಗಳಾಗಿವೆ... ಇವುಗಳಲ್ಲಿ ಕಣ್ಣುಗಳನ್ನು ಸೆಳೆಯುವ ಪ್ರಕಾಶದ ಶುಭ್ರತೆಯಿದೆ. ಎಲ್ಲಿ ಹೆಂಗಸರು ವಜ್ರಗಳನ್ನು ಧಾರಾಳವಾಗಿ ಉಪಯೋಗಿಸುವರೋ ಮುಖ್ಯವಾಗಿ ಆ ಪಕ್ಷಿಣದಲ್ಲಿ ಕಲಾವಿಜಯವಾದ ಈ "ಮೊಡರ್ನ್ ಡಾಯಮಂಡ್ಸ್"ಗಳು ವಿಸ್ತಾರವಾಗಿಯೂ, ಸುಲಭವಾಗಿಯೂ ಮಾರಿಹೋಗುವದೆಂದು ನಾನು ಸಂಬುತ್ತೇನೆ.

ನೀವು ಅಪೇಕ್ಷಿಸಿದಲ್ಲಿ ನಮ್ಮ ಸಚಿತ್ರ ಪಾಂಹಿತಿ ಪತ್ರವನ್ನೂ ಪ್ರಶಂಸಾ ಪತ್ರಗಳ ಪ್ರತಿಯನ್ನೂ ಆತ್ಯಾನಂದದಿಂದ ಕಳುಹಿಸಿಕೊಡುವೆವು.

C. C. Acharyulu & Son,
Jewellers for over a century,
63, Ponnappa Chetty Street,
Post Box No. 543, Park Town, Madras.

ಆರ್. ಮಾರ್ಟಿನ್ಸರ

ಆಸ್ತಮೊಡಾಯನ್

ಈ ಸಮ್ಮ ಔಷಧವು ಬಹಳ ಕಾಲದಿಂದ ಉಪ್ಪುವಿಸಿದ ಮತ್ತು ಅತೀ ಕಠಿಣವಾದ ಕಫ, ಕೆಮ್ಮು, ದಮ್ಮು, ನೆಗಡಿ, ಗಂಟಲುನೋವು ಎಷ್ಟೋದು, ಶ್ವಾಸಕೋಶದ ನೋವು ಇವೇ ಮುಂತಾದವುಗಳನ್ನು ನಾಶ ಮಾಡಿ ಉಸುರಾಡುವುದಕ್ಕೆ ಸುಲಭ ಮಾಡುತ್ತದೆ. ಎದೆಯನ್ನು ಕಟ್ಟಿ ಮಾಡುತ್ತದೆ. ಈ ಔಷಧದ ಪೂರ್ಣ ಗುಣವಿಶ್ವಾಸವಾದರೆ ಒಂದೇ ಬಾಟ್ಲಿ ಯನ್ನು ಉಪಯೋಗಿಸಿದರೆ ಸಾಕು. ಈ ಔಷಧವನ್ನು ಒಂದು ಸಾರಿ ತೆಗೆದುಕೊಂಡವರಿಗೆ ಮೇಲೆ ತಿಪರಿಸಿದ ಕಾಯಿಲೆಗಳು ಪುನಃ ಹಿಡಿಸು ವುದಿಲ್ಲ. 60 ಗುಳಿಗೆಗಳ ಒಂದು ಬಾಟ್ಲಿಗೆ ಕ್ರಯ ರೂ. 1—4—0 12 ಬಾಟ್ಲಿಗಳಿಗೆ ಕ್ರಯ ರೂ. 13—8—0.

R. D. KATELY & Co.,
319 Frere Road,
Opposite Fort Market, near Fountain,
BOMBAY.

ಆರ್. ಡಿ. ಕೆಟ್ಲೀ ಅಂಡ್ ಕೋ.,
319 ಫ್ರಿಯರ್ ರೋಡ್,
ಫೋರ್ಟ್ ಮಾರ್ಕೆಟಿನ ಎದುರು,
ಫೋರ್ಟ್, ಬೊಂಬಾಯಿ.

The United India Life Assurance Co., Ltd.,

Head Office: **MADRAS.** { ESTABLISHED: 1906. } Branch for Karnatak: **UDIPI.**

POLICIES IN FORCE EXCEED 3,00,00,000.

(1) The oldest and the premier Life Office of Southern India.
(2) The only Indian Life Office allowing interest on bonus.
(3) One of the very few companies recognised by the Govt. of India as most stable.

It will pay you to represent this oldest Life Office.

A policy in United India will give you the maximum benefits.

For particulars apply to:—

M. K. SRINIVASAN, B. A., B. L., *Managing Director.* OR PANGALKAR BROTHERS, *DISTRICT & GENERAL AGENTS,* KODIALBAIL, MANGALORE.

A Modern Way

A CURRENT Account saves you time and steps. The Bank keeps for you an excellent receipt—your paid cheque. And your cheque book gives you the whole story of just where every pie goes. It is a complete record on which to build your budget. Consider the advantages of this modern way to handle money and start a Current Account with any one of the offices of this Bank.

The Travancore National Bank, Ltd.

INCORPORATED IN TRAVANCORE 1912.
Head Office: ALLEPPEY.

Paid up Capital & Reserves ...	Rs.	13,71,000
Deposits	Rs.	1,49,00,000
Total Resources	Rs.	1,84,00,000

ಕೋಹಿನೂರಿನ ಸುಪ್ರಸಿದ್ಧ ತಯಾರಿಕೆಗಳು.

೧. ಕೋಲನ್ ವಾಟರ್ (ರಿ. ನಂ. ೧೪೬೨) ಜ್ವರ, ನೆಗಡಿ, ಮತ್ತು ಎಲ್ಲಾ ವಿಧವಾದ ಶಿರಸ್ಸಿನ ಬಾಧೆಗಳಿಗೆ ದಿವ್ಯಾಮೃತ.

೨. ಮಸ್ಕ್ ಲವೆಂಡರ್—ಕರವಸ್ತ್ರದಲ್ಲಿ ಉಪಯೋಗಮಾಡತಕ್ಕ ಸುವಾಸನೆಯಾದ ಸೆಂಟು.

೩. ಅನಂಸ್ ಸ್ನೋ—ಸೌಂದರ್ಯವನ್ನು ಹೆಚ್ಚಿಸಿ ಚರ್ಮವನ್ನು ಮೃದುವಾಗಿಡುತ್ತೆ.

೪. ಬ್ಯೂಟಿಯಂಟಾಯಿನ್—ಕೂದಲಿನ ಸೌಂದರ್ಯಕ್ಕೋಸ್ಕರ ಅರ್ಹವಾದ ಮತ್ತು ಸುವಾಸನೆಯುಳ್ಳ ಪರಿಮಳ.

೫. ಬ್ರಾಹ್ಮೀ ಕೈಲ—ಮೆದುಳು, ಕೂದಲು, ಮತ್ತು ನೇತ್ರಗಳ ಸಂರಕ್ಷಣ ಹಾಗೂ ಹುಚ್ಚು ತನಕ್ಕೂ ಅದ್ಭುತ ಗುಣಕಾರಿ. ಕೂದಲು ಉದುರಿ ಹೋಗುವವರ ಸಂಬಂಧದಲ್ಲಿ ಅದನ್ನು ನಿಲ್ಲಿಸಿ, ಹೆಚ್ಚಾಗಿ ಬೆಳೆಸುತ್ತದೆ.

೬. ದ್ರಾಕ್ಷಾಸವ—ಮಂದಾಗ್ನಿ, ಅಜೀರ್ಣ, ಶ್ವಾಸ, ದಮ, ಇತ್ಯಾದಿಗಳಿಗೆ ಅತ್ಯುತ್ತಮ. ದೇಹಬಾಧೆಯನ್ನು ಶೀಘ್ರವಾಗಿ ನಡೆಯಿಸಿ ಆರೋಗ್ಯವನ್ನೀಯುತ್ತದೆ. ರಕ್ತ ವರ್ಧಿಸುವ ಮತ್ತು ಶಕ್ತಿ ಕೊಡುವ ಉತ್ತಮ ಔಷಧ.

೭. ಆರಾಮೇತಿಹಾಲ್—ಎಲ್ಲಾ ವಿಧವಾದ ಜ್ವರವನ್ನು ಹೋಗಲಾಡಿಸಿ, ಜ್ವರದಗಡ್ಡೆ, ಹೊಟ್ಟೆ ನೋವು ಮುಂತಾಪ್ಪುವುಗಳನ್ನು ಗುಣಪಡಿಸುವ, ಸರ್ವೋತ್ತಮ ಔಷಧ.

೮. ವೆಜಿಟೇಬಲ್ ಪೈನ್-ಹಂಟರ್—ವಾಂತಿ, ವಿರೇಚನ, ಅಜೀರ್ಣ, ಕಾಲೆರಾ, ಮುಂತಾದ ರೋಗಗಳ ಗೋಸ್ಕರ ಕುಡಿಯತಕ್ಕ ಔಷಧ.

೯. ರತ್ನಾಂಜನ ಪೇನ್ ಬಾಮ್—ನೆಗಡಿ, ಶಿರಸ್ಸಿನ ಬಾಧೆಗಳು, ಮುಂತಾದ ಶಾರೀರಕ ಬಾಧೆಗಳ ಮೇಲೆ.

೧೦. ಕ್ರೀಸೋರಿಂಗಾ—ಕಪ್ಪು ಅಥವಾ ಕೆಂಪು ಹುಳಕಡ್ಡಿಯನ್ನು ನಿರ್ಮೂಲಮಾಡುತ್ತೆ.

೧೧. ಹಿಟೊ ಡಿ ರೋಜ್ ಕೋಕೊನಟ್ ಹೇರ್ ಆಯಿಲ್—ಕೇಶಗಳಿಗೋಸ್ಕರ ಗುಲಾಬಿಯ ಮಧುರವಾದ ವಾಸನೆ ಕೊಡುವ ಶುದ್ಧವಾದ ಎಣ್ಣೆ.

ಕೋಹಿನೂರ್ ವರ್ಕ್ಸ್,
60 ಅಬ್ದುಲ್‌ರಹಿಮಾನ್ ಸ್ಟ್ರೀಟ್,
ಬೊಂಬಾಯಿ, 3.

KOHINOOR WORKS,
60 Abdul Rehiman Street,
BOMBAY, No. 3.

THE PIE-MONEY BANK LTD., MAIDAN ROAD, MANGALORE.

Undertakes all kinds of Banking Business. Current account at 2½% per annum.
Savings Bank Deposits at 4½% per annum.

FIXED DEPOSITS.

For 2 years	7%	For 6 months	5 %
1 year	6%	3 months	4½%

Auction Chit Funds ranging from Rs. 100—5000 run regularly on systematic lines.
Unique Banking facilities to Businessmen and interested Public.

Apply for particulars:—

K. R. GURU, *Managing Director.*

ಕಳೆದ ವಾರ

ಕಾಂಗ್ರೆಸಿನ ಕಡೆಯಿಂದ, ಇನ್ನೂ ಎಲ್ಲ ಕಡೆಗಳಲ್ಲಿಯೂ,

ಸಭಾಸದನಗಳ ಉಮೇದುವಾರರ ನೇಮಕವಾದ ಹಾಗಿಲ್ಲ. ಕೆಲ ಮಟ್ಟಿಗೆ ಆಗಿರುವ ನಮ್ಮ ಕರ್ನಾಟಕ ಪ್ರಾಂತದಲ್ಲಿಯೂ, 'ಕೊನೆಯ ಪಟ್ಟಿಯಾಗಿಲ್ಲ; ಬದಲಾವಣೆಗಳೂ ಇವೆ' ಎಂದೂ ಪ್ರಕಟವಾಗಿದೆ. ಆದುದರಿಂದ ಈ ವಿಚಾರದಲ್ಲಿ, ಸಮಯೋಚಿತವಾದ ಇದೊಂದು ಸೂಚನೆಯನ್ನು ನಾವಿಲ್ಲಿ ಕೊಡೆಲೆಳಸುತ್ತೇವೆ. ಅದು ಮತ್ತೇನೂ ಇಲ್ಲ. ಕಾಂಗ್ರೆಸಿನವರು, ಜನಗಳೊಡನೆ, 'ನಿಮಗೆ ಸ್ವತಂತ್ರ ಬೇಕೇ? ದಾಸ್ಯವೇ ಆದೀತೇ?' ಎಂದು ಈ ಅಡ್ಡಸವಾಲನ್ನು ವೃಥಾ ಕೇಳುವಲ್ಲಿ ಫಲವಿಲ್ಲ. ನಿಜವಾಗಿಯೂ ಕಾಂಗ್ರೆಸು ಸ್ವಾತಂತ್ರ್ಯಕ್ಕಾಗಿ ಸಭಾಸದನಗಳಲ್ಲಿ ಹೋರಾಡಲಿರುವುದೇ? ಆ ಹೋರಾಟಕ್ಕಾಗಿ, ಈ ಸಭಾಸದನಗಳ ರಣರಂಗಕ್ಕೆ, ಹಿಂದಿನ ಯುದ್ಧಗಳ ಗಾಯದ ಕಲೆಗಳನ್ನು ಉಳ್ಳ ಅಂತಹ ವೀರರನ್ನೇ, ಅಥವಾ ಅದರ ಚಿರಸ್ಮರಣೆಯಾದರೂ ಉಳ್ಳ, ರಾಷ್ಟ್ರೀಯಾಭಿಮಾನದಿಂದ ಉದ್ದೀಪ್ತರಾದ ಇಂತಹ ಧೀರ ಪುರುಷಪುಂಗವರನ್ನೇ ಕಾಂಗ್ರೆಸ್ ಆರಿಸಿ ಕಳುಹಲಿರುವುದೇ? ಎಂಬುದನ್ನು, ಜನಗಳಿಗೆ ಉದಾಹರಣೆಯ ಮೂಲಕ, ಕಾಂಗ್ರೆಸ್ ಸಿದ್ಧಾಂತ ಮಾಡಿಕೊಡಬೇಕಾಗಿದೆಯಷ್ಟೇ ಅಲ್ಲ; ಪಂಗಡಗಳ ವಿಜಯದ ಮೇಲಿರುವ ಆಗ್ರಹಕ್ಕಿಂತಲೂ, ಸ್ವರಾಜ್ಯಕ್ಕೊಂದು ಹಾದಿಯನ್ನು ನಿರ್ಮಿಸುವಲ್ಲಿ ತನಗೆ ಹೆಚ್ಚಿನ ಆಸಕ್ತಿ ಇದೆ, ಹೆಚ್ಚಿನ ಆದರವಿದೆ ಎಂದೂ ಕಾಂಗ್ರೆಸ್ ಖಚಿತಮಾಡಿಕೊಡಬೇಕಾಗಿದೆ. ಸಾಲಮದಕ್ಕೆ, ಚುನಾವಣೆಯ ಕಾರ್ಯಕ್ಕೆಂದು ಸಂಗ್ರಹವಾಗುವ ಆ ಫಂಡು, ಯಾವ ರೀತಿಯಲ್ಲಿ, ಯಾರಿಗಾಗಿ ವೆಚ್ಚವಾಗಲಿದೆ ಎಂದೂ, ಯಾರಿಗಾಗಿ ವೆಚ್ಚವಾಗುವುದೋ ಆ ಕಾಂಗ್ರೆಸ್ ಉಮೇದುವಾರನು, ಜನತೆಯ ಸಂಪೂರ್ಣ ವಿಶ್ವಾಸಕ್ಕೆ ಅರ್ಹನೇ ಎಂದೂ ಜನತೆಯೂ ತಿಳಿದುಕೊಳ್ಳುವ ಅವಕಾಶವನ್ನು, ತಾನೇ ಆದರೂ, ಮಾಡಿಕೊಳ್ಳಬೇಕಾಗಿದೆ.

× × × × ×

ಪ್ರಭುತ್ವದವರ ಅನುಗ್ರಹದೃಷ್ಟಿಗೆ ಬೀಳದ ಬಂಗಾಳದ

ಕೆಲವು ಹಿಂದೂ ಮುಸ್ಲಿಮರು, ಮುಂದಿನ ಚುನಾವಣೆಗಳಲ್ಲಿ ತಾವು ಉಮೇದುವಾರರಾಗಿ ನಿಲ್ಲಬೇಕೆಂಬ ಉದ್ದೇಶದಲ್ಲಿ ಕೃತಾರ್ಥರಾಗದೆ, ತೊಳಲುತ್ತಿರುವರೆಂದು ತಿಳಿದುಬಂದಿದೆ. ಎರಡು ವರ್ಷಗಳ ಕಾರಾಗೃಹವಾಸಕ್ಕೆ ಗುರಿಯಾದವರು ಯಾರೋ, ಅಂತಹವರ ಮೇಲಿನ ಬಹಿಷ್ಕಾರಾಸ್ತ್ರವನ್ನು ಉಪಸಂಹರಿಸುವ ಅಥವಾ ಉಪಸಂಹರಿಸದಿರುವ ಇಚ್ಛಾಮಾತ್ರವಾದಾ ಅಧಿಕಾರವೂ, ಸ್ವಾತಂತ್ರ್ಯವೂ ಅಲ್ಲಿನ ಗವರ್ನರರಿಗೆ ಇರುವುದರಿಂದ, ಅವರು ಈ ವಿಷಯದಲ್ಲಿ ಔದಾರ್ಯವನ್ನು ತೋರಿ, ಇವರಲ್ಲಿ ಯೋಗ್ಯರೆಂದು ತೋರಿ ಬರುವವರ ವಿಚಾರದಲ್ಲಿಯಾದರೂ, ಆ ಬಹಿಷ್ಕಾರದ ನಿರ್ಬಂಧವನ್ನು ಕದಲಿಸಿ, ತನ್ಮೂಲಕ ಪ್ರಜೆಗಳ ಮತದಾನಕ್ಕೆ ತಕ್ಕ ಅನುಕೂಲಗಳನ್ನು ಅಣಿಮಾಡಿಸಿ ಕೊಡದಿರಲಾರರೆಂದು ನಿರೀಕ್ಷಿಸಲಾಗಿದೆ.

× × × × ×

ಕಳೆದ ಎಸೆಂಬ್ಲಿಯ ಅಧಿವೇಶನ ಕಾಲದಲ್ಲಿ

ನ್ಯೂಯಿಲ್ಯಾಂಡಿಗೆ ಪ್ರವೇಶಿಸುವ ಹಿಂದೀಯರಿಗೇನೂ ನಿರ್ಬಂಧಗಳಿಲ್ಲವೆಂದು ಇಂಡಿಯಾ ಸರಕಾರದ ಅಪ್ಪಣೆ ಆಗಿದ್ದಿತು. ತತ್ತ್ವಶಃ ಇದು ನಿಜವಾದರೂ, ಆಚರಣೆ ಹೀಗಿಲ್ಲವೆಂದು ಇಂಡಿಯದ ಕಾಲನಿಗಳ ಸಂಘದ ಜನರಲ್ ಸೆಕ್ರಟರಿಗಳು ಈಗ ನಮಗೆ ಹೇಳುತ್ತಿದ್ದಾರೆ. ಅವರ ಹೇಳಿಕೆಯ ಮೇರೆಗೆ, ಅಲ್ಲಿ ಕಸ್ಟಮ್ಸ್ ಖಾತೆಯವರ ನಿರ್ಬಂಧಕ್ರಮಗಳು ಬಹು ಬಿಗಿಯಾಗಿವೆ. ವ್ಯವಹಾರದ ಉದ್ದೇಶವನ್ನಿಟ್ಟುಕೊಂಡು, ಅಲ್ಲಿಗೆ ತೆರಳುವ, ಸ್ವಲ್ಪ ಕಾಲ ಮಾತ್ರವೇ ಆದರೂ ಅಲ್ಲಿ ಉಳಿಯುವ, ಯಾವ ದರ್ಶಕನೇ ಆದರೂ, ಅವನೊಬ್ಬ ಅಪೇಕ್ಷಿತ ವ್ಯಕ್ತಿಯಂತೆ, ಅಲ್ಲಿ ಕಾಲಿಟ್ಟ ಕೂಡಲೇ ೧೦ ಪೌಂಡುಗಳ ತೇವಣಾತಿಯನ್ನು ಮಡಗಬೇಕಾಗಿದೆ. ಇದು ನಿಜವೇ? ನಿಜವಾಗಿದ್ದರೆ, ಇಂಡಿಯಕ್ಕೆ ಇದು ಬಹುಮಾನವೇ? ಇಂಡಿಯಾ ಪ್ರಭುತ್ವದವರು ಈ ವಿಷಯದಲ್ಲೇನು ಹೇಳುವರು? ಬೇಲಿ ಇಲ್ಲದ ವಿಶಾಲವಾದ ಹುಲ್ಲುಗಾವಲಿದ್ದೂ, ಅಲ್ಲಿ ಪ್ರವೇಶಿಸುವ ದನಕರುಗಳ ಕತ್ತಿಗೊಂದು ಭಾರವಾದ ಕುಂಟೆಯನ್ನೇ ಕಟ್ಟಿ ಬಿಟ್ಟ ಕಥೆಯಂತಾಗದೇ ಈ ವಿದ್ಯಮಾನವೂ?

× × × × ×

ನಿರೀಕ್ಷಿಸಿದಂತೆಯೇ ಆಯಿತು ಸ್ಪೈನಿನಲ್ಲಿ!

ಇಟೆಲಿಯೂ, ಜರ್ಮನಿಯೂ ಎರಡೂ ಆಗಲೇ ದಂಗೆಗಾರರ ನಾಯಕನ ದಿಗ್ವಿಜಯವನ್ನೊಪ್ಪಿ, ಅವನೇ ಸ್ಪೈನಿನ ಅಧಿಕಾರಿಯಾಗಲೆಂದು ಆಶೀರ್ವದಿಸಿದ್ದಾವೆ. ಆ ದಂಗೆಗಾರರು, ಯಾವ ಭೀಕರ ಕಾರ್ಯಗಳಿಂದ, ಈ ವಿಜಯವನ್ನು ಪಡೆದರೆಂಬುದೀ ರಾಷ್ಟ್ರಗಳ ಗಣನೆಗೆ ಬಂದಿಲ್ಲ; ಸ್ಪೈನಿನ ಬಹುಭಾಗದ ದಿಗ್ವಿಜಯವಾಗಿದೆ, ಅಷ್ಟೇ ಯಥೇಷ್ಟ! ಆದರೆ, ಇನ್ನು ಯುರೋಪಿನಲ್ಲಿ 'ಡೆಮೊಕ್ರೆಸಿ'ಯ ಗತಿ ಏನು? ಈ ವಿಜಯದಲ್ಲಿ ಬ್ರಿಟನ್ ಇನ್ನೂ ಸಾರುತ್ತಿರುವುದೇನು? 'ತಾಟಸ್ಥ್ಯ' ಮಂತ್ರವನ್ನೇ? ಈ ಮಂತ್ರವನ್ನೇ, ಇದುವರೆಗೆ, ಬಾಯುವಚಾರಕ್ಕಾದರೂ, ಜಪಿಸುತ್ತಿದ್ದ ಇಟೆಲಿ-ಜರ್ಮನಿಗಳು ಈಗಲೀಗ ಅದನ್ನು ಪೂರಾ ಮರೆತು, ಅದರ ಸಮಾಧಿಯನ್ನೇ ನಿರ್ಮಿಸಿಟ್ಟಿವೆ! ಇದರಿಂದ ಮುಂದೆ, ಆ ದೇಶಗಳು ಆಯುಧ-ಆಹಾರಗಳನ್ನು, ದಂಗೆಗಾರರಿಗೆ ಬಹಿರಂಗವಾಗಿ ಒದಗಿಸಿದರೂ, ತಪ್ಪೆನ್ನುವ ಹಾಗಿಲ್ಲ. ಆದುದರಿಂದ, ಫ್ರಾನ್ಸ್ ಮತ್ತೂ ಗ್ರೇಟ್ ಬ್ರಿಟನ್ನುಗಳು, ಈ ಸಂದಿಗ್ಧ ಕಾಲದಲ್ಲಿ, ತಮ್ಮ ರಥಗಳ ಬಳಲಿ ಬೆಂಡಾದ, ಕಳವಳಗೊಂಡ ಕುದುರೆಗಳನ್ನು, ಯಾವ ಕಡೆ ಓಡಿಸುವುದೆಂದು ನೋಡುವುದರಲ್ಲಿ ತುಂಬ ಸ್ವಾರಸ್ಯವಿದೆಯಲ್ಲವೇ?

× × × × ×

ಇದೀಗ ವಿಜ್ಞಾನದ ವಾಯುದೇವರ ಯುಗ!

ಆ ವಿಜ್ಞಾನದ ವಾಯುದೇವರುಗಳಿಗೆಲ್ಲ 'ಪೆನ್‌ಶನ್' ಕೊಟ್ಟ ಶಕ! ಈ ವಿಜ್ಞಾನದ ಯುಗದಲ್ಲಿ, ಹಲವು ಕಾರ್ಯಗಳಿಗೆಂದು, ಹಲವು ವಿಷವಾಯುಗಳ ಶೋಧನೆಯಾಗಿದೆ. ಚುನಾವಣೆಯಲ್ಲಿಯೂ, ಆಯಾ ಉಮೇದುವಾರರ ಕಡೆಯಿಂದ, ಸ್ಪೆಶಲಾಗಿ ಅವರ ಕಾರ್ಖಾನೆಯಲ್ಲಿಯೇ ತಯಾರಾಗಿ ಹೊರಡುವ ಹೊಸ ಗ್ಯಾಸ್ ಅಂಡೆಗಳಿಷ್ಟೇ ಕೂಡ ಈಗ ಇವೆ. ಆದರೆ, ಈ ಯುದ್ಧದಲ್ಲಿ ಧಾರಾಳವಾಗಿ ಖರ್ಚಾಗುವ ಆ ಗ್ಯಾಸುಬುರುಡೆಗಳ ರೀತಿಯೇ ಬೇರೆ; ನಿಜವಾದ ಯುದ್ಧಕಾಲದಲ್ಲಿ ಉಪಯೋಗವಾಗುವ ಆ ಗ್ಯಾಸುಗಳ ರೀತಿಯೇ ಬೇರೆ;—ಆದರೂ, ಈ ಗ್ಯಾಸುಗಳ ಹಲವು ಹೆಸರು, ಅವು ಉಪಯೋಗವಾಗುವ ಹಲವು ಕಾರ್ಯ, ಅವನ್ನೆಲ್ಲ ಇಲ್ಲಿ ವಿವರಿಸಿ, ವಿಸ್ತರಿಸುವುದು ಅನಾವಶ್ಯಕವೆನ್ನಿ. ಈಚೆಗೆ, ಪಂಜಾಬಿಗೆ ಒಂದು ಹೊಸ ಗ್ಯಾಸ್ ಬಂದಿದೆ; ಪ್ರಾಣಾಪಾಯವಿಲ್ಲದೆ ಜನಸ್ತೋಮವನ್ನು ಚೆದರಿಸಲು ಉಪಯೋಗಿಸುವುದೇ ಈ ಗ್ಯಾಸಿನ ಉದ್ದೇಶ. ಅದರ ಉಪಕಾರದ ಪರಿಶೋಧನೆಯೇನೋ, ಆಗಲೇ ಪಂಜಾಬ್ ಪೋಲೀಸ್ ಟ್ರೈನಿಂಗ್ ಶಾಲೆಯಲ್ಲಿ ನಡೆದು, ಗುಂಪು ಚೆದರಿಸುವ ಕಾರ್ಯದಲ್ಲಿ ಆ ಗ್ಯಾಸು ವಿಶೇಷ ಫಲಕಾರಿ ಎಂದು ಕಂಡುಬಂದಿದೆ. ಆದರೆ ಇನ್ನು ಇದು ಬೇಗನೇ ಎಲ್ಲೆಲ್ಲಿಯೂ ಉಪಯೋಗಿಸುವಂತಾದರೆ ಮಾತ್ರ, ಪೋಲೀಸರ ಗುಂಡಿನಿಂದ ಹಲವು ಪ್ರಾಣಗಳು ಬದುಕುವಂತಾದಾವು! ಇಲ್ಲದಿದ್ದರೆ, ಈ ಪ್ರಾಣನಷ್ಟಗಳೂ, ಆಘಾತಗಳೂ, ಯಥಾಪ್ರಕಾರವೇ ಎನ್ನಬಹುದಲ್ಲವೇ?

× × × × ×

ಬಡವರಿಗೆಲ್ಲ, ಇನ್ನೇನು, ಭಾಗ್ಯಕಾಲ,

ಸುಭಿಕ್ಷಕಾಲ ಬಂದ ಹಾಗೇ. ಹಾಗೆಂದುಕೊಳ್ಳಿ. ಅಥವಾ, ಇಷ್ಟರ ತನಕ ಅವರಿಗೆ ಅನ್ನ ಬಟ್ಟೆ, ದುಡ್ಡು ಕಾಸು ಮೊದಲಾದುವುಗಳಿಗೆಲ್ಲದಕ್ಕೂ ಬರಗಾಲವಿದ್ದರೂ, ಇನ್ನವರಿಗೆ ಅಂತಹ ಚಿಂತೆಗಳಲ್ಲಿ ಒಂದೊಂದೇ ತೊಲಗುವ ಸುಕಾಲ ಸವಿಪಿಸುತ್ತಿದೆ ಎಂದು ಹೀಗಾದರೂ ಅಂದುಕೊಳ್ಳಿ. ಮುಖ್ಯ ಅವರೆಲ್ಲ—ಆ ರೈತರು, ಶ್ರಮಜೀವಿಗಳು, ಕೂಲಿ ತರಗತಿಯವರು—ವಿದ್ಯಾಹೀನರಾಗಿ ಕೆಟ್ಟುಹೋಗಿರುವರಲ್ಲ! ಎಂಬ ವಶ್ಚಾತ್ತಾಪವಿನ್ನು ಯಾರಿಗೂ ಅಗತ್ಯವಿಲ್ಲ. ಬಿಟ್ಟುಬಿಡಿ ಅದನ್ನು. ಕಾರಣ, ಈ ಬಡವರ ಉದ್ಧಾರಕರ್ತೃಗಳಾಗಿ, ಸ್ನೇಹಿತರಾಗಿ ಭಾರತದಲ್ಲೆಲ್ಲ ನೂರಾರು ಮಂದಿ ಮಹನೀಯರು ತಾನು ಮೇಲು, ನಾನು ಮೇಲೆಂದು ಪಂಥ ಕಟ್ಟಿಕೊಂಡು ಮುಂದೆ ನುಗ್ಗುತ್ತಿದ್ದಾರೆ. ಮುಂದಿನ ಚುನಾವಣೆಯಲ್ಲಿ, ಈ ಬಡ ಅಶಿಕ್ಷಿತರಿಗೆಲ್ಲ, ಯೋಗ್ಯ ಮೆಂಬರರನ್ನಾರಿಸುವ ಕ್ರಮ ಯಾವುದೆಂಬುದರ ಕುರಿತು, ಶಿಕ್ಷಣ ಕೊಡಲು, ಭಗವಂತನು ತಮ್ಮನ್ನೇ ಸೃಷ್ಟಿಸಿದ್ದಾನೆಂದೂ ಇವರು ಡಂಗುರ ಸಾರುತ್ತಿದ್ದಾರೆ. ಇನ್ನು ಆ ಬಡ ಅಶಿಕ್ಷಿತ ಮತದಾರರ, ಆ ಕೃಷಿಕರ, ಆ ಶ್ರಮಜೀವಿಗಳಾದ ಕೆಲಸಗಾರರ ಭಾಗ್ಯಕ್ಕೆ ಕಡಿಮೆಯೇನು? ಆದರೆ, ಇದುವರೆಗೆ ಈ ಬಡವರ ಸ್ಮರಣೆಯೇ ಇಲ್ಲದ ಈ ಮಹಾನುಭಾವರು, 'ಚುನಾವಣೆ'ಯಿಂದ ಕೂಡಲೇ, ಆ ಪಟ್ಟಿ ಹೊರ ಬಿದ್ದ ಕೂಡಲೇ, ಏಕಾಏಕಿ, ಇವರ ಮೇಲೆ ಇಷ್ಟೊಂದು ಕನಿಕರದ ಕಂಬನಿಗಳ ಮಳೆ ಸುರಿಸಲಾರಂಭಿಸಿದುದನ್ನು ಕಂಡು, ಇವು ನಕ್ರಕಂಬನಿಗಳೆಂದೂ, ಉಮೇದುವಾರರ ಕಾಲಕ್ಕೆ ತಕ್ಕ ಕೋಲವೆಂದೂ, ದುಡ್ಡಿದ್ದವರು ಹಚ್ಚುವ ಮೊಳಕೈಬೆಲ್ಲವೆಂದೂ ಆ ಬೆಸ್ತು, ಅಶಿಕ್ಷಿತ ಮತದಾರರಲ್ಲಿ ಕೆಲವರಾದರೂ ತಿಳಿದುಬಿಟ್ಟರೆ, ಈ ನಮ್ಮ 'ಬಡವರ ಬಂಧುಮಿತ್ರರ' ಗತಿಯೇನು? ಅವರ ಈ 'ಲೋಕಶಿಕ್ಷಣ'ದ ಪುಣ್ಯಕಾರ್ಯದ ಸ್ಥಿತಿ ಏನು? ಯಾರಾದರೂ ಹೇಳಬಲ್ಲರೇ?

ESTD. 1906

CANARA BANK,
LIMITED.

OFFICES AT

ALLEPPEY	CHIKMAGALUR	KASARGOD
ARSIKERE	COCHIN	MANGALORE-BUNDER
BADAGARA	COONDAPOOR	MANGALORE-CITY
BANGALORE-CITY	DAVANGERE	MANJESHWAR
BOMBAY-FORT	DODBALLAPUR	MOOLKY
BOMBAY-MANDVI	ERNAKULAM	PAYYANNUR
BUNTWAL	GANGULI	PUTTUR
CALICUT	HUBLI	UDIPI
CANNANORE	KARKALA	

TOTAL WORKING FUNDS RS. 75,00,000

ಕಿವುಡರಿಗೆ

"ಡೆಫ್‌ಕಿಲ್ಲರ್" ಕಿವುಡತನವನ್ನೂ, ಕಿವಿಗೆ ಸಂಬಂಧಿಸಿದ ಇತರ ಎಲ್ಲ ರೋಗಗಳನ್ನೂ ಶಾಶ್ವತವಾಗಿ ಗುಣಪಡಿಸುವ ಹೊಸದೊಂದು ಅತ್ಯಾಶ್ಚರ್ಯಕರವಾದ ಔಷಧ. ಕಿವುಡತನವು ಎಷ್ಟೇ ಹಳೆಯದಾಗಿರಲಿ, ಅದು ಯಾವ ಸಂದೇಹವೂ ಇಲ್ಲದೆ, ಯಾವತ್ಕಾಲಕ್ಕೂ ಗುಣವಾಗುವುದು ಮತ್ತೂ ಕಿವುಡರು ಸಂಪೂರ್ಣವಾಗಿಯೂ, ಸ್ಪಷ್ಟವಾಗಿಯೂ ಕೇಳಲು ಆರಂಭಿಸುವರು. ಕಿವುಡತನವು ಸ್ವಲ್ಪವಾಗಿರಲಿ, ಪಾರ್ಶ್ವದ್ವಾಗಿರಲಿ, ಸಂಪೂರ್ಣವಾಗಿರಲಿ, ಅದು ಕಠಿಣವಾದ ನೆಗಡಿಯಿಂದಲೇ ಆಗಲಿ, ಜ್ವರದಿಂದಲೇ ಆಗಲಿ, ಮುದುಡಿಕೋದ ನರಗಳಿಂದ ಅಥವಾ ಗಂಟಲಿನ, ಮೂಗಿನ ಇಲ್ಲವೆ ಒಳಗಿನ ಅನಯವಗಳ ತೊಂದರೆಗಳಿಂದಲೇ ಉಂಟಾಗಿರಲಿ—ಏನೂ ಚಿಂತ್ಯವಿಲ್ಲ. ಕಿವಿ ಸೋರುವುದು ಕೂಡ ಇದರಿಂದ ನಿಲ್ಲುವುದಲ್ಲದೆ, ಸ್ಪಷ್ಟವಾಗಿ ಕೇಳುವ ಶ್ರವಣಶಕ್ತಿಯು ಶಾಶ್ವತವಾಗಿ ಹಿಂದಿರುಗುವುದು. ಈ ದಿವ್ಯೌಷಧದಿಂದ ಸಾವಿರಾರು ಮಂದಿ ಕಿವುಡರು ಯಶಸ್ವಿಯಾಗಿ ಗುಣಹೊಂದಿದ್ದಾರೆ. **ಬೆಲೆ ರೂ. 5. ಪೋಸ್ಟೇಜ್ ಆಣೆ 7.**

MAHAMBS TRADING COMPANY OF ASIA, Indian Depot, P. O. Box 2186, Bombay.

ಹಿಂದೀ ಕಾಂಗ್ರೆಸಿನ ಮತ್ತು ಇತರ ವಸ್ತುಪ್ರದರ್ಶನಗಳಲ್ಲಿ ಬಹುಮಾನ ಪದಕಗಳನ್ನೂ ಶಿಫಾರಸುಪತ್ರಗಳನ್ನೂ ಹೊಂದಿದೆ.

ರಿಜಿಸ್ಟರ್ಡ್

ಟ್ರೇಡ್‌ಮಾರ್ಕ್.

ಡಾ. ವಾಮನ್ ಗೋಪಾಲರ

ಸರ್ಸಪರಿಲ್ಲಾ

5 ವರ್ಷಗಳ ಅನುಭವದಿಂದ ಸಿಫಿಲಿಸ್‌ನಿಂದ ಜನರು, ರಕ್ತ ಶುದ್ಧಿಕಾರಕ ಔಷಧಿಗಳಲ್ಲಿ ಇದೇ ಉತ್ತಮವೆಂದು ಕಂಠೋಕ್ತವಾಗಿ ಹೊಗಳುತ್ತಿರುವ ಡಾ! ಗೌತಮರಾವ್ ಕೇಶವರಾವ್‌ರವರ ಹೊಸಿಕ್ ಪೌಡರ್ಸ್ ಮಾತ್ರೆಗಳನ್ನೊಮ್ಮೆ ಸೇವಿಸಿ ನೋಡಿ.

ಡಾ! ಗೌತಮರಾವ್ ಕೇಶವ್ ಎಂಡ್ ಸನ್, ಥಾಕೂರ್‌ದ್ವಾರ್ 2, ಬೊಂಬಾಯಿ.

ನೀವು ಯುವಕರಾಗಿರಲು

ಶಕ್ತ ಮತ್ತು ಚುರುಕು ಆಗಿರಲು



ಹೇಗೆ ಅದು ವರ್ತಿಸುತ್ತದೆ

ಒಕಾಸಾದಲ್ಲಿರುವ ಹೊರ್ಮೊನುಗಳು **ಸಹಸ್ರಾರ ಭಾಗವನ್ನು** (1) ಪೋಷಿಸುತ್ತವೆ, ಇದು ನಮ್ಮ ಜ್ಞಾನ, ಪ್ರಜ್ಞೆ ಮತ್ತು ಇಂದ್ರಿಯವ್ಯಾಪಾರಸ್ಥಾನ. ಇಲ್ಲಿಂದ ಕ್ರಿಯೆಯು **ಆಜ್ಞಾ ಚಕ್ರಕ್ಕೆ** (2) ಸಾಗುತ್ತದೆ, ಇದು ಮೆದುಳಿನ ಶಕ್ತಿ, ಚೈತನ್ಯ, ದೃಷ್ಟಿ ಮತ್ತು ಶಾರೀರಕ ಬೆಳವಣಿಗೆಗೆ ಕಾರಣವಾಗಿರುತ್ತದೆ. **ಒಕಾಸಾ** ಅಪ್ರತ್ಯಕ್ಷವಾಗಿ **ವಿಶುದ್ಧಿ ಚಕ್ರದ** (3) ಚಟುವಟಿಕೆಯನ್ನು ಕ್ರಮಗೊಳಿಸುತ್ತದೆ, ಇದು ರಾಸಾಯನಿಕ ಕೊಳಕಿನ ಪ್ರಾಮುಖ್ಯ ಇಂದ್ರಿಯವಾಗಿದೆ. ಇದೇ ರೀತಿಯಲ್ಲಿ ಹೃದಯದ ಚಲನಕ್ಕೆ ಕಾರಣವಾದ **ಅನಾಹತ ಚಕ್ರ** (4), ರಕ್ತದ ಒತ್ತಾಟಕ್ಕೆ ಕಾರಣವಾದ **ಮಣಿಪುರ ಚಕ್ರ** (5) ಮತ್ತು ಸಕ್ಕರೆಯನ್ನು ಜೀರ್ಣಿಸುವದಕ್ಕೆ ಕಾರಣವಾದ **ಸ್ವಾಧಿಷ್ಠಾನ ಚಕ್ರ** (6) ಇವುಗಳು ಸ್ವಾಭಾವಿಕವಾಗಿ ವರ್ತಿಸುವಂತೆ ಮಾಡುತ್ತದೆ. ಕೊನೆಯದಾಗಿ ವಿಶೇಷ ಹೊರ್ಮೊನುಗಳು ನಮ್ಮ ಶಕ್ತಿಯನ್ನೂ ಮತ್ತು ಇಂದ್ರಿಯಬಲವನ್ನೂ ಕಾಪಾಡುವ **ಮೂಲಾಧಾರ ಚಕ್ರವನ್ನು** (7 ಚಿತ್ರದಲ್ಲಿ ತೋರಿಸಲ್ಪಟ್ಟಿಲ್ಲ.) ಪುನಃ ಕ್ರಿಯಾಸಕ್ತವನ್ನಾಗಿ ಮಾಡುತ್ತವೆ. **ಇಂಥಾ ಅಪೂರ್ವ ರೀತಿಯಲ್ಲಿ ತ್ವರೆಯಾಗಿ ಒಕಾಸಾ ಸಂಪೂರ್ಣ ದೇಹವನ್ನು ಪೋಷಿಸಿ, ಅದನ್ನು ಪುನಃ ಆರೋಗ್ಯಕರವಾಗಿಯೂ ಯೌವನಪೂರ್ಣವಾಗಿಯೂ ಚುರುಕಾಗಿಯೂ ಮಾಡುತ್ತದೆ.**

5, 0 0 0, 0 0 0 ಮೇಲ್ಪಟ್ಟು ಜನರು

ಪ್ರಪಂಚದಲ್ಲೆಲ್ಲಾ ಒಕಾಸಾ ಉಪಯೋಗಿಸುತಿದ್ದಾರೆ.

ಇದು ನಿಸ್ಸಂದೇಹವಾಗಿ ಈ ಪ್ರಸಿದ್ಧ ಹೊರ್ಮೊನ್ ಟಾನಿಕ್ ಮತ್ತು ಚೈತನ್ಯದಾಯಕದ ಅತ್ಯಾಶ್ಚರ್ಯಕರ ಗುಣವನ್ನು ಸಿದ್ಧಾಂತಗೊಳಿಸುತ್ತದೆ.

ಒಕಾಸಾದ ಎರಡು ವಾರಗಳ ಉಪಚಾರವನ್ನು ತೆಗೆದುಕೊಳ್ಳಿ

ನೀವು ಎಷ್ಟೇ ವೃದ್ಧರಾಗಿರಿ, ಧಾತುಕ್ಷೀಣತೆಯು ಯಾವ ಸ್ಥಿತಿಯನೇ ಮುಟ್ಟಿರಲಿ, ಒಕಾಸಾದ ಸೇವನೆಯಿಂದ ಮೆದುಳಿನ ನರಗಳು, ದೃಷ್ಟಿ, ಜೀರ್ಣೇಂದ್ರಿಯಗಳು, ಮೂತ್ರಸಿಂಡ ಇವೆಲ್ಲಾ ಚುರುಕಾಗಿರುವಂತೆ ಕ್ರಮಬದ್ಧವಾಗುತ್ತವೆ; ನಿದ್ರೆಯಿಲ್ಲದಿರುವಿಕೆ, ನ್ಯೂರೆಸ್ತೆನಿಯಾ, ನಿರುತ್ಸಾಹ ಮತ್ತು ನಿತ್ರಾಣ ಇವು ಸಂಪೂರ್ಣವಾಗಿ ಹೋಗಲಾಡಿಸಲ್ಪಡುತ್ತವೆ. ಪರಿಣಾಮವು ನಿಮ್ಮ ನಿರೀಕ್ಷೆಗೆ ಮೀರಿದುದು. ನೀವು ಮುಂಚಿಗಿಂತಲೂ ಎಷ್ಟೋ ವರ್ಷಗಳಿಗಿಂತ ಚಿಕ್ಕವರಾಗಿರುವಂತೆ, ಬಹಳ ಆರೋಗ್ಯವಂತರಾಗಿರುವಂತೆ, ಮೊದಲಿಗಿಂತ ಬಲಶಾಲಿಗಳೂ ಮತ್ತು ಚುರುಕಾದವರೂ ಆದಂತೆ ಅನುಭವ ಪಡೆಯುವಿರಿ. ನೀವು ಒಕಾಸಾವನ್ನು ಎಲ್ಲಾ ಪ್ರಸಿದ್ಧ ಕೆಮಿಸ್ಟರಿಂದ ಅಥವಾ ಸೀದಾ ಇವರಿಂದ ಪಡೆಯಬಹುದು:—

OKASA CO., LTD., P. O. BOX 396, BOMBAY.

ಶಾಲೆಗಳು.

(ಮುಂದುವರಿದದ್ದು.)

ಸಾಧ್ಯವಿದ್ದಲ್ಲೆಲ್ಲಾ ಅಯಾಯ ಪ್ರದೇಶಗಳಲ್ಲಿ ಇರುವ ಪ್ರಾಥಮಿಕ ಶಾಲೆಗಳಲ್ಲಿಯೇ ಪತಿತವರ್ಗದ ವಿದ್ಯಾರ್ಥಿಗಳನ್ನು ಸೇರಿಸಲಿಕ್ಕೆ ಲೇಬರ್ ಶಾಖೆಯವರು ಪ್ರಯತ್ನಿಸುತ್ತಾರೆ. ಜಾತಿಭೇದದ ಅವಿಚಾರಗಳ ದೆಸೆಯಿಂದ ಎಲ್ಲಿಯಾದರೂ ಇದ್ದ ಶಾಲೆಗಳಲ್ಲಿ ಪತಿತವರ್ಗದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಿಕ್ಕೆ ತೊಂದರೆಯಾದರೆ ಯಾ ಎಲ್ಲಿಯಾದರೂ ಶಾಲೆಗಳೇ ಇಲ್ಲವಾದರೆ ಅಂಥಾ ಕಡೆಗಳಲ್ಲಿ ಮಾತ್ರ ಪತಿತವರ್ಗದವರಿಗೋಸ್ಕರ ಪ್ರತ್ಯೇಕ ಹೊಸ ಶಾಲೆಗಳನ್ನು ಸರಕಾರದವರು ಸ್ಥಾಪಿಸುತ್ತಾರೆ. ೧೯೪೫ನೇ ವರ್ಷದ ಮಾರ್ಚಿ ೫ಗಕ್ಕೆ ಲೇಬರ್ ಶಾಖೆಯವರು ಹೀಗೆ ಸ್ಥಾಪಿಸಿದ ಪ್ರತ್ಯೇಕ ಶಾಲೆಗಳು ೧,೦೦೬ ಇದ್ದವು. ಈ ಶಾಲೆಗಳಲ್ಲಿ ೭,೯೧೬ ಹುಡುಗಿಯರೂ ವಟ್ಟಾರೆ ೫೮,೪೭೧ ವಿದ್ಯಾರ್ಥಿಗಳೂ ಶಿಕ್ಷಣ ಹೊಂದುತ್ತಿದ್ದರು. ಈ ಶಾಲೆಗಳ ಶಿಕ್ಷಕರಲ್ಲಿ ಶೇಕಡಾ ೯೯.೭ರಷ್ಟು ಶಿಕ್ಷಕರು ತರಬೇತಿಹೊಂದಿದವರೇ ಆಗಿದ್ದರು. ದಕ್ಷಿಣ ಕನ್ನಡದಲ್ಲಿ ೪೭ ಅಂಥಾ ಶಾಲೆಗಳಿದ್ದವು; ಅವುಗಳಲ್ಲಿ ೧,೪೭೭ ವಿದ್ಯಾರ್ಥಿಗಳು ಧರ್ಮಾರ್ಥವಾಗಿ ಶಿಕ್ಷಣವನ್ನು ಹೊಂದುತ್ತಿದ್ದರು; ಇವರಲ್ಲಿ ೫೩೨ ಹುಡುಗಿಯರಿದ್ದರು. ಈ ಶಾಲೆಗಳಲ್ಲಿ ಹೊಲಿಗೆ ಮತ್ತು ಇತರ ಕೈಗೆಲಸಗಳನ್ನೂ ಕಲಿಸುತ್ತಾರೆ. ಲೇಬರ್ ಶಾಖೆಗೆ ಸಮ್ಬಂಧ ಪಡದ ಇತರರು ಪತಿತವರ್ಗದವರಿಗಾಗಿಯೇ ಇಟ್ಟ ಶಾಲೆಗಳು ೧೯೪೫ನೇ ಮಾರ್ಚಿ ೫ಗಕ್ಕೆ ವಟ್ಟಾರೆ ೯,೬೧೪ ಇದ್ದವು; ಇವುಗಳಲ್ಲಿ ೫,೭೧,೯೧೪ ವಿದ್ಯಾರ್ಥಿಗಳಿದ್ದರು.

ಪತಿತವರ್ಗದವರಿಗೆ ವಿದ್ಯಾ ಸಮ್ಬಂಧವಾಗಿ ಕೊಡುವ ಸಾಮಾನ್ಯ ರಿಯಾಯಿತಿಗಳನ್ನು ಈ ಕೆಳಗೆ ಕಾಣಿಸಿರುತ್ತದೆ.

ಮಾಧ್ಯಮಿಕ ಶಾಲೆಗಳಲ್ಲಿಯೂ ಉಚ್ಚ ಶಾಲೆಗಳಲ್ಲಿಯೂ ಸಾಮಾನ್ಯವಾಗಿ ಇತರರು ಕೊಡಬೇಕಾದ ಫೀಸಿನ ಅರ್ಧಾಂಶವನ್ನು ಮಾತ್ರ ಅಲ್ಲಿ ಕಲಿಯುವ ಪತಿತವರ್ಗದ ಬಡವಿದ್ಯಾರ್ಥಿಗಳಿಂದ ತಕ್ಕೊಳ್ಳುವರು. ಸಾರ್ವಜನಿಕ ಪ್ರಾಥಮಿಕ ಶಾಲೆಗಳಲ್ಲಿ ಪತಿತವರ್ಗದ ವಿದ್ಯಾರ್ಥಿಗಳು ಫೀಸನ್ನು ಕೊಡಬೇಕಾದ್ದಿಲ್ಲ. ಬಡ ವಿದ್ಯಾರ್ಥಿಗಳಿಗೆ ಬಟ್ಟೆ ಬೂಕುಗಳನ್ನು ಪಡಕೊಳ್ಳುವ ಬಗ್ಗೆ ಲೇಬರ್ ಶಾಖೆಯವರು ಗ್ರಾಂಟನ್ನು ಕೊಡುತ್ತಾರೆ. ಜಿಲ್ಲಾ ಬೋರ್ಡು ವ ಪೌರಸಭೆಗಳ ಕೆಳಗಿರುವ ಮಾಧ್ಯಮಿಕ ಶಾಲೆಗಳಲ್ಲಿ ಕಲಿಯುವ ಪತಿತವರ್ಗದ ಬಡವಿದ್ಯಾರ್ಥಿಗಳಿಗೆ ಸಂಪೂರ್ಣ ಸಂಬಳ ಮಾಫಿ ಮಾಡುವ ಅಧಿಕಾರವನ್ನು ಆಯಾಯಾ ಜಿಲ್ಲಾ ಬೋರ್ಡುವ ಪೌರಸಭೆಗಳಿಗೇನೇ ಈಚೆಗೆ ಕೊಟ್ಟಿದ್ದಾರೆ. ಮಾಧ್ಯಮಿಕ ಶಿಕ್ಷಣ ಮುಕ್ತಾಯದ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕೂತುಕೊಳ್ಳುವರೆ ಇತರ ಉಮೇದ್ವಾರರು ತೆರಬೇಕಾದ ಪರೀಕ್ಷೆಯ ಫೀಸಿನಿಂದ ಪತಿತವರ್ಗದ ಬಡವಿದ್ಯಾರ್ಥಿಗಳನ್ನು ವಿನಾಯಿಸುವರು.

ವಿದ್ಯಾರ್ಥಿವೇತನಗಳು.

ಪತಿತವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ವಿದ್ಯಾ ಇಲಾಖೆಯವರು ಈ ಕೆಳಗೆ ಕಾಣಿಸಿದ ವಿಶೇಷ ತರದ ವಿದ್ಯಾರ್ಥಿವೇತನಗಳನ್ನೂ ಸಂಬಳ ವಿನಾಯಿತಿಗಳನ್ನೂ ಕೊಡುತ್ತಾರೆ:—

ಕ್ರೈಸ್ತಮತಕ್ಕೆ ಸೇರಿದ ಪತಿತವರ್ಗದವರಿಗೆ—ಉಚ್ಚಶಾಲೆಗಳಲ್ಲಿ ವಿದ್ಯಾರ್ಥಿ ವೇತನಗಳು ೬. Iರಿಂದ VIನೇ ಫಾರ್ಮುಗಳಲ್ಲಿ ಪ್ರತಿ ಫಾರ್ಮಿನಲ್ಲಿ ವಿದ್ಯಾರ್ಥಿವೇತನಗಳು ೧೬; ಸಂಬಳ ವಿನಾಯಿತಿಗಳು ೧೬.

ಕ್ರೈಸ್ತರಲ್ಲದ ಪತಿತವರ್ಗದವರಿಗೆ—ಉಚ್ಚ ಶಾಲೆಗಳಲ್ಲಿ ವಿದ್ಯಾರ್ಥಿವೇತನಗಳು೧೮. Iರಿಂದ VIನೇ ಫಾರ್ಮುಗಳಲ್ಲಿ ಪ್ರತಿ ಫಾರ್ಮಿನಲ್ಲಿ ವಿದ್ಯಾರ್ಥಿವೇತನಗಳು ೧೬, ಸಂಬಳ ವಿನಾಯಿತಿಗಳು ೧೬. ೬ರಿಂದ ೮ನೇ ತರಗತಿಗಳಲ್ಲಿ ವಿದ್ಯಾರ್ಥಿವೇತನಗಳು ೮ಗ, ಮಾಧ್ಯಮಿಕ ಶಾಲೆಗಳ ೪—೫ನೇ ತರಗತಿಗಳಲ್ಲಿ ಸಂಬಳ ವಿನಾಯಿತಿಗಳು ೫ಗ, ವಿದ್ಯಾರ್ಥಿವೇತನಗಳು ೫ಗ.

ಇವುಗಳಲ್ಲದೆ ಪತಿತವರ್ಗದವರಿಗೂ ಲೇಬರ್ ಕಮ್ಮಿಶನರರು ಈ ಕೆಳಗೆ ಕಾಣಿಸಿದ ಗ್ರಾಂಟು, ವಿದ್ಯಾರ್ಥಿವೇತನ, ಸಂಬಳ ವಗೈರೆ ವಿನಾಯಿತಿಗಳನ್ನು ಕೊಡುತ್ತಾರೆ.

ಸರಕಾರದವರು ಉಚ್ಚಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ತಿಂಗಳಿಗೆ ಪ್ರತಿಯೊಬ್ಬನಿಗೆ ರೂ. ೨೫ರ ಪ್ರಕಾರದ ವಾಸ್ತವ್ಯ ವೇತನಗಳನ್ನೂ, ಬೇರೆ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ತಿಂಗಳಿಗೆ ರೂ. ೧೪ರ ಪ್ರಕಾರದ ವೇತನಗಳನ್ನೂ ಕೊಡುತ್ತಾರೆ. ೧೯೪೪—೪೫ರಲ್ಲಿ ಹೀಗೆ ೪೭ ವೇತನಗಳನ್ನು ಕೊಟ್ಟಿತ್ತು; ಇಂಥಾ ವೇತನವೊಂದನ್ನು ನಮ್ಮ ಜಿಲ್ಲೆಯಲ್ಲಿಯೂ ಕೊಡುತ್ತಾರೆ.

ಸಾಮಾನ್ಯ ಶಿಕ್ಷಣದ ಬಗ್ಗೆ ೪ನೇ ತರಗತಿಯಿಂದ ೬ನೇ ಫಾರ್ಮಿನ ತನಕವಿರುವ ದರ್ಜೆಗಳಲ್ಲೆಲ್ಲಾ ತಿಂಗಳಿಗೆ ಒಬ್ಬೊಬ್ಬರಿಗೆ ರೂ. ೨—೪—೦ರಿಂದ ರೂ. ೭೮ಷ್ಟಾಗುವ ವೇತನಗಳನ್ನು ಕೊಡುತ್ತಾರೆ. ೧೯೪೪—೪೫ರಲ್ಲಿ ಹೀಗೆ ವಟ್ಟಾರೆ ೧,೦೭೬—ನಮ್ಮ ಜಿಲ್ಲೆಯಲ್ಲಿ ೨೪ ವೇತನಗಳನ್ನು ಕೊಟ್ಟಿದ್ದರು.

ಲೇಬರ್ ಶಾಖೆಯವರು ಇಟ್ಟ ಹೊಸ್ಪೆಲುಗಳಲ್ಲಿ ಇದ್ದುಕೊಳ್ಳುವ ಬಗ್ಗೆ ಉಚ್ಚಶಾಲೆಗಳಲ್ಲಿ ಶಿಕ್ಷಣ ಹೊಂದುವ ವಿದ್ಯಾರ್ಥಿಗಳಿಗೆ ೧—೨ನೇ ವರ್ಷದ ಶಿಕ್ಷಣ ಹೊಂದುವಾಗ ತಿಂಗಳಿಗೆ ಒಬ್ಬೊಬ್ಬನಿಗೆ ರೂ. ೯ರಂತೆಯೂ ೩—೪ನೇ ವರ್ಷದ ಶಿಕ್ಷಣ ಹೊಂದುವಾಗ ತಿಂಗಳಿಗೆ ಒಬ್ಬೊಬ್ಬನಿಗೆ ರೂ. ೧೪ರಂತೆಯೂ ಸಿಕ್ಕುವ ವೇತನಗಳನ್ನು ಕೊಡುತ್ತಾರೆ.

ಪತಿತವರ್ಗದವರಿಗಾಗಿ ಸರಕಾರದವರು ಮಾಡುವ ಕೆಲಸಗಳು.

ಕೈಗಾರಿಕೆಯ ಜ್ಞಾನವನ್ನು ಪಡಿಯುವ ಬಗ್ಗೆ ಏರ್ಪಡಿಸಿದ ಹಲವು ತರದ ಶಿಕ್ಷಣವನ್ನು ಹೊಂದುವ ವಿದ್ಯಾರ್ಥಿಗಳಿಗೆ ಒಬ್ಬೊಬ್ಬರಿಗೆ ತಿಂಗಳಿಗೆ ರೂ. ೫—೪—೦ರಿಂದ ರೂ. ೭೮ ತನಕ ಸಿಕ್ಕುವ ೧೬೨ ವಿದ್ಯಾರ್ಥಿವೇತನಗಳನ್ನು ಕೊಡುತ್ತಾರೆ.

ಮೋಟಾರು ಓಡಿಸುವ ಮತ್ತು ಮೋಟಾರುಗಳ ಯಂತ್ರ ವಿಷಯದ ಜ್ಞಾನವನ್ನು ಕಲಿಯುವ ಬಗ್ಗೆ ತಿಂಗಳಿಗೆ ಒಬ್ಬೊಬ್ಬರಿಗೆ ರೂ. ೨೦ರಂತೆ ಸಿಕ್ಕುವ ೭ ವೇತನಗಳನ್ನು ೧೯೪೪—೪೫ರಲ್ಲಿ ಕೊಟ್ಟಿತ್ತು. ೧೯೪೪—೪೫ರಲ್ಲಿ ತಿಂಗಳಿಗೆ ರೂ. ೪ರಂತೆ ಸಿಕ್ಕುವ ೪ ವೇತನಗಳನ್ನು ವಾಣಿಜ್ಯ ಶಿಕ್ಷಣ ಪಡಿಯುವವರಿಗೆ ಕೊಟ್ಟಿದ್ದರು. ಪತಿತವರ್ಗಕ್ಕೆ ಸೇರಿದ ಯೋಗ್ಯ ವಿದ್ಯಾರ್ಥಿಗಳಿಗೆ ಅವರು ಪರೀಕ್ಷೆ ಬಗ್ಗೆ ಕಟ್ಟಬೇಕಾದ ಫೀಸನ್ನು ಲೇಬರ್ ಶಾಖೆಯವರು ಕೊಡುತ್ತಾರೆ.

ತರಬೇತಿಯನ್ನು ಹೊಂದುವ ಉಪಾಧ್ಯಾಯರಿಗೆ ಕೊಡುವ ಸಂಬಳ (ಸ್ಟೈಪೆಂಡು).

ಕೆಳ ಪ್ರಾಥಮಿಕ ತರಗತಿಯ ಉಪಾಧ್ಯಾಯರು ತರಬೇತಿಯನ್ನು ಹೊಂದುವಾಗ ಸಾಮಾನ್ಯವಾಗಿ ಸರಕಾರದವರು ಅವರಿಗೆ ತಿಂಗಳಿಗೆ ರೂ. ೫ರಂತೆ ಸಂಬಳ ಕೊಡುತ್ತಾರೆ. ಪತಿತವರ್ಗಕ್ಕೆ ಸೇರಿದ ಉಪಾಧ್ಯಾಯರಿಗೆ ಮಾತ್ರ ಇಂಥಾ ಶಿಕ್ಷಣಕಾಲದಲ್ಲಿ ವಿದ್ಯಾಶಾಖೆಯವರು ತಿಂಗಳಿಗೆ ರೂ. ೬ರಂತೆ ಸಂಬಳ ಕೊಡುತ್ತಾರೆ. ಲೇಬರ್ ಶಾಖೆಯವರು ತಮ್ಮ ಕೆಳಗಿರುವ ಶಾಲೆಗಳ ಉಪಾಧ್ಯಾಯರು ತರಬೇತಿಯನ್ನು ಹೊಂದುವಾಗ ತಿಂಗಳಿಗೆ ಪ್ರತಿಯೊಬ್ಬನಿಗೆ ರೂ. ೧೦—೮—೦ರಂತೆ ಸಂಬಳ ಕೊಡುತ್ತಾರೆ.

(ಮುಂದರಿಯುವುದು.)

CEMENT MERGER SUPPLEMENT

ಅಸೋಸಿಯೇಟೆಡ್ ಸಿಮೆಂಟ್ ಕಂಪೆನಿಸ್ ಲಿಮಿಟೆಡ್‌ನ ಪ್ರಥಮ ವಿೂಟಿಂಗಿಗೆ ಡ್ಯಾರೆಕ್ಟರರು ದಯಮಾಡುವದು.



ಅಸೋಸಿಯೇಟೆಡ್ ಸಿಮೆಂಟ್ ಕಂಪೆನಿಸ್ ಲಿಮಿಟೆಡ್‌ನ ಹೊಸ ಕಟ್ಟಡ—"ದಿ ಏಸ್ಪ್ಲನೆಡ್ ಹೌಸ್"—ಅದೊಂದು ಅರಮನೆ.

ಅಸೋಸಿಯೇಟೆಡ್ ಸಿಮೆಂಟ್ ಕಂಪೆನಿಸ್ ಲಿಮಿಟೆಡ್‌ನ ಪ್ರಥಮ ಚೆಯರ್‌ಮ್ಯಾನರಾದ ಸರ್ ಎನ್. ಬಿ. ಸಕಲಾತ್‌ವಾಲಾ, ಕೆ. ಟಿ. ಸಿ. ಐ. ಈ.ಯವರು ಮತ್ತು ಮಿ|| ಜೆ. ಆರ್. ಡಿ. ತಾತಾರವರು.



ಮುಂಬಾಯಿ "ಏಸ್ಪ್ಲನೆಡ್ ಹೌಸ್"ನಲ್ಲಿ ಇತ್ತೀಚೆಗೆ ಜರುಗಿದ ಅಸೋಸಿಯೇಟೆಡ್ ಸಿಮೆಂಟ್ ಕಂಪೆನಿಸ್ ಲಿಮಿಟೆಡ್‌ನ ಡ್ಯಾರೆಕ್ಟರರ ಪ್ರಥಮ ವಿೂಟಿಂಗು.



ಿ ವಾಲ್ಚಂದ್ ಹೀರಾಚಂದ್‌ರವರು ಅಸೋಸಿಯೇಟೆಡ್ ಂಂಟ್ ಕಂಪೆನಿಸ್ ಲಿಮಿಟೆಡ್‌ನ ಇತರ ಡ್ಯಾರೆಕ್ಟರರೊಡನೆ ಕ್ರಾಮುಖ್ಯವಾದ ಮಾತುಕಥೆಗಳನ್ನು ಬೆಳಿಸುತ್ತಿರುವುದು.



ಅಸೋಸಿಯೇಟೆಡ್ ಸಿಮೆಂಟ್ ಕಂಪೆನಿಸ್ ಲಿಮಿಟೆಡ್‌ನ ಹೊಸ ಕಟ್ಟಡದ ಮುಂಭಾಗದ ಒಂದು ದೃಶ್ಯ.

ವಿದೇಶ

ಯಾವತ್ತು ವಿಷವಾಯುಗಳ ಬಾಧೆಯಿಂದ ಹೊರಗಾಗುವ ಒಂದು ಲಂಡನ್ನಿನ ವೆಸ್ಟ್‌ಮಿನಿಸ್ಟರ್ ಆಸ್ಪತ್ರೆಯನ್ನು ೬೫೦,೦೦೦ ಪೌಂಡುಗಳ ವೆಚ್ಚದಿಂದ ಕಟ್ಟುವ ವ್ಯವಸ್ಥೆ ನಡೆದಿದೆ.

ಜರ್ಮನಿಯಲ್ಲಿ ಕುಟುಂಬಪೋಷಣೆಯ ಭಾರ ವಿರುವ ತಂದೆಗೆ ಕೆಲಸವನ್ನು ಒಪ್ಪಿಸುವ ಈ ಯೋಜನೆಯ ದೆಸೆಯಿಂದ ಅಲ್ಲಿನ ಸಾವಿರಾರು ಮುಂದಿ ಹೆಣ್ಣು ಮಕ್ಕಳಿಗೆ ಇದ್ದ ಕೆಲಸಗಳು ಸಿಕ್ಕದಂತಾಗಿದೆ. ಈ ಕಾರಣದಿಂದ ಹಿಟ್ಲರರು ೧೮ ವರ್ಷ ಪ್ರಾಯಕ್ಕೆ ಮಿಗಿರಿದ ೨೫ ವರ್ಷ ಪ್ರಾಯದೊಳಗಿನ ಸುಮಾರು ೧೨ ಸಾವಿರ ಮಂದಿ ಹೆಣ್ಣು ಮಕ್ಕಳಿಗಾಗಿ, ಸುಮಾರು ೪೦೦ ಪೋಷಣಾಲಯಗಳನ್ನೇರ್ಪಡಿಸಿ, ಅಲ್ಲಿ ಅವರಿಂದ ಕೆಲಸವನ್ನೂ ತೆಗೆದುಕೊಳ್ಳುತ್ತಿರುವರು; ತಕ್ಕ ಶಿಕ್ಷಣವನ್ನೂ ಕೊಡುತ್ತಿರುವರು. ಇವರಿಗೆ ನಾಯೀ ತತ್ವೋಪದೇಶವೂ, ಆರೋಗ್ಯವಳ್ಳ ಮಕ್ಕಳ ಹೆರಿಗೆಯ ಕುರಿತಾದ ಸಲಹೆಬೋಧೆಯೂ ಈ ಕ್ಯಾಂಪುಗಳಲ್ಲಿ ಧಾರಾಳವಾಗಿ ನಡೆಯುತ್ತಿವೆ.

ಬೆಲ್ಜಿಯವ್ ದೇಶವು ಫ್ರಾನ್ಸಿನ ಜತೆಯಿಂದ ಕಳಚಿರುವುದರಿಂದ ಬ್ರಿಟನಿಗೆ ಬಹಳ ಬೇಸರವಾಗಿದೆ.

ಜರ್ಮನಿಯಲ್ಲಿ ಚಿಕ್ಕ ವಯಸ್ಸಿನ ವಿವಾಹಗಳ ಕಡೆಗೆ ಜನರ ಮನಸ್ಸು ಹರಿದಿದೆ. ೧೯೩೫ರಲ್ಲಿ ೨೬೦ ಮಂದಿ ಯುವಕರು ತಮ್ಮ ೧೮ನೇ ವರ್ಷ ಪ್ರಾಯದಲ್ಲಿ ಮದುವೆಯಾದರು; ಆಗಲೇ ೧೯—೨೦ ವರ್ಷಗಳ ೨ ಸಾವಿರ ಮಂದಿ ಯುವಕರೂ ವಿವಾಹವಾಡಿ ಕೊಂಡರು. ಮತ್ತೆ ಅಲ್ಲಿ ೧೬ ವರ್ಷದೊಳಗಿನ ೬೩ ಮಂದಿ ಹುಡುಗಿಯರೂ, ೧೮ ವರ್ಷದೊಳಗಿನ ೫ ಸಾವಿರ ಮಂದಿ ಯುವತಿಯರೂ ಮದುವೆಯಾದ ನಿದರ್ಶನಗಳಿರುವುದರಿಂದ ಈ ವಿಷಯದಲ್ಲಿ ಇಂಡಿಯವನ್ನು ಹಂಗಿಸುವವರು ಸ್ವಲ್ಪ ಸುಮ್ಮನಾಗಬೇಕು.

ಈಜಿಪ್ತಿನಲ್ಲಿ ೧೬೫ ವರ್ಷ ಪ್ರಾಯದ, ದೃಢಕಾಯನಾದ ಮಿ. ಸಯ್ಯದ್ ಏ. ಅಪ್ರಾಣಿ ಎಂಬ ವೃದ್ಧನಿರುವನು. ಆತನಿಗೆ ಘನವನ್ನೆಸಗಿದ ಅರಸರಾದ ಫರೋಕಿಯವರು ಭೇಟಿ ಕೊಟ್ಟರು.

ಮೆಡ್ರಿಡ್ ನಗರದ ಕಾಡಾಟದಲ್ಲಿ ಪಂಗಡಗಾರರು ಮುಂದೊತ್ತುತ್ತಿರುವರೆಂದು ವಾರ್ತೆ. ಅವರು ಸ್ಪೈನ್ ಸರಕಾರದ ಸೈನ್ಯಗಳಿಗೆಂದು ಬರುತ್ತಿದ್ದ ಆಹಾರಸಾಮುಗ್ರಿಗಳನ್ನು ತುಂಬಿದ ೫ ಒಂದು ಟ್ರೈನನ್ನು ನಾಶಪಡಿಸಿ, ಫ್ರೆಂಚ್ ಇಗರ್ಜಿಯೊಂದರ ಮೇಲೆಯೂ ಬಾಂಬು ಸುರಿದಿರುತ್ತಾರೆ. ಅಲ್ಲದೆ ಇತರ ರಾಷ್ಟ್ರಗಳ ರಾಯಭಾರಿಗಳನ್ನು ಮೆಡ್ರಿಡಿನಿಂದ ಹೊರಡಿ ಎಂದಿದ್ದಾರೆ. ಭಿನ್ನಭಿನ್ನವಾದ ಶವಗಳನ್ನು ವಿಮಾನದಿಂದ ಕೆಳಗೆ ಬಿಸಾಡುತ್ತ, ಜನಗಳನ್ನು ಹೆದರಿಸುತ್ತಿದ್ದಾರೆ. ಯಥಾಪ್ರಕಾರ, ಬಾಂಬು ಸುರಿದು, ಹೆಂಗಸರು ಮಕ್ಕಳನ್ನು ಕೊಲ್ಲುವ ಕ್ರೂರ, ಭಯಾನಕ ಕಾರ್ಯವು ಸಾಗುತ್ತಲೇ ಇದೆ. ಇದೇ ರೀತಿ, ತಾವು ಆಕ್ರಮಿಸಿದ ಪ್ರದೇಶಗಳ ಕೆಲಸಗಾರರನ್ನು ಗುಂಡು ಹೊಡೆದು, ಕೊಲ್ಲುವ ಕೆಲಸವಂತೂ ನಿಂತಿರುವುದೇ ಇಲ್ಲ!

ಕಿಂಗ್ ಜಾರ್ಜರ ಸ್ಮಾರಕದ ಸಂಬಂಧ ಲಂಡನಿನ ಲಾರ್ಡ್ ಮೇಯರರು ಏರ್ಪಡಿಸಿರುವ ಆ ನ್ಯಾಶನಲ್ ಮೆಮೊರಿಯಲ್ ಫಂಡಿಗೆ ಈಗಾಗಲೇ ೩೦೦,೦೦೦ ಪೌರಿಡುಗಳ ಸಂಗ್ರಹವಾಗಿದೆ. ಈಗಲಿನ್ನು ಬೇಕಾಗುಗಳ ಗ್ರಾಹಕರ, ಕಟ್ಟಡಗಳ ಸಂಘಗಳ, ಸೇವಿಂಗ್ಸ್ ಬೇವಣಾತಿಗಳ ಲೆಕ್ಕಗಳಲ್ಲಿ ಇರುವ ಕೆಲವೊಂದು ಚಿಲ್ಲರೆ ಶಿಲ್ಲಿಂಗ್, ಪೆನ್ಸ್‌ಗಳನ್ನೂ ಅಯಾ ಬೇವಣಾತಿದಾರರು ಈ ಫಂಡಿಗೆ ಒಪ್ಪಿಸುವಂತೆ ಕೇಳಿಕೊಳ್ಳುವ ಇದೊಂದು ಹೊಸ ಚಳವಳಿಯೂ ಹೊರಟಿದೆ.

ಸ್ಪೆನಿಶ್ ಸರಕಾರವು ಲೀಗ್ ಕೌನ್ಸಿಲಿನ ಅಧಿವೇಶನವು ಕೂಡಲೇ ನೆರೆಯಬೇಕೆಂದಿದೆ. ಸಹಾಯ ಕೊಡಿರೆಂದು ಬೇಡಲಿಕ್ಕಿಲ್ಲವಂತೆ; ಈಗಿನ ಪರಿಸ್ಥಿತಿ ಎಷ್ಟು ಅಪಾಯಕರವೆಂದು ಸಮಾಲೋಚಿಸುವುದಕ್ಕೇ ಅಂತೆ!

ಪ್ಯಾರೀಸಿನ ವಿಶ್ವವಿದ್ಯಾಲಯದಲ್ಲಿ ವಿಮಾನ ಶಿಕ್ಷಣದ ಅಚಾರ್ಯಸ್ಥಾನವನ್ನು ನಿರ್ಮಿಸಲು ಕಾರಣಭೂತರೂ, ಬ್ರಿಟಿಷ್ ವಿಜ್ಞಾನವಿದ್ಯೆಯ ಒಂದು ಆಚಾರ್ಯಪದವಿಗಾಗಿ ೨೫ ಸಾವಿರ ಪೌಂಡುಗಳನ್ನು ದಾನಮಾಡಿದವರೂ ಆದ ಸರ್. ಬೇಸಿಲ್ ಜ್ಹಾರೋಫ್, ಜಿ. ಬಿ. ಇ., ಜಿ. ಸಿ. ಬಿ., ಡಿ. ಸಿ. ಎಲ್. ಇವರು ನಿಧನ ಹೊಂದಿದರು.

ಸ್ಪೈನಿನಲ್ಲಿ ಜನರಲ್ ಫ್ರಾಂಕೋರವರ ಅಧಿಕಾರವನ್ನೊಪ್ಪಿಕೊಳ್ಳಬೇಕೆಂದು ಐರಿಷ್ ಫ್ರೀ ಸ್ಟೇಟಿನ ಡಯಲ್ ಸಭೆಯಲ್ಲಿ ಬಂದ ಒಂದು ಸೂಚನೆ, ಮಿ. ಡಿ ವೇಲಾರರವರಿಂದಲೇ ತಿರಸ್ಕರಿಸಲ್ಪಟ್ಟು, ಬಹುಮತ ಪಡೆಯದೆ, ಮುರಿದು ಬಿದ್ದಿತು.

ಸ್ಪೆಯಿನಿಗೆ ಯುದ್ಧಸಾಮುಗ್ರಿಗಳನ್ನು ತಮ್ಮಲ್ಲಿಂದ ಸಾಗಕೂಡದೆಂದು ಬ್ರಿಟಿಷ್ ಸರಕಾರವೂ, ಸಾವೆ ಸರಕಾರವೂ ಕಟ್ಟಾಜ್ಞೆಗಳನ್ನು ಹೊರಡಿಸಿವೆ.



1. 8 prizes of Rs. 5,000/— each to solvers of all correct solution.
2. 50 prizes of Rs. 100/— each to the senders of 2 squares correct.
3. 100 prizes of Rs. 10/— each to the senders of 1 square correct.
4. 200 prizes of beautiful Wrist Watches, priced Rs. 20/—, having unbreakable machine and glasses to all senders of 25 or more entries.

GUARANTEE:—All prize amounts are guaranteed. All correct solver will get Rs. 5,000/— each. Senders of 2 squares correct will get Rs. 100/—, and one square correct Rs. 10/— each. Senders of 25 or more entries are assured to get the Wrist Watch.

5. To all such entrants, whose entries are registered serially in our register on figures like 5, 15, 25 etc., a 14 Ct. R. D. Fountain Pen will be given free.
6. To all such entrants whose entries are registered on 10, 20, 30 etc., a pocket Watch, guaranteed 5 years, will be given free.
7. To all entrants whose entries are registered on 100, 200, 300 etc., a beautiful Victoria Double Spring Portable Gramophone will be given.

GUARANTEE:—Every entrant has a chance to get every prize. We guarantee to give benefit after every 4 numbers. Senders of 5 entries are assured to get prize item No. 5 but with a strong chance to get item 6 or even 7. Senders of 10 Entries are assured to get item 6, but with a chance to get No. 7. Senders of 100 entries are assured to get item 7, thus each entrant has a chance to prize items 5, 6 or even 7.

Entry fee Rs. 1/4/—

Closing date 3—12—36.

No. 1.		
		31
	30	
29		

No. 2.		
		41
	40	
39		

No. 3.		
		51
	50	
49		

Complete the above squares No. 1, 2 and 3 by using such figures, so that the total in each Row, Column and crosswise should in square No. 1 be 90, in square No. 2 be 120, and in square No. 3 be 150. One figure must be used once only in each square. One can send as many entries as one wants on plain paper, along with an entry fee of Rs. 1/4/— per entry of 3 squares, either by Postal Order, or Money Order, but the M.O. receipt must be attached to the entry, otherwise the entry will be disqualified. Entrants must write their full name and address on the entries, and also on M.O. Coupon. In order to win, entries must tally figure by figure and square by square with our sealed key solution which has been deposited in the Bank. One entrant will be entitled to one of the prizes of the highest value. Entry fee once received will not be refunded. Prizes will be declared on 15th and send for publications immediately. Direct results will only be sent to such entrants who send self addressed covers along with entry.

VICTORIA COMPETITION,
Girgaum, BOMBAY, 4.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲ ನಂಬ್ರ 536/1936.

1. ಸೇವಗುರ ಕೃಷ್ಣ ಕಾಮತ್
2. ಸೇವಗುರ ಮುಕುಂದ ಯಾನೆ ನರಸಿಂಹ ಕಾಮತ್ } ವಾದಿರು.

ಮತ್ತು

ಸುಜೀರ ಅನಂತ ನಾಯ್ಕ—ಪ್ರತಿವಾದಿ.

ಮೇಲಿನ ಪ್ರತಿವಾದಿ ಸುಜೀರ ಅನಂತ ನಾಯ್ಕರಿಗೆ ಈ ಮೂಲಕ ತಿಳಿಯಪಡಿಸುವ ದೇನೆಂದರೆ:—

ನೀವು ವಾದಿರ ಭಂಡಸಾಲೆಯಲ್ಲಿ ನಡಿಸಿದ ಲೇವಾದೇವಿ ಬಾಬ್ತು ನಿಮ್ಮಿಂದ ವಾದಿರಿಗೆ ಬರತಕ್ಕ ರೂಪಾಯಿ 38—14—6 ಬಗ್ಗೆ ಅವರು ದಾಖಲು ಮಾಡಿದ ಮೇಲಿನ ವ್ಯಾಜ್ಯವು ತಾರೀಕು 21—12—1936ಕ್ಕೆ ತನಿಕೆಗೆ ಇಟ್ಟಿರುತ್ತದೆ. ಆದುದರಿಂದ ಆ ದಿವಸ ನೀವು ಖುದ್ದಾಗಲಿ, ವಕೀಲರ ಮುಖಾಂತರವಾಗಲಿ ಹಾಜರಾಗಲಿಕ್ಕೆ ತಪ್ಪಿದರೆ ಸದ್ರಿ ವ್ಯಾಜ್ಯವು ನಿಮ್ಮ ಗೈರುಹಾಜರಿಯಲ್ಲಿ ಮುಂದರಿಸಲಾದೀತು. ತಿಳಿದಿರುವುದು.

ಮಂಗಳೂರು, 30-11-1936. } B. Sriniyasa Pai, Vakil for Plff.

ಸುರಕ್ಷಿತ ಮಿತವ್ಯಯ

ಸೂಕ್ಷ್ಮ ಬಟ್ಟೆಗಳಿಗೆ ತಕ್ಕ ಸಾಬೂನು

ಟಾಟಾ ಸೇಲ್ಸ್ ಶಾಖೆ
1, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು
ದಿ ತಾತಾ ಆಯಿಲ್ ಮಿಲ್ಸ್ ಕೊ., ಲಿಮಿಟೆಡ್,
ತಾತಾಪುರಂ ಮತ್ತು ಬೊಂಬಯಿ.

IMPERIAL BANK OF INDIA.
ಇಂಪೀರಿಯಲ್ ಬೆಂಕ್ ಒಫ್ ಇಂಡಿಯಾ.

Reserves exceed Rs. 5 crores. ಕ್ಷೇಮನಿಧಿಯು ರೂ. 5 ಕೋಟಿ ಮಿಕ್ಕಿದೆ.

More than 200 branches and offices throughout India & Burma, a branch in Colombo and a branch in London.

Correspondents all over the world.

Every type of Banking business, both inland and foreign, transacted.

Advances on Government securities and gold at very fine rates.

For full particulars apply to the MANGALORE BRANCH.

ಭಂಗಾರದ ನಗೆಗಳ ಈಡಿನ ಮೇಲೆ ಬಹು ಕಡಿಮೆ ಬಡ್ಡಿಯಲ್ಲಿ ಸಾಲಗಳನ್ನು ಕೊಡಲಾಗುವುದು.

ಸಾಲದ ಮೊಬಲಗು ನೂರಕ್ಕೆ ಕಡಿಮೆಯಾದರೆ ವರ್ಷಕ್ಕೆ ಸೇಕಡಾ 7ರ ಬಡ್ಡಿ.

100ರಿಂದ 499ರ ವರೆಗೆ ಸೇಕಡಾ 6ರ ಬಡ್ಡಿ. 500 ಯಾ 500ಕ್ಕೆ ಮೇಲ್ಪಟ್ಟ ಸೇಕಡಾ 5ರ ಬಡ್ಡಿ.



ಸದ್ಗುಣಗಳಿಗೆ ಸತ್ಕಾರ್ಯಗಳೇ ಪ್ರತಿಫಲರೂಪವಾಗಿವೆ. —ಸೊಕ್ತ ಮುಕ್ತಾವಳಿ.

XVIII] ಮಂಗಳೂರು, ತಾ. ೧—೧೨—೧೯೫೬ [೬೯
ರಲಜಳ ಧಾತು ಸಂ ಕಾರ್ತಿಕ ಬ ೩ ಕುಜವಾರ

ಕರ್ಣಾಟಕ ಏಕೀಕರಣವೂ ಕರ್ಣಾಟಕ ಸಂಸ್ಥೆಗಳೂ.
[ಲ್ಯಾಂಡ್ ಇನ್‌ವೆಸ್ಟ್‌ಮೆಂಟ್ ಟ್ರಸ್ಟ್]

ಕರ್ಣಾಟಕದ ಏಕೀಕರಣದ ಮಹತ್ಕಾರ್ಯದಲ್ಲಿ, ಕರ್ಣಾಟಕದ ವಿವಿಧ ಪ್ರದೇಶಗಳಲ್ಲಿರುವ, ಹಲವು ಬಗೆಯ ವ್ಯವಹಾರ ಕಾರ್ಯಕ್ರಮಗಳೆಳೆ, ಅನೇಕಾನೇಕ ಸಂಸ್ಥೆಗಳಿಂದ ಎಷ್ಟೊಂದು ಸಹಾಯವು ಒದಗುತ್ತದೆ ಎಂಬುದನ್ನು ನಾವೆಲ್ಲರೂ ಕೇಳಿ ತಿಳಿದೆವೇ ಆಗಿದ್ದೇವೆ.

ನಮ್ಮ ಜಿಲ್ಲೆಯ ಹಲವು ಬೇಂಕುಗಳೂ, ಒಂದೆರಡು ಇನ್ಸುರೆನ್ಸ್ ಕಂಪೆನಿಗಳೂ, ಮೋಟರ್ ಕಂಪೆನಿಗಳೂ ತಮ್ಮ ಕಾರ್ಯ ಭಾರಗಳನ್ನು ಸಮಗ್ರ ಕರ್ಣಾಟಕದ ಹಲವೆಡೆಗಳಲ್ಲಿ ಪ್ರಸಾರ ಗೊಳಿಸಿದ, ಪ್ರಚಾರಗೊಳಿಸಿದ ಪರಿಣಾಮವಾಗಿ, ಕರ್ಣಾಟಕದ ಏಕೀಕರಣಕ್ಕೆ ಎಷ್ಟು ಪ್ರಯೋಜನವಾಗುತ್ತ ಬರುತ್ತಿದೆ ಎಂಬುದನ್ನು ನಾವು ಕಣ್ಣಾರೆ ಕಂಡುತ್ತಲೂ ಇದ್ದೇವೆ.

ಈ ಸಂದರ್ಭದಲ್ಲಿ, ಇಂತಹ ಏಕೀಕರಣಕ್ಕೆ ಸಹಾಯಕವಾದ ಹತ್ತು ಸಮಸ್ತ ಮುಂದಿಯ ಬೊಡ್ಡ ಸಂಸ್ಥೆಗಳನ್ನು ರಚಿಸುವವರೂ, ಅದರಲ್ಲಿಯೂ ಅದರ ಕಾರ್ಯಭಾರಗಳನ್ನು ನಡೆಸಿ ಕೊಂಡು ಹೋಗುವ ಡೈರೆಕ್ಟರರೂ ಎಷ್ಟು ಸಮರ್ಥರಾಗಿರಬೇಕು, ಕಾರ್ಯದಕ್ಷರಾಗಿರಬೇಕು, ವ್ಯವಹಾರಚತುರರಾಗಿರಬೇಕು ಎಂಬುದನ್ನು ನಾವಿಲ್ಲಿ ಪ್ರತ್ಯೇಕವಾಗಿ ಉಲ್ಲೇಖಿಸಬೇಕಾಗಿಲ್ಲ. ಅಂತಹ ಸಂಸ್ಥೆಗಳ ವೃದ್ಧಿಯೂ, ಕೀರ್ತಿಯೂ ಜವಾಬುದಾರಿಯನ್ನು ಬಲ್ಲ ಅವರ ತಲೆಗೇ ಸುತ್ತಿದೆ.

ನಮ್ಮ ಜಿಲ್ಲೆಯಲ್ಲಿ ಇಂತಹ ಡೈರೆಕ್ಟರ್ ಪದವಿಗೆ ಸರ್ವ ಪ್ರಕಾರದಿಂದಲೂ ಯೋಗ್ಯರೆನಿಸಿರುವ ತರುಣ ಶ್ರೀಮಂತರಲ್ಲಿ, ವ್ಯಾಪಾರವಿಚಕ್ಷಣರಲ್ಲಿ, ಮೇಧಾವಿಗಳಲ್ಲಿ, ಆಸಕ್ತಿಯಿಂದ, ಸ್ಫೂರ್ತಿಯಿಂದ ಸಂಸ್ಥೆಗಳ ಹಿತಕ್ಕಾಗಿ ಪರಿಶ್ರಮಪೂರ್ವಕವಾಗಿ ದುಡಿಯುವವರಲ್ಲಿ ನಮ್ಮ ಜಿಲ್ಲೆಯ ಸಾಹುಕಾರ್ ಶ್ರೀಯುತ ಎಂ. ವೆಂಕಟೇಶ ಪೈಗಳೂ ಒಬ್ಬರು ಕೀರ್ತಿ ಪಡೆದವರೆಂದು ಇಲ್ಲಿ ಪ್ರಸ್ತಾವಿಸಲು ನಮಗೆ ತುಂಬ ಸಂತೋಷವೆನ್ನಿಸುತ್ತದೆ.

ಸ್ವಲ್ಪ ಸಮಯದ ಹಿಂದೆ, ಇದೇ ಪತ್ರಿಕೆಯಲ್ಲಿ, ಒಂದು 'ಭೂ ವಿನಿಯೋಗದ ಟ್ರಸ್ಟಿನ' ಕುರಿತು ಪ್ರಕಟಿಸಲಾದ ಒಂದು ಲೇಖದ ವಿಚಾರವನ್ನು ನನ್ನ ವಾಚಕರಿಷ್ಟರಲ್ಲಿಯೇ ಮರೆತಿರಲಾರರು. ಈ ವಿಚಾರದಲ್ಲಿ ಈ ಸುಸಂದರ್ಭವನ್ನು ಸಕಾಲದಲ್ಲಿ ಉಪಯೋಗಿಸಿಕೊಂಡು, ಅದೇ ಶ್ರೀ. ಪೈಗಳವರೇ, ಅಂತಹ ಬೊಂದು ಕಂಪೆನಿಯನ್ನೂ ಸ್ಥಾಪಿಸಿರುವರೆಂದೂ ತಿಳುಹಲು ನಮಗೆಷ್ಟು ಸಂತೋಷವಾಗಬೇಡ!

ಸುಪ್ರಸಿದ್ಧರಾದ ಈ ಮಹನೀಯರೊಬ್ಬರ ಹೆಸರೇ, ಜನತೆಯಲ್ಲಿ ವಿಶ್ವಾಸವನ್ನು ಉಂಟುಮಾಡಲು ಸಾಕೆಂದರೂ ಸಾಕಾಗಿದೆ. ಆದರೆ, ಇದರ ಮೇಲೂ, ಆ ಹೊಸ ಸಂಸ್ಥೆಯ ಡೈರೆಕ್ಟರ್ ಮಂಡಲದಲ್ಲಿ ಇವರೊಂದಿಗೆ, ಶ್ರೀಗಳಾದ ನೈಂಪಳ್ಳಿ ರಾಮರಾವ್, ದಿವಾನ್ ಬಹದೂರ್ ಯು. ರಾಮರಾವ್ ಮತ್ತೂ ಅಮ್ಮೆಂಬಳ ಶ್ರೀನಿವಾಸ ಪೈಗಳೇ ಮೊದಲಾದ ಇತರ ಆಢ್ಯ ಗೃಹಸ್ಥರಂತಹವರುಗಳೂ ಇರುವರೆಂದ ಮೇಲೆ, ಈ ಸಂಸ್ಥೆಯ ಸರ್ವತೋಮುಖವಾದ ಅಭಿವೃದ್ಧಿಗೆ ಎಲ್ಲಿಯ ಯಾವ ಹಿಡಿತಡೆ?

ಈ 'ಲ್ಯಾಂಡ್ ಇನ್‌ವೆಸ್ಟ್‌ಮೆಂಟ್ ಟ್ರಸ್ಟ್'ನ ಯೋಜನೆಯೂ, ಸಂಪೂರ್ಣವಾಗಿ, ನಮ್ಮ ಹಿಂದಿನಡೊಂದು ಅಗ್ರಲೇಖದಲ್ಲಿ ಸೂಚಿಸಿದ ಸೂಚನೆಗಳಿಗೆ ಅನುಸಾರವಾಗಿಯೇ ಇದೆ ಎಂದೂ, ಈ ಸಂಸ್ಥೆಗೆ 'ಸದರ್ನ್ ಲ್ಯಾಂಡ್ ಟ್ರಸ್ಟ್, ಲಿಮಿಟೆಡ್' ಎಂಬ ಅನ್ವರ್ಥನಾಮಕರಣ ಮಾಡಿರುವರೆಂದೂ ತಿಳಿಯುತ್ತೇವೆ.

ಕನ್ನಡಿಗರದಾದ ಈ ಮಹಾಸಂಸ್ಥೆಯ ಶಾಲುಗಳನ್ನು, ಕನ್ನಡಿಗರೆಲ್ಲರೂ ಅಭಿಮಾನದಿಂದ ಕೊಂಡು, ಈ ಸಂಸ್ಥೆಯ ಶ್ರೇಯಸ್ಸನ್ನು ಹಾರೈಸುವುದರೊಂದಿಗೇ ಕರ್ಣಾಟಕದ ಏಕೀಕರಣ ಕಾರ್ಯವನ್ನು ಸಾಧಿಸಲೆಂದೂ 'ಕಂಠೀರವ'ನ ಅರಿಕೆ!

ಕರ್ಣಾಟಕ ಏಕೀಕರಣ ಪರಿಷತ್ತು-ಬೆಳಗಾವಿ.

ಕರ್ಣಾಟಕ ಏಕೀಕರಣ ಪರಿಷತ್ತಿನ ಆರನೆಯ ಅಧಿವೇಶನವು, ಬೆಳಗಾವಿಯಲ್ಲಿ, ನಮ್ಮ ಜಿಲ್ಲೆಯ ಶ್ರೀಮಂತರೂ, ಮದ್ರಾಸಿನ ಸುಪ್ರಸಿದ್ಧ ಡಾಕ್ಟರರೂ ಆಗಿರುವ ಶ್ರೀಮಾನ್. ಯು. ರಾಮರಾವ್ ಇವರ ಅಧ್ಯಕ್ಷತೆಯಲ್ಲಿ ಸಂಭ್ರಮಪೂರ್ವಕವಾಗಿ ಜರುಗಿತು. ಕರ್ಣಾಟಕದ ಹಿತೇಚ್ಛುಗಳೂ, ಹಿಂದೆಯೂ, ಇಂದೆಯೂ ಕರ್ಣಾಟಕದ ಏಕೀಕರಣಕ್ಕಾಗಿ ವಿಶೇಷ ಭಕ್ತಿಯಿಂದ, ಸಾಹಸ ಪೂರ್ವಕವಾಗಿ ಕೆಲಸ ಮಾಡಿದವರೂ, ಮಾಡುತ್ತಿರುವವರೂ ಆದ ಈ ಡಾ॥ ರಾಯರನ್ನೇ ಈ ಬಾರಿ ಈ ಪರಿಷತ್ತಿನ ಅಧ್ಯಕ್ಷ ಪೀಠಕ್ಕೆ ಆರಿಸಿದುದು ಕೇವಲ ಯೋಗ್ಯವೂ, ಸಮುಯೋಚಿತವೂ ಆಗಿದೆ ಎಂದು ನಾವಿಲ್ಲಿ ಪರಿಷತ್ತಿನ ವ್ಯವಸ್ಥಾಪಕರನ್ನು ಪ್ರಶಂಸಿಸದೆ, ಅಭಿನಂದಿಸದೆ ಇರಲಾರೆವು.



ಡಾ॥ ರಾಯರು ವಿದ್ವತ್ಪೂರ್ಣವೂ, ಅನುಭವಪೂರ್ಣವೂ ಆದ ತಮ್ಮ ಅಧ್ಯಕ್ಷಭಾಷಣದಲ್ಲಿ ಮುರೆತಿರುವ ಮುಖ್ಯ ವಿಷಯಗಳೊಂದಾದರೂ ಇದ್ದ ಹಾಗಿಲ್ಲ. ಈ ಏಕೀಕರಣದ ಕಾರ್ಯಕ್ಕೆ ತರುಣರೇ ಸಮರ್ಥರು, ಅವರು ಚಳವಳಿ ಹೂಡಬೇಕು; ಹೋರಾಡಬೇಕು ಎಂದು ಅವರ ಬೆನ್ನು ತಟ್ಟಿ, ಕರ್ಣಾಟಕವು ಸ್ವತಂತ್ರ ಪ್ರಾಂತವೆಂದು ಎಂದಾದರೂ ಕೇಳಿದರೆ ಅದೇ ತನ್ನ ಜೀವನದ ಅತ್ಯಂತ ಅಭಿಮಾನಾಸ್ಪದ ದಿನವೆಂದು ಅಭಿಮಾನಪೂರ ಸ್ವರವಾಗಿ ನುಡಿದರು. ಹಿಂದೂದೇಶದ ಪ್ರಾಂತಗಳನ್ನು ಭಾಷಾನುಗುಣವಾಗಿಯೂ, ಜನಾಂಗಸ್ವಭಾವಾನುಗುಣವಾಗಿಯೂ ರಚಿಸಬೇಕೆಂಬುದರ ಕುರಿತು, ಹಲವು ವೈಸರಾಯರಿ ಸದಭಿಪ್ರಾಯಗಳನ್ನು ಉದ್ಧರಿಸಿ, ಕನ್ನಡ ನುಡಿಯ ಸಂಸ್ಕೃತಿಯ ಸಂರಕ್ಷಣೆಗೂ, ಅಭಿವೃದ್ಧಿಗೂ ಏನು ಜೊಡಕಾಗಿದೆ ಎಂಬುದನ್ನು ವಿವರಿಸಿದರು. ಜತೆಯಲ್ಲಿ ಮದ್ರಾಸಿನ ಸರಕಾರದ ಶಿಕ್ಷಣಧೋರಣೆಯಲ್ಲಿ ತೋರಿಬರುವ ಕನ್ನಡದ ಕುರಿತಾದ ಅನಾದರದ ನಿದರ್ಶನಗಳಾಗಿ, ಮದರಾಸಿನ ಕ್ವೀನ್ ಮೇರಿಸ್ ಕಾಲೇಜಿನ ಮತ್ತೂ ಬಳ್ಳಾರಿ ಜಿಲ್ಲೆಯ ಉದಾಹರಣೆಗಳನ್ನೂ ಬೆರಳಿಟ್ಟು ನಿರ್ದೇಶಿಸಿದರು.

ಪ್ರಾಂತಗಳ ಪುನರ್ವಿಭಾಗದ ಯೋಜನೆಯಲ್ಲಿ ಕರ್ಣಾಟಕವು ಮಾತ್ರ ಹೇಗೆ ಸಂಪೂರ್ಣವಾಗಿ ಅಲಕ್ಷ್ಯಿಸಲ್ಪಟ್ಟಿದೆ ಎಂಬುದನ್ನು, ಶ್ರೀಯುತರು, ಬಹಳ ಚೆನ್ನಾಗಿ ನಿದರ್ಶನಕ್ಕೆ ತಂದುಕೊಟ್ಟಿರುವರು. ನಮ್ಮ ಕನ್ನಡಿಗರ ದುರವಸ್ಥೆ ಏನೆಂದೂ ತಿಳಿಸಿರುವರು. 'ಕೌನ್ಸಿಲ್ ಆಫ್ ಸ್ಟೇಟಿನಲ್ಲಿ' ಕರ್ಣಾಟಕವು ಪ್ರತ್ಯೇಕ ಪ್ರಾಂತವಾಗಿರಲು ತಾವು ನಡೆಯಿಸಿದ ಪ್ರಯತ್ನಗಳೇನೆಂದು ನಿರೂಪಿಸಿ, ಕರ್ಣಾಟಕವನ್ನು ಒಟ್ಟು ಕೂಡಿಸಿದರೆ ೮ ಮಿಲಿಯ ಪ್ರಜೆಗಳ, ೩೫,೪೦೦ ಚದರ ಮೈಲುಗಳ ಒಂದು ಸಂಯುಕ್ತ ಕರ್ಣಾಟಕ ರಾಷ್ಟ್ರವಾಗುವುದೆಂದೂ, ಕರ್ಣಾಟಕ ಪ್ರಾಂತದ ಒಟ್ಟು ಆದಾಯವಾದ ೨೬೮ ಲಕ್ಷದಲ್ಲಿ ಖರ್ಚು ೨೧೦ ಲಕ್ಷ ಹೋಗಲಾಗಿ ಉಳಿವ ೪೮ ಲಕ್ಷದಿಂದ ನ್ಯಾಯವಿಧಾಯಕ ಸಭೆ, ಗವರ್ನರ್ ಮೊದಲಾದವರ ಇತರ ವೆಚ್ಚಗಳನ್ನೂ ಸಹಿಸಬಹುದೆಂದೂ ಸೂಚಿಸಿದರು.

'ಸಣ್ಣ ಸಣ್ಣ ಪ್ರಾಂತಗಳನ್ನು ರಚಿಸುವುದರಿಂದ ಅವುಗಳ ಆಡಳಿತವು ದುರ್ಬಲವಾಗುತ್ತದೆ' ಹೀಗೆಂಬ ಭೀತಿಯನ್ನು ಸರಕಾರದ ಕರ್ಣಧಾರರು 'ಕೌನ್ಸಿಲ್ ಆಫ್ ಸ್ಟೇಟಿನಲ್ಲಿ' ವ್ಯಕ್ತಪಡಿಸಿದ ಸಂಬಂಧ, ರಾಯರದಕ್ಕೆ ಹೇಳುತ್ತಿರುವ ಸಮಾಧಾನವಿದು:— 'ಅಮೆರಿಕದ ಯುನೈಟೆಡ್ ಸ್ಟೇಟ್ಸ್‌ನಲ್ಲಿ ಸಣ್ಣ ದೊಡ್ಡ ೪೮ ಪ್ರಾಂತಗಳು ಸ್ವತಂತ್ರವಾಗಿರುತ್ತವೆ. ಇವುಗಳಲ್ಲಿ ಬಲು ಚಿಕ್ಕ ಪ್ರಾಂತದ ವಿಸ್ತಾರ ೭೦ ಚದರ ಮೈಲು; ಬಲು ದೊಡ್ಡ ಪ್ರಾಂತದ ವಿಸ್ತಾರ ಒಂದು ಲಕ್ಷ ಚೆದರ ಮೈಲು. ಸ್ವಿಜರ್‌ಲ್ಯಾಂಡ್ ದೇಶವು ೧೫,೯೫೧ ಚದರ ಮೈಲು ವಿಸ್ತಾರವಾಗಿದ್ದು, ೩,೪೧೫,೩೪೧ ಜನಸಂಖ್ಯೆಯಿಂದ ಕೂಡಿದ್ದರೂ ಭಾಷಾನುಗುಣವಾದ ೨೨ ಪ್ರಾಂತಗಳುಳ್ಳುದಾಗಿದೆ. ಪ್ರತಿಯೊಂದು ಪ್ರಾಂತವೂ ಸ್ವತಂತ್ರ! ಇವುಗಳಲ್ಲಿ ಒಂದೂ ನಮ್ಮ ಯಾವುದಾದರೂ ಎರಡು ತಾಲೂಕುಗಳಿಗಿಂತ ಹೆಚ್ಚು ವಿಸ್ತೃತಿಯನ್ನು ಹೊಂದಿಲ್ಲ. ಅಧಿಕಾರಿಗಳು ತಮ್ಮ ಪ್ರಭುತ್ವದ ಪ್ರಭಾವವನ್ನು ತೋರ್ಪಡಿಸದಿದ್ದರೆ, ಹೊಸ ಪ್ರಾಂತಗಳು ಹೊಸ ರೀತಿಯಲ್ಲಿ ಅಭಿವೃದ್ಧಿ ವಿಕಾಸವನ್ನು ಹೊಂದಬಲ್ಲವು'.

'ಕನ್ನಡಿಗರ ಕರ್ತವ್ಯ'ಗಳ ಕುರಿತು ಶ್ರೀ. ರಾಯರು ಹೀಗೆಂದಿರುವರು:— 'ಕರ್ಣಾಟಕ ಏಕೀಕರಣ ಪ್ರಯತ್ನದ ಅಂಗವಾಗಿ, ಕನ್ನಡ ನಾಡಿನ ಎಲ್ಲ ಭಾಗಗಳಲ್ಲಿಯೂ ರಾಷ್ಟ್ರಸಭೆಯ ಸದಸ್ಯರನ್ನೇ ಹೊರತಾಯ ಮದ್ರಾಸುಗಳ ನ್ಯಾಯವಿಧಾಯಕ ಸಭೆಗೆ ಆರಿಸಬೇಕೆಂಬ ಪ್ರಚಂಡ ಚಳವಳಿಯನ್ನು ಹೂಡಬೇಕು. ಇದರಿಂದಲೆ ನಮ್ಮ ಅಭ್ಯುದಯವಾಗಬೇಕಾಗಿದೆ. ರಾಷ್ಟ್ರಸಭೆಗೆ ಸೇರದ ಇತರ ಪಕ್ಷಿಯರು ಜಯ ಹೊಂದುವ ಸಂದರ್ಭವಿರುವಲ್ಲಿ, ಅಂಥವರು ಕರ್ಣಾಟಕದ ಏಕೀಕರಣ, ಪ್ರಾಂತರಚನೆಯ ಬಗ್ಗಾಗಿ ಪ್ರಯತ್ನಪಡಬೇಕೆಂದೂ ಅವರಿಗೆ ತಿಳಿಸುವದು, ಕನ್ನಡಿಗ ಮತದಾರರ ಕರ್ತವ್ಯವಾಗಿದೆ. 'ಉತ್ತಿಷ್ಠತ! ಜಾಗ್ರತ!' ಎಂಬ ಉಪನಿಷತ್ತಿನ ವಾಣಿಯನ್ನು ಸ್ಮರಿಸಿ ನಾವು ಕೆಲಸಕ್ಕಿಳಿಯಬೇಕಾಗಿದೆ. ಕೆಲಸಕ್ಕಿಳಿಯದಿದ್ದರೆ ನಮ್ಮ ಪತನವಾಗುವುದರಲ್ಲಿ ಸಂದೇಹವಿಲ್ಲ.'

ಮಂಗಳೂರು

ಶ್ರೀ ಸುಬ್ರಹ್ಮಣ್ಯ ಕೊ-ಒಪರೇಟಿವ್ ಬೇಂಕ್, ಲಿಮಿಟೆಡ್, ಪಂಪ್ ವೆಲ್. ಇದರ ವಿಶೇಷ ಮುಸಾ ಸಭೆಯು (Special General Body Meeting.) ದಶಂಬರ ೬ನೇ ತಾರೀಕು ಆದಿತ್ಯವಾರ ಸಂಜೆ ಘಂಟೆ ೪ಕ್ಕೆ ಸರಿಯಾಗಿ ಕಛೇರಿಯಲ್ಲಿರುವ ಮುಚ್ಚಾದೊಕಟ್ಟಡದ ಮಾಳಿಗೆಯಲ್ಲಿ ಜರುಗುವುದು. ಸದ್ರಿ ಬೇಂಕಿನ ಎಲ್ಲಾ ಮೆಂಬರರೂ, ಸಹಾನುಭೂತಿಯುಳ್ಳವರೂ ಹಾಜರಾಗಬೇಕಾಗಿ ಕಾರ್ಯದರ್ಶಿಗಳು ಕೋರುತ್ತಾರೆ.

ನಮ್ಮ ಜಿಲ್ಲೆಯ ಸಾರಸ್ವತ ಸಮಾಜದ ಸುಪ್ರಸಿದ್ಧ ಮಹಿಳೆಯರಾದ ವಯೋವೃದ್ಧ ಶ್ರೀಮಾನ್ ಎಚ್. ನಾರಾಯಣ ರಾವ್, ಎಂ. ಎ., ಇವರು, ಕೊಯಮುಡ್ತೂರಿನ ತಮ್ಮ ಸ್ವಂತ ಸಹೋದರ ಸಂಬಂಧಿಗಳ ಮನೆಯಲ್ಲಿ ಈಚೆಗೆ ದೈವಾಧೀನರಾದರೆಂದು ತಿಳಿಸಲು ತುಂಬಾ ವ್ಯಸನ ಪಡುತ್ತೇವೆ. ಇವರಿಗೆ ಅವಸಾನಕಾಲದಲ್ಲಿ ೭೮ ವರ್ಷ ವಯಸ್ಸು. ಮೃತರ ಕುಟುಂಬಕ್ಕೆ ನಮ್ಮ ಸಹಸಂತಾಪವನ್ನು ಸೂಚಿಸಲಿಚ್ಛಿಸುತ್ತೇವೆ.

ನಮ್ಮ ಜಿಲ್ಲಾ ಮೆಡಿಕಲ್ ಆಫೀಸರರಾದ ಡಾ. ಎಚ್. ಆರ್. ಸದಾಶಿವರಾಯರು ಇದೇ ದಶಂಬರ ತಿಂಗಳ ತಾ. ೧೫ರ ಸುಮಾರಿಗೆ ಉದ್ಯೋಗನಿವೃತ್ತರಾಗಿ ಅವರ ಸ್ಥಾನಕ್ಕೆ ಡಾ. ಕೆ. ಕೃಷ್ಣನ್ ನಾಯರ್ ದಯೆಮಾಡಲಿರುವರೆಂದು ಪ್ರಕಟವಾಗಿದೆ.

ನಮ್ಮ ಮುನಿಸಿಪಲ್ ಕೌನ್ಸಿಲಿನ ಮುಂದಿನ ವಿಂಟಿಂಗು, ಮುನಿಸಿಪಲ್ ಆಫೀಸಿನಲ್ಲಿ ಬರುವ ದಶಂಬರ ತಾ. ೭ನೇ ಸೋಮವಾರ ಸಂಜೆ ಗಂಟೆ ೫-೩೦ಕ್ಕೆ ಜರಗುವುದು.

ಕಲ್ಯಾಣಪುರದಲ್ಲಿ ನಿರ್ಮಾಣವಾಗಿರುವ 'ಕಲ್ಯಾಣಪುರ ಸಕ್ಕರೆ ಕಾರ್ಖಾನೆ, ಲಿಮಿಟೆಡ್' ಎಂಬೀ ಕೈಗಾರಿಕೆ ಸಂಸ್ಥೆಯ ಆರಂಭೋತ್ಸವವನ್ನು, ಇದೇ ದಶಂಬರ ತಾ. ೫ನೇ ಶನಿವಾರ ಸಂಜೆ ಗಂಟೆ ೫ಕ್ಕೆ ನಮ್ಮ ಜಿಲ್ಲಾ ಕಲೆಕ್ಟರರಾದ ಎ. ಡಿ. ಕೆಂಪೆಂಬಿ, ಸಿ. ಐ. ಇ., ಐ. ಸಿ. ಎಸ್. ಇವರು ನೆರವೇರಿಸುವರೆಂದು ಕಾರ್ಖಾನೆಯ ಅಧ್ಯಕ್ಷರು ತಿಳಿಸುತ್ತಾರೆ.

ಮದ್ರಾಸ್ ಸರ್ಕಾರಿಗೆ ಉಮೇದುವಾರರನ್ನಾಗಿ ತಮ್ಮನ್ನಾರಿಸಬೇಕೆಂದು ಪಾರ್ಲಿಮೆಂಟ್ ಬೋರ್ಡಿಗೆ ತಾವು ಹಾಕಿಕೊಂಡಿರುವ ಅರ್ಜಿಯು ಆ ಬೋರ್ಡಿನವರಿಂದ ಅಂಗೀಕೃತವಾದಲ್ಲಿ ತಮಗೂ ಅಥವಾ ಬೋರ್ಡಿನಿಂದ ಆರಿಸಿ ಬರುವ ಇತರ ಉಮೇದುವಾರರಿಗೂ ಮತದಾನ ಮಾಡಬೇಕಾಗಿ ಶ್ರೀ. ಯು. ಸಿ. ಎಸ್. ಭಟ್ಟರವರ ವಿನಂತಿ.

ಹಿಂದೂದೇಶ

ಇದರಿಂದ ದೇಶದ ಸರಕಾರದವರು, ಕೃಷಿಕಾರ್ಯಗಳಿಗಾಗಿ, ಹರೀಜನರಿಗೆ ನೂರಾರು ಎಕರೆ ಸರಕಾರಿ ಭೂಮಿಯನ್ನು ಬಿಟ್ಟುಕೊಡಲು ಒಪ್ಪಿರುತ್ತಾರೆ.

ಜಬಲ್‌ಪುರ ಪ್ರಾಂತದಲ್ಲಿ ಇಬ್ಬರು ಅಣ್ಣತಮ್ಮಂದಿರು—ಹರಿ ಸಿಂಗ್ ಮತ್ತೂ ಜೀವನ್.—ಇವರಿಬ್ಬರ ಹೆಂಡರೊಳಗೆ ಒಂದು ವಿಷ ಒಂದು ಚಿಕ್ಕ ವಿಷಯದಲ್ಲಿ ಜಗಳವುಂಟಾಯಿತು. ಅದರ ಕೊಡೆನೆ, ಮೊದಲೇ ದ್ವೇಷವಿದ್ದ ಈ ಅಣ್ಣತಮ್ಮಂದಿರೂ ಸೇರಿಕೊಂಡು, ಲಾಥಿಪ್ರಯೋಗ ಮಾಡಿಕೊಂಡಲ್ಲಿ ಹರಿ ಸಿಂಗನಿಗೆ ಏಳೆಂಟರೇತ ಗಾಯಗಳಾಗಿ, ಅವನು ಅಲ್ಲಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸತ್ತನು. ತಮ್ಮನಾದ ಜೀವನನು ತನಗಿನ್ನು ಫಾಸಿಯೇ ಗತಿಯೆಂದು ಹೆದರಿ ಅವನೂ ನೇಣು ಹಾಕಿಕೊಂಡು ಸತ್ತನು.

ಪಂಡಿತ ಜಹ್ವರಲಾಲರ ಪುಸ್ತಕವು ಈ ವರ್ಷ ಏಪ್ರಿಲಿನಲ್ಲಿ ಪ್ರಕಟವಾದಂದಿನಿಂದ ಇಲ್ಲಿಯ ವರೆಗೆ ೯ ಸಲ ಪುನಃ ಪುನಃ ಮುದ್ರಿಸಲ್ಪಟ್ಟು ಲಕ್ಷಾಂತರ ಪ್ರತಿಗಳು ಮಾರಿಹೋಗಿವೆ.

ಈ ಬಾರಿಯ ಕಾಂಗ್ರೆಸಿನ ಅಧ್ಯಕ್ಷತೆಗಾಗಿ ಸೂಚಿಸಲಾಗಿರುವ ಹೆಸರುಗಳಿವು—ಪಂಡಿತ ಜಹ್ವರಲಾಲ ನೆಹರೂಯವರು; ಶ್ರೀ. ಸಿ. ರಾಜಗೋಪಾಲಾಚಾರ್ಯ; ಸರ್ದಾರ್ ಪಟೇಲ; ಶ್ರೀ. ಸುಭಾಷ್‌ಚಂದ್ರ ಭೋಸ್; ಖಾನ್ ಅಬ್ದುಲ್ ಗಫೂರ್ ಖಾನ್; ಡಾ॥ ಪಟ್ಟಾಭಿ ಸೀತಾರಾಮಯ್ಯ. ಇವರಲ್ಲಿಬ್ಬರು ತಮಗದು ಬೇಡವೆಂದಿರುವರು.

ದರ್ಭಂಗದ ದಾನಶೂರರಾದ ದಿವಂಗತ ರಾಯ್ ಬಹದೂರ್ ಬಿಂಡೇಶ್ವರಿ ಪ್ರಸಾದ ಸಿಂಗ್‌ರವರು, ಪಾಟ್ನಾ ವಿಶ್ವವಿದ್ಯಾಲಯದಲ್ಲಿ, ಹಿಂದೀ ಸಾಹಿತ್ಯದ ಆ ಒಂದು ಆಚಾರ್ಯ ಸ್ಥಾನದ ನಿರ್ಮಾಣಕ್ಕಾಗಿ, ವರ್ಷಂಪ್ರತಿ ೨೫೦೦ ರುಪಾಯಿಗಳನ್ನು ತಮ್ಮ ಸಂಪಾದನೆಯಿಂದ ಸಲ್ಲಿಸಬೇಕೆಂದು ತಮ್ಮ ಮರಣಶಾಸನದಲ್ಲಿ ಬರೆದಿಟ್ಟ ಮೇರೆಗೆ, ಆ ದಾನವನ್ನು ಆ ವಿಶ್ವವಿದ್ಯಾಲಯದವರು ಸ್ವೀಕರಿಸಿ, ಆ ಸಂಬಂಧ ಒಬ್ಬ ಹಿಂದೀ ಅಧ್ಯಾಪಕರನ್ನು ನೇಮಿಸಲು ಏರ್ಪಾಡು ಮಾಡಿರುವರು.

ರಾಮನಾಡ್ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ತುಂಬಾ ಗಲಭೆ ನಡೆದಿದೆ. ಅಲ್ಲಿ ಮತ ಕೊಡುವ ಪತ್ರಗಳು ಸಕಾಲಕ್ಕೆ ತಲುವದೆ, ನಾಲ್ಕು ಸರ್ಕಲುಗಳ ಚುನಾವಣೆಯು ಕೆಲಸ ನಿಲ್ಲಿಸಲ್ಪಟ್ಟಿತು. ತಿರುಪತ್ತೂರು ತಾಲೂಕಿನಲ್ಲಿ ಒಂದು ಕಡೆ, ಕಾಂಗ್ರೆಸಿನ ಪರವಾಗಿ ಕೆಲಸ ಮಾಡುತ್ತಿದ್ದ ನಾಲ್ಕು ಮಂದಿಯನ್ನು, ಶಾಂತಿಭಂಗದ ಹೆಸರಲ್ಲಿ ಕೈದುಮಾಡಲಾಯಿತು. ವಲ್ಲತ್ತೂರು ಸರ್ಕಲಿನಲ್ಲಿ, ಕೆಲವು ಓಟರರನ್ನು ಬಲೋದ್ಬಂಧ ವಿಕದ ನಿಲ್ಲಿಸಿಟ್ಟ ಹಾಗೂ, ಬಳಿಕ ವೋಟರುಗಳೊಳಗೆ ಪೆಟ್ಟು ಕುಟ್ಟುಗಳಾಗಿ, ಪೋಲಿಂಗನ್ನು ನಿಲ್ಲಿಸಲಾಯಿತೆಂದೂ ಪ್ರಕಟವಾಗಿದೆ. ಪ್ರಾಯಶಃ ಇಲ್ಲಿ ಪುನಃ ಚುನಾವಣೆ ನಡೆಯಬಹುದಾಗಿದೆ. ಕೋವಿಲೂರಿನಲ್ಲಿ ಒಬ್ಬ ಈಮೇದುವಾರರ ಕಡೆಗಾಗಿ ಕೆಲಸ ಮಾಡುತ್ತಿದ್ದ ಏಜಂಟರೊಬ್ಬರಿಗೆ ಪ್ರಹಾರಪೂಜೆಯಾಗಿದೆ. ತಿಕ್ಕುಸೈಯಲ್ಲಿಯೂ ಗಲಭೆಯಾಗಿ, ಪೋಲೀಸರು ಬಂದು, ತಾತ್ಕಾಲಿಕವಾಗಿ ಓಟಿನ ಕೆಲಸ ನಿಂತೂ ಇದ್ದಿತು. ಕಂಡದೇವಿಯಲ್ಲಿಯೂ ಅವಾಂತರವಾಗಿ, ಕೊನೆಗೆ ಮೇಜಿಸ್ಟ್ರೇಟರು ಮತಗಳ ಸಂಗ್ರಹದ ಪೆಟ್ಟಿಗೆಗಳನ್ನು ಸುರಕ್ಷಿತವಾಗಿರಿಸುವಷ್ಟರಲ್ಲಿ, ಪೋಲೀಸರು ಬಂದು, ಶಾಂತಿರಕ್ಷಣೆ ಮಾಡಿದರು.

ಫೆಡರಲ್ ಕೋರ್ಟಿನ ಪ್ರಥಮದ ಚೀಫ್ ಜಸ್ಟೀಸರಾಗಿ ಸರ್ ಮೊರಿಸ್ ಗ್ವಾಯೆರರವರೂ ಇತರ ಇಬ್ಬರು ಜಸ್ಟೀಸರಲ್ಲಿ ಸರ್ ಶಾದೀಲಾಲ್ ಮತ್ತೂ ಸರ್ ಅಲ್ಲಾಡಿ ಕೃಷ್ಣಸ್ವಾಮಿ ಮುರಲ್ಲೊಬ್ಬರೂ, ಸರ್ ಅಬ್ದುಲ್ ಖಾದರ್ ಮತ್ತೂ ಸರ್ ಮಹಮ್ಮದ್ ಸುಲೇಮಾನ್‌ರಲ್ಲಿ ಒಬ್ಬರೂ ನೇಮಿಸಲ್ಪಡಬಹುದೆಂದು ವದಂತಿ.

ಮದ್ರಾಸಿನಲ್ಲಿ ಸಿಟಿ ಮುನಿಸಿಪಲ್ ಕೌನ್ಸಿಲ್, ಬರುವ ಜೂಗಳ್ಳಿ ಅಲ್ಲಿಗೆ ಬರಲಿರುವ ಸರ್ದಾರ್ ವಲ್ಲಭ ಭಾಯ್ ಪಟೇಲ್‌ರವರಿಗೆ ಒಂದು ಮಾನಪತ್ರವನ್ನು ಸಮರ್ಪಿಸುವಂತೆಯೂ, ಗುಂಟೂರಿನಲ್ಲಿ ಅನಾಥರಿಗಾಗಿ ೧ ಸಾವಿರ ರುಪಾಯಿಗಳನ್ನು ಸಹಾಯ ಮಾಡುವಂತೆಯೂ ನಿರ್ಧರಿಸಿತು.

ಪಾಟ್ನಾ ವಿಶ್ವವಿದ್ಯಾಲಯದವರು ಅಲ್ಲಿನ ಮೆಟ್ರಿಕ್ಯುಲೇಶನಿನ ಪರೀಕ್ಷೆಗೆ ದೇಶಭಾಷೆಯಲ್ಲಿಯೇ ಶಿಕ್ಷಣವು ಸಿಗುವಂತೆ ನಿರ್ಧರಿಸಿರುವರು. ಈ ಯೋಜನೆಯು ೧೯೪೨ರಲ್ಲಿ ಜಾರಿಗೆ ಬರಲಿದೆ.

ಲಾಹೋರಿನಲ್ಲಿ ಕಾರಿಗೆ ಬೆಂಕಿ ಕೊಟ್ಟು ೨೧ನೆ ಮೊಕದ್ದಮೆ ಮುಂದೆ ಬಂದು, ಈ ಅಪರಾಧಿಗಳನ್ನು ತಲಾಷ್ ಮಾಡಿಕೊಡುವವರಿಗೆ ೨ ಸಾವಿರ ರುಪಾಯಿಗಳ ಬಹುಮಾನವೆಂದು ಸರಕಾರದವರು ಪ್ರಕಟ ಮಾಡಿದ್ದಾರೆ.

ಕಲ್ಕತ್ತಾ ಪ್ರಾಂತದಲ್ಲಿ ತನ್ನ ಮನೆಯಲ್ಲಿಯೇ ನಿರ್ಬಂಧ ವಾಸದಲ್ಲಿರಿಸಲ್ಪಟ್ಟಿದ್ದ ಶ್ರೀ. ಕೃಷ್ಣ ಪಂಕಜ ಗೋಸ್ವಾಮಿ ಎಂಬಾತನು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಅಲ್ಲಹಾಬಾದಿನಲ್ಲಿ ಶ್ರೀ. ಸೆಜ್ಜಾದ್ ಜಾಹೀರ್ ಎಂಬ ಬ್ಯಾರಿಸ್ಟರ್ ಮತ್ತೂ ಸ್ಥಳೀಯ ಸೋಶಿಯಲಿಸ್ಟ್ ಪಂಗಡದ ಸೆಕ್ರಟರಿಯನ್ನು ೧೨ನೇ ಪ್ರಕರಣದಂತೆ ಕೈದು ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ವಿಚಾರಣೆ ನಡೆಯುತ್ತಿದೆ.

ದಿಲ್ಲಿಯ ಬಳಿ, ಇಂಡಿಯದ ಶಿಕ್ಷಣ ಕೇಂದ್ರದ ಒಂದು ವಿಮಾನ ಒಡೆಯಿತು. ಅದರ ಚಾಲಕರಿಗೂ, ಒಬ್ಬ ಪ್ರಯಾಣಿಕರಿಗೂ ಪೆಟ್ಟೇನೂ ಆಗಲಿಲ್ಲ.

ಶ್ರೀ. ಸೆಜ್ಜಾದ ಜಾಹೀರ್ ಎಂಬ ಅಲ್ಲಹಾಬಾದಿನ ಕಾಂಗ್ರೆಸ್ ಸೋಶಿಯಲಿಸ್ಟರ ಕೈದಿನ ಸಂಬಂಧ, ಅವರ ತಂದೆ ಮಗನ ಪರವಾಗಿ ಆಶ್ವಾಸನ ಕೊಟ್ಟು ಆ ಮೊಕದ್ದಮೆಯನ್ನು ಕಿತ್ತುಹಾಕಿದಲ್ಲಿ ಜಾಹೀರರವರು ಆ ಆಶ್ವಾಸನಕ್ಕೂ, ತಮಗೂ ಏನೂ ಸಂಬಂಧವಿಲ್ಲವೆಂದೂ, ತಮ್ಮ ಚಟುವಟಿಕೆಗಳನ್ನು ತಾವು ಮುಂಚಿನಂತೆಯೇ ನಡೆಸುವೆವೆಂದೂ ಮ್ಯಾಜಿಸ್ಟ್ರೇಟರಿಗೆ ತಿಳಿಸಿದ್ದಾರೆ.

ಬಾಬೂ ರಾಜೇಂದ್ರ ಪ್ರಸಾದರವರು ತಮ್ಮ ದಕ್ಷಿಣ ಇಂಡಿಯದ ಪ್ರವಾಸವನ್ನು ಕೈಕೊಳ್ಳುವುದಿಲ್ಲವೆಂದು ತಿಳಿದುಬರುತ್ತದೆ.

ಶ್ರೀ. ಸಿ. ರಾಜಗೋಪಾಲಾಚಾರ್ಯರವರು ಈ ಬಾರಿ ಕಾಂಗ್ರೆಸಿನ ಅಧ್ಯಕ್ಷಪದವಿಯನ್ನು ಸ್ವೀಕರಿಸೆವೆಂದು ಹಿಂದೆಗೆದಿದ್ದಾರೆ.

ಬರುವ ವರ್ಷದ ಮೇ ತಿಂಗಳಲ್ಲಿ ನೆರೆಯಲಿರುವ ಇಂಪೀರಿಯಲ್ ಕಾನ್ಫರೆನ್ಸಿನ ಇಂಡಿಯದ ಪ್ರತಿನಿಧಿಗಳಾಗಿ ಮಹಾರಾಜಾ ಸರ್ ಸಯ್ಯಾಜಿ ರಾವ್ ಗೇಕ್‌ವಾರ ಬಹದ್ದೂರರವರೂ (ಬಡೋದೆ ಮಹಾರಾಜರು), ಗವರ್ನರ್ ಜನರಲರವರ ಎಗ್ಜಿಕ್ಯೂಟಿವ್ ಕೌನ್ಸಿಲಿನ ಮೆಂಬರ್ ಸರ್ ಮಹಮ್ಮದ್ ಝುಫ್ರುಲ್ಲಾರವರೂ ನೇಮಿಸಲ್ಪಟ್ಟಿದ್ದಾರೆ.

ಬರ್ಮದ ಚುನಾವಣೆ ಸಂಪೂರ್ಣವಾದ ಮೇಲೆ ಅಲ್ಲಿನ ಇಬ್ಬರು ಮಿನಿಸ್ಟರರು ರಾಜೀನಾಮೆ ಕೊಟ್ಟು ಅವರ ಜಾಲಿನ ಆಡಳಿತವೀಗ ಗವರ್ನರರ ಕೈಯಲ್ಲಿದೆ.

ರಾವಲ್ಪಿಂಡಿಯಲ್ಲಿ ಸಿಕ್-ಮುಸ್ಲಿಮರೊಳಗೆ ಗಲಭೆ. ಗುರು ನಾನಕ್ ಸಿಂಗರ ದಿನಾಚರಣೆಯಂದು, ಸಿಕ್ಕರ ಮೆರವಣಿಗೆಯು, ಮೊದಲು ನಿಶ್ಚಯಿಸಿದ್ದ ಮಾರ್ಗವನ್ನು ಬಿಟ್ಟು ನಡೆದ ಕಾರಣ ಪೋಲೀಸರು ಬಂದು, ಅವರ ಮೇಲೆ ಕಲ್ಲುಗಳು ಹಾರಿ, ಪೋಲೀಸರು ಲಾತೀ ಚಾರ್ಜನ್ನೇ ಮಾಡಬೇಕಾಯಿತು. ಇದರಿಂದ ಕೆಲವರಿಗೆ ಗಾಯಗಳಾಗಿವೆ. ಈ ಸಂಬಂಧ ೫೫ ಮಂದಿ ಸಿಕ್ಕರ ಕೈದೂ ನಡೆದಿದೆಯಲ್ಲದೆ, ಡಿ॥ ಮ್ಯಾಜಿಸ್ಟ್ರೇಟರು ೧೪ನೇ ಪ್ರಕರಣವನ್ನೂ ಬಜಾಯಿಸಿದ್ದಾರೆ.

ಹೊಸ ದಿಲ್ಲಿಯಲ್ಲಿ ಮುಂದಿನ ಎಸೆಂಬ್ಲಿ ಅಧಿವೇಶನವು ಇದೇ ಬರುವ ಜನವರಿ ತಾ. ೨೫ರಲ್ಲಿ ಆರಂಭವಾಗಲಿದೆ.

ಗಡಿನಾಡಿನಲ್ಲಿ ಫಕೀರರ ಗಡಿಬಿಡಿ! ಅವರ ಸೈನ್ಯಕ್ಕೂ ಬ್ರಿಟಿಷ್ ಸೈನ್ಯಕ್ಕೂ ಕಾಳಗ! ಸರಕಾರದ ಕಡೆಯಲ್ಲಿ ಇದುವರೆಗೆ ೨೦ ಮಂದಿ ಮೃತರಾಗಿದ್ದಾರೆ; ೨೮ ಮಂದಿಗೆ ಗಾಯಗಳಾಗಿವೆ ಎಂದು ಸುದ್ದಿ.

ಇಕ್ಬಲ್ ಸಿಂಗ್ ಹುಂಡಲ್ ಎಂಬಾತನಿಗೆ ಆತನ ಕಮ್ಯೂನಿಸ್ಟ್ ಚಳವಳಿಯ ಸಂಬಂಧ ೨ ವರ್ಷ ಸಜೆಯೂ ಆಗಿದ್ದಿತು; ಆತನಿಗೆ ಸಂಬಂಧಪಟ್ಟ ಳಳಿಳ ರುಪಾಯಿಗಳೂ ಸರಕಾರಕ್ಕೆ ಜಪ್ತು ಆಗಿದ್ದಿತು. ಬೊಂಬಾಯಿಯ ಸ್ಮಾಲ್ ಕಾಸ್ ಕೋರ್ಟಿನ ಚೀಫ್ ಜಸ್ಟೀಸರು ಈಗ ಆ ಹಣವನ್ನು ಮುಟ್ಟುಗೋಲು ಮಾಡಿದ ಬೊಂಬಾಯಿ ಸರಕಾರದ ತೀರ್ಮಾನವನ್ನು ರದ್ದು ಮಾಡಿದರು.

ಸರ್ದಾರ್ ಪಟೇಲರವರೂ ತಮಗೆ ಕಾಂಗ್ರೆಸಿನ ಅಧ್ಯಕ್ಷತನ ಬೇಡವೆಂದಿದ್ದಾರೆ.

ರೋಹಿಲ್‌ಖಂಡ, ಕುಮಾವೂ ರೈಲ್ವೆಯಲ್ಲಿ ಒಂದು ಅನಗಡವುಂಟಾಗಿ ೪೦ ಮಂದಿ ಪ್ರಯಾಣಿಕರಿಗೆ ವಿಶೇಷ ಪೆಟ್ಟಾಗಿದೆ ಎಂದು ಬರೆಲಿಯ ತಂತಿ.

ರಾವ್ ಬಹದೂರ್ ಕೆ. ಸೀತಾರಾಮ ರೆಡ್ಡಿಯಾರರು, ಕಾಂಗ್ರೆಸಿನ ಪರವಾಗಿ ಜುನಾವಣೆಗೆ ನಿಲ್ಲಲಿರುವುದರಿಂದ ಅವರು ಆ ಬಿರುದನ್ನು ತ್ಯಾಗವಾಡಿದ್ದಾರೆ.

ಬೊಂಬಾಯಿಯ ಮಾರುತೀ ದೇವಾಲಯದ ಸಭಾಮಂಟಪದ ನಿರ್ಮಾಣದ ಕುರಿತು ಪ್ರಕಟವಾದ ಕೆಲ ಲೇಖನಗಳ ಸಂಬಂಧ ಬೊಂಬಾಯಿಯ ೧೨ ಪತ್ರಿಕೆಗಳ ಮೇಲೆ ೧೪ನೇ ಪ್ರಕರಣವನ್ನು ಉಪಯೋಗಿಸಲಾಗಿದೆ. ಈ ಸಂದರ್ಭದಲ್ಲಿ, 'ಖಿಲಾಫತ್' ಪತ್ರಿಕೆಯ ೪ ಸಾವಿರ ರುಪಾಯಿಗಳ ಹಿಂದಿನ ಸೆಕ್ಯೂರಿಟಿ ಮುಟ್ಟುಗೋಲಾಯಿತು. 'ಹಿಲಾಲ್' ಮತ್ತೂ 'ಜನ್ಮಭೂಮಿ' ಪತ್ರಿಕೆಗಳಿಂದ ೬ ಸಾವಿರ ರೂಪಾಯಿಗಳ ಠೇವಣಾತಿಯನ್ನು ಕೇಳಲಾಯಿತು.

ಮುನ್ಸೀಗಂಜಿನಲ್ಲಿ ಮಿಸ್ ರೇಣುಕಾ ಎಂ. ಎಸ್. ಇವರು ಪ್ರತಿವಾರವೂ ಪೋಲೀಸ್ ಸ್ಟೇಷನಿಗೆ ಬಂದು ಹಾಜರಿ ಕೊಡಬೇಕೆಂಬ ಅಪ್ಪಣೆಯನ್ನು ಉಲ್ಲಂಘಿಸಿದ ಸಂಬಂಧ ಈಗಿನ್ನು ೪ ವಾರಗಳ ಸಾದಾ ಸಜೆ ವಿಧಿಸಲಾಗಿದೆ.

'ರಂಗೂನ್ ಗ್ಯಾಜಟ್' ಪತ್ರಿಕೆಯ ಲೀಗಲ್ ಮೆಂಟಿನ ಮಾಜಿ ಮೆಂಬರರಾದ ಮಿ. ಎಚ್. ಕೆ. ಹೇಲ್ಸ್‌ರವರ ಕುರಿತು ಆಕ್ಷೇಪಕರವಾದ ಲೇಖನವನ್ನು ಪ್ರಕಟಿಸಿದ ಸಂಬಂಧ, ಆ ಪತ್ರಿಕೆ ಹೇಲ್ಸ್‌ರವರಿಗೆ ೧೦ ಸಾವಿರ ರೂಪಾಯಿಗಳ ಪರಿಹಾರದ್ರವ್ಯ ತೆರಕೆಕ್ಕುವಂದೆಂದು ರಂಗೂನ್ ಹೈಕೋರ್ಟಿನ ತೀರ್ಪು.

ವೈಸರಾಯರ ರಂಗೂನಿನ ಆಗಮ್ಮನಕಾಲದಲ್ಲಿ ಖರ್ಚಿಗೆಂದು ಆ ಕಾರ್ಪರೇಶನ್ ಮಂಜೂರು ಮಾಡಿರುವ ೧೦ ಸಾವಿರ ರೂಪಾಯಿಗಳ ವಿಷಯದಲ್ಲಿಯೂ, ಅಲ್ಲಿನ ಮೇಯರರ ಚೆಕ್ಕಿನ ಸಮಾರಂಭದ ಸಂಬಂಧವಾದ ೨ ಸಾವಿರ ರೂಪಾಯಿಗಳ ವಿಚಾರದಲ್ಲಿಯೂ ಆ ನಗರದ ತೆರಿಗೆದಾರರ ಸಂಘವು ಸಭೆ ಕೂಡಿ, ಅವೆರಡರ ಕುರಿತೂ ನಿಷೇಧಾತ್ಮಕವಾದ ಒಂದು ಠರಾವನ್ನು ಮಾಡಿದೆ.

ದಿವಂಗತ ಪಂಡಿತ ಮೋತೀ ಲಾಲರ ಕಾಲದಲ್ಲಿ ಅವರ ಮೇಲೆ ಬಾಕಿ ಇದ್ದ ೨೦ ಸಾವಿರ ಆದಾಯತೆರಿಗೆಯನ್ನು ಪಂಡಿತ ಜಹ್ವರ ಲಾಲರೀಗ ಸಲ್ಲಿಸಿದ್ದಾರೆ.

ಲಕ್ನೋ ಡಿ॥ ಬೋರ್ಡ್ . ಚೆಯರ್‌ಮ್ಯಾನರಾದ ಶ್ರೀ. ಪಂಡಿತ ಬ್ರಹ್ಮದತ್ತ ಬಜಪಿಯವರ ಮೇಲೆ, ಬೋರ್ಡಿನ ಹಲವು ಮಂದಿ ಮೆಂಬರರು 'ವಿಶ್ವಾಸವಿಲ್ಲದ' ಠರಾವನ್ನು ಪ್ರಯೋಗಿಸಲು ತಯಾರಿಸಿದ್ದಾರೆ. ಇಂತದೇ ಒಂದು ಠರಾವು ಹಿಂದೆ ಇದೇ ವರ್ಷದಲ್ಲಿಯೇ ಅವರ ಮೇಲೆ ಬಂದೂ, ಸಫಲವಾಗದೆಯೂ ಹೋಗಿದ್ದಿತು.

ಬೊಂಬಯಿಯಲ್ಲಿ ಇಪ್ಪೆಲ್ಲ ಭೀಷಣ ಅವಾಂತರಗಳಿಗೆ ಕಾರಣವಾದ ಮಾರುತೀ ದೇವಾಲಯದ ಮಂಟಪದ ಕೆಲಸವು ಪೂರ್ಣವಾಗಿ ಅವಶ್ಯೀಗ ಮುನಿಸಿಪಲ್ ಅಧಿಕಾರಿಗಳು ದೇವಸ್ಥಾನದ ಟ್ರಸ್ಟಿಗಳಿಗಾಗಲೇ ಒಪ್ಪಿಸಿಕೊಡುವರು. ಕಳೆದ ವಾರ ಈ ಗಲಭೆಯ ಸಂಬಂಧ ಒಂದು ಸಾವಿರ ಮಂದಿಯ ಕೈದೂ, ೬೮೬ ಮಂದಿಗೆ ದಂಡನೆಯೂ ನಡೆದಿದೆ.

ಸರ್ದಾರ್ ವಲ್ಲಭಭಾಯ್ ಪಟೇಲರೂ ಶ್ರೀ॥ ಭುಲ್ಲಾಭಾಯ್ ದೇಸಾಯಿಯವರೂ ವೇಷಾವರಕ್ಕೆ ತೆರಳಿ ಅಲ್ಲಿನ ನಾಗರಿಕರಿಂದ ಸತ್ಕರಿಸಲ್ಪಟ್ಟು ಚುನಾವಣೆಯ ಪರವಾದ ಭಾಷಣಗಳನ್ನು ಮಾಡಿದರು.

ಕಾಂಗ್ರೆಸಿನವರು, ಪರೀಕ್ಷಾರ್ಥವಾಗಿ ಒಂದು ಪ್ರಾಂತದಲ್ಲಿ ಮಾತ್ರ ತಮ್ಮವರು ಮಂತ್ರಿಪದವಿಯನ್ನು ನಿರ್ವಹಿಸುವಂತೆ ಏರ್ಪಡಿಸಿಕೊಂಡು ಮುಂದೆ ಅದು ಯಶಸ್ವಿಯಾದಲ್ಲಿ ಇತರ ಪ್ರಾಂತಗಳಿಗೂ ಆ ಧ್ಯೇಯವನ್ನೇ ಅನ್ವಯಿಸಬಹುದೆಂದು ಬೊಂಬಯಿ ವಾರ್ತೆ.

NOTICE OF CREDITORS' MEETING.

In the matter of the Indian Companies Act 1913 *and*

In the matter of the National Emporium (India), Ltd., Mangalore.

(In Liquidation)

Notice is hereby given pursuant to Section 209 of the Indian Companies Act 1913, that a meeting of the Creditors of the above-named Company will be held at Kadri in the office of Liquidator on 20—12—'36 at 11 A. M.

Mangalore, 25—11—'36. } **W. J. V. Abreo, B. A., LL. B.,** *Liquidator.*

FOR SALE.

JUST ARRIVED.

Double Demi Rough 28 lbs. net, (500 Sheets in a ream) Rs. 2/12/- per ream for bale lots.

Black jobbing and news printing inks of best German manufacture are always stocked by us.

For prices etc., please communicate with:—

The Saraswathi Printing Works, Ltd.,

Cantonment, MANGALORE.

ದ. ಕನ್ನಡ

ಮೂಡಬಿದ್ರಿ:—ಶ್ರೀ ತ್ರಿಭುವನ ತಿಲಕ ಜೊಡಾಮಜಿ ಜೈತ್ಯಾಲಯದಲ್ಲಿ ಪರ್ಯಂಪ್ರತಿ ಜರಗಲಿರುವ ಬೀಪಾರಾಧನೆಯು ಇದೇ ಕಾರ್ತಿಕ ಬಹುಳ ಸಪ್ತಮಿ (ತಾ. ೫-೧೨-೩೬ನೇ) ಶನಿವಾರ ಜರಗಲಿರುವುದು.

ಕುಂದಾಪುರ:—ಕಳೆದ ತಾ. ೨೦ರಲ್ಲಿ ನಮ್ಮ ಜಿಲ್ಲೆಯ ದಕ್ಷಿಣೋತ್ತರ ತಾಲೂಕುಗಳ ಸುಪ್ರಸಿದ್ಧ ಅರ್ಥಧಾರಿ ಕೂಡುವಳಿಕೆಯಿಂದ ಇಲ್ಲಿ ಮಾಜಿ ತಾಲೂಕು ಬೋರ್ಡು ಪ್ರೆಸಿಡೆಂಟರೂ, ಪ್ರಮುಖ ವರ್ತಕರೂ ಆಗಿರುವ ಹಲ್ಸನಾಡು ಮಾಪಪ್ಪಯ್ಯ ಪೂಜಾರಿ ಅವರ ಅಧ್ಯಕ್ಷತೆಯಲ್ಲಿ 'ಸುಧಾರಿತ ಯಕ್ಷಗಾನ ಸಭೆ'ಯು ಸಂಭ್ರಮದಿಂದ ಜರಗಿತು. 'ವಾಲಿಸುಗ್ರೀವ ಕಾಳಗ' ಮತ್ತು 'ಶ್ರೀ ಕೃಷ್ಣ ಸಂಧಾನ'ವೆಂಬ ಎರಡು ಪ್ರಸಂಗಗಳು ಜರಗಿದವು. ಈ ಸಭೆಗೆ ಪ್ರೇಕ್ಷಕರಿಗೆ ಟಿಕೇಟಿನಿಂದ ಪ್ರವೇಶವೆಂದು ನಿಶ್ಚಯಿಸಿದ್ದರೂ ಹಳ್ಳಿ ಹಳ್ಳಿಗಳಿಂದಲೂ ಅನೇಕ ಜನರು ನೆರೆದಿದ್ದರು. ಎಷ್ಟೋ ಜನರು ಸ್ಥಳಾಭಾವದಿಂದ ವಾಪಾಸು ಹೋಗ ಬೇಕಾಗಿ ಬಂತು. ರಾತ್ರೆ ೩-೩೦ಕ್ಕೆ ಸಭೆಯು ಅಂತ್ಯ ವಾಯಿತು.

ತಾ. ೩೦ರಲ್ಲಿ ೪-೩೦ಕ್ಕೆ ಸರಿಯಾಗಿ ಬೋರ್ಡು ಹೈಸ್ಕೂಲಿನ ವಠಾರದಲ್ಲಿ ಮಂಗಳೂರು ಸೈಂಟ್ ಎಲೋಸಿಯಸ್ ಕೋಲೇಜಿನ ಹಿರಿಯ ಕನ್ನಡಿಗ ಪಂಡಿತರೂ ಕನ್ನಡ ಸಾಹಿತ್ಯಾಭಿಮಾನಿಗಳೂ ಆಗಿರುವ ಮುಳಿಯ ತಿಮ್ಮಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಸಾಹಿತ್ಯೋತ್ಸವವು ಬಹು ಸಂಭ್ರಮದಿಂದ ಜರಗಿತು. ಶ್ರೀಯುತ ವಿದ್ವಾನ್ ಪಿ. ಕೆ. ಆಚಾರ್ಯರು ಶ್ರೀ. ತಿಮ್ಮಪ್ಪಯ್ಯನವರು ಮಾಡುತ್ತಿರುವ ಕನ್ನಡ ಭಾಷಾದೇವಿಯ ಸೇವೆಯನ್ನು ವಿವರಿಸಿ ಅವರಿಗೆ ನಮ್ಮ ಜಿಲ್ಲೆಯಲ್ಲಿ ಕನ್ನಡದಲ್ಲಿರುವ ಸ್ಥಾನ-ಮಾನವನ್ನು ವಿಶದೀಕರಿಸಿ ಪರಿಚಯಭಾಷಣವನ್ನು ಮಾಡಿದರು. ಉಡುಪಿ ಹಂಡೆ ಶ್ರೀಪಾದ ಪಾಪರು 'ಕನ್ನಡ ಸಾಹಿತ್ಯ'ವೆಂಬ ವಿಷಯದಲ್ಲಿಯೂ, ಶ್ರೀಯುತ ಎಚ್. ಕೃಷ್ಣ ಭಟ್ಟರು ಶ್ರೀ ಭಗವದ್ಗೀತೆಯೆಂಬ ವಿಷಯದಲ್ಲಿಯೂ, ಇತರ ಮಹನೀಯರು ಇತರ ಹಲವು ವಿಚಾರಗಳಲ್ಲಿಯೂ ಭಾಷಣಗಳನ್ನು ಮಾಡಿದರು. ಅಧ್ಯಕ್ಷ ಮಹಾಶಯರು ಕರ್ನಾಟಕ ಕವಿಸಾರ್ವಭೌಮರಾದ ಪಂಪ, ರನ್ನ ಮೊದಲಾದ ಕವಿಗಳ ಪ್ರಶಂಸೆಯನ್ನು ಮಾಡಿ ಕೆಲವು ಶ್ರೇಷ್ಠ ಕವಿತೆಗಳನ್ನು ರಸವತ್ತಾಗಿ ಓದಿ ಮುಕ್ಕಾಲು ಘಂಟೆಯ ಪರೆಗೆ ತಮ್ಮ ಮೃದು ಮಧುರವಾದ ಉಪನ್ಯಾಸವನ್ನು ಮಾಡಿದರು.

ಉಪಾಧ್ಯಾಯರ ಸಹಕಾರ ಸಂಘದ ವರ್ಧಂತಿಯು ತಾ. ೨೧ರಲ್ಲು ಬೋರ್ಡು ಹೈಸ್ಕೂಲಿನಲ್ಲಿ ತಗ್ಗಸೇ ದತ್ತಾತ್ರೇಯ ರಾವ್‌ರವರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರಗಿತು. ಟೀ ಪಾರ್ಟಿಯ ಸತ್ಕಾರವೂ ಇತ್ತು. ಈ ಸಂಘದಲ್ಲಿ ೧೦೦ಕ್ಕಿಂತಲೂ ಹೆಚ್ಚಾದ ಮೆಂಬರರಿದ್ದು ಹತ್ತು ಸಾವಿರಕ್ಕಿಂತಲೂ ಹೆಚ್ಚಾದ ಲೇವಾದೇವಿ ಇದೆ. ಆಡಳಿತೆಯು ಉತ್ತಮ ರೀತಿಯಲ್ಲಿರುತ್ತದೆ.

ಕುಂದಾಪುರದ ಪರ್ಯಾವಧಿ ಕಂಬಳವು ತಾ. ೩೦ನೇ ಸೋಮವಾರ ವೈಭವದಿಂದ ಜರಗಿತು. ೧೦೦ ಜತೆ ಕೋಣಗಳು ಬಂದಿದ್ದುವು.

ಸ್ಥಳೀಯ ಇಗರ್ಜಿಯಲ್ಲಿ ಜರಗುವ ತೇರಾಲಿ ಹಬ್ಬವು ಈ ವರ್ಷವೂ ೨೩—೨೪ರಲ್ಲು ಜರಗಿತು.

ಪಡುಬಿದ್ರಿ:—ಇಲ್ಲಿಯ ಮಾಮೂಲು ಪ್ರಕಾರ ಆಗುವ ತೀಮೆಯ ಕಂಬಳವು ಇದೇ ಧಾತು ಸಂವತ್ಸರದ ಮಾರ್ಗಶಿರ ಶು। ೧೫ಯು ಧನುರ್ಮಾಸ (ಪೆರಾರ್ದೆ) ೮, ತಾರೀಕು ೨೩—೧೨—೧೯೩೬ನೇ ಬುಧವಾರ ರಾತ್ರೆ ಜರಗುವುದು.

The Hindustan Cinema Ltd.

The Extraordinary General Meeting of the shareholders could not proceed to business on 29—11—1936 for want of a quoram. It has been adjourned to Sunday 6—12—1936 at 8-30 A. M. at the premises of the Bank of Mangalore, Ltd., Car Street, Mangalore. The Meeting will proceed to business though there should be no quoram within the prescribed time.

Mangalore, 30-11-1936. } N. Upendra Pai, Managing Director.

CHEAPEST RATE
VALUE BACK IF DISAPPROVED
DECENT, STRONG, ACCURATE & STYLISH W/WATCHES GTD 3 YEARS. ROUND NICKEL 2/14/-, RADIUM DIAL 3/12/-; GOLDEN 3/14/-. SQUARE NICKEL 4/6/-, GOLDEN 4/14/-. RECTANGULAR NICKEL 5/4/-, GOLDEN 6/-. VERY SMALL ROUND NICKEL 5/-, GOLDEN 5/8/-. P/POSTAGE 1/-/-
INT'L FREE EXCH. G.T.CO. 185 MANICKTOLA ST. CALCUTTA

ದಿವಂಗತ ರಾವ್ ಬಹದೂರ್ ಹಟ್ಟಂಗಡಿ ನಾರಾಯಣರಾಯರವರು, ಎಂ. ಎ.

ದಕ್ಷಿಣ ಕನ್ನಡ ಜಿಲ್ಲೆಯ ಚಿತ್ರಾಪುರ ಸಾರಸಸ್ವತ ಬ್ರಾಹ್ಮಣ ವರ್ಗಕ್ಕೆ ಸೇರಿದವರಾಗಿ, ಬಹುಕಾಲ ಮದ್ರಾಸಿನಲ್ಲಿ ವಾಸವಾಗಿದ್ದು ಕೀರ್ತಿಗೊಂಡ ಈ ಮಹನೀಯರು ಕಳೆದ ನವೆಂಬರು ೩೦ನೇ ತಾರೀಖು ಭಾನುವಾರ ಬೆಳಗಿನ ೧೦ ಘಂಟೆಗೆ ಕೊಯಂಬುತ್ತೂರಿನಲ್ಲಿ ಸ್ವರ್ಗಸ್ಥರಾದ ವಿಷಯವನ್ನು ನಮ್ಮ ವಾಚಕ ವರ್ಗಕ್ಕೆ ತಿಳಿಸಲು ತುಂಬ ವ್ಯಸನಪಡುತ್ತೇವೆ.

ಕೀರ್ತಿಶೇಷ ನಾರಾಯಣ ರಾಯರು ಕ್ರಿ. ಶ. ೧೮೬೬ನೇ ಇಸವಿ ಒಕ್ಟೋಬರು ತಿಂಗಳಲ್ಲಿ ಕಾಸರಗೋಡಿನಲ್ಲಿ ಹುಟ್ಟಿದರು. ಇವರ ತಂದೆ ಶ್ರೀ॥ ಸುಬ್ಬರಾಯರೆಂಬವರು ಕಾಸರಗೋಡು ತಾಲೂಕು ಆಫೀಸಿನಲ್ಲಿ ಸ್ವಲ್ಪ ಸಂಬಳದ ಮೇಲೆ ಗುಮಾಸ್ತೆಯಾಗಿದ್ದು, ಇವರಿಗೆ ೪ ವರ್ಷ ತುಂಬುವುದರೊಳಗಾಗಿ ತೀರಿಕೊಂಡುದರಿಂದ, ಇವರ ತಾಯಿ ತನ್ನ ಮೂವರು ಮಕ್ಕಳೊಡನೆ ಮೂಡಬಿದರೆಯಲ್ಲಿ ತನ್ನ ತವರ್ಮನೆಗೆ ಹೊರಟು ಹೋಗಿ ಕೆಲವು ಕಾಲ ಉಳಿಯಬೇಕಾಯಿತು.

ಮಾ॥ ನಾರಾಯಣ ರಾಯರ ಬಾಲ್ಯವಿದ್ಯಾಭ್ಯಾಸವು ಬಂಟವಾಳದಲ್ಲಿ ಆಯಿತು. ಇವರ ಚುರುಕು ಬುದ್ಧಿಯನ್ನೂ ಸೌಜನ್ಯವನ್ನೂ ಕಂಡು ಪ್ರೀತರಾದ ಇವರ ಬಂಧುಗಳೊಬ್ಬರು ಇವರ ಮುಂದಿನ ವಿದ್ಯಾಭ್ಯಾಸದ ವೆಚ್ಚವನ್ನು ವಹಿಸಿದರು. ಇವರು ೧೯೮೮ರಲ್ಲಿ ಮಿಡ್ಲ್ ಸ್ಕೂಲ್ ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ಉತ್ತೀರ್ಣರಾಗಿ, ಮಂಗಳೂರಿನ ಗವರ್ನ್‌ಮೆಂಟ್ ಕಾಲೇಜಿನಿಂದ ಮೆಟ್ರಿಕ್ (೧೮೮೪) ಮತ್ತು ಎಫ್. ಏ. (೧೮೮೬) ಪರೀಕ್ಷೆಗಳಲ್ಲಿ ಮೊದಲನೆಯ ತರಗತಿಯಲ್ಲಿ ತೇರಿ, ಮಿಲ್ಲರ್ ಸ್ಕಾಲರ್‌ಶಿಪ್ ಎಂಬ ಶಿಷ್ಯವೃತ್ತಿಯನ್ನು ಪಡೆದು, ಮದ್ರಾಸಿಗೆ ಬಂದು ಕ್ರಿಶ್ಚಿಯನ್ ಕಾಲೇಜಿನಲ್ಲಿ ಪ್ರಾಣಿಶಾಸ್ತ್ರ (Zoology)ಯನ್ನು ಅಭ್ಯಾಸದ ಮುಖ್ಯ ವಿಷಯವಾಗಿಟ್ಟುಕೊಂಡು, ಬಿ. ಏ.ಗೆ ಓದಿದರು. ೧೮೮೯ರಲ್ಲಿ ಕ್ರಿಶ್ಚಿಯನ್ ಕಾಲೇಜಿನಿಂದ ಭಾಷಾಭಾಗಗಳಲ್ಲಿ ಜಯಿಸಿ, ಪ್ರೆಸಿಡೆನ್ಸಿ ಕಾಲೇಜಿನಿಂದ ಮರು ವರ್ಷ ಪ್ರಾಣಿಶಾಸ್ತ್ರ ದಲ್ಲಿ ಪ್ರೆಸಿಡೆನ್ಸಿಗೆ ಮೊದಲನೆಯವರಾಗಿ ಪ್ರಥಮ ಶ್ರೇಣಿಯಲ್ಲಿ ಕೇರ್ಗಡೆ ಹೊಂದಿದರು. ಬಳಿಕ ಇವರಿಗೆ ಎಂ. ಏ. ಪರೀಕ್ಷೆಯ ಅಭ್ಯಾಸಕ್ಕಾಗಿ ೩೫ರೂ.ಯ ಸರ್ಕಾರೀ ವಿದ್ಯಾವೃತ್ತಿಯು ದೊರೆಯಿತು. ೧೮೯೧ರಲ್ಲಿ ಶ್ರೀಯುತರು ತೊಸಗಿಯಿಂದಲೇ ಬಿ. ಎ.ಗೆ ಓದಿ ಭೂಗರ್ಭಶಾಸ್ತ್ರ (Geology)ದಲ್ಲಿಯೂ ಜಯಿಸಿದರು.

ಆ ಬಳಿಕ ಶ್ರೀ। ನಾರಾಯಣರಾಯರು ಮದ್ರಾಸು ಲಿಟರರಿ ಸೊಸೈಟಿ (Madras Literary Society) ಎಂಬ ದೊಡ್ಡಜೊಂದು ಪುಸ್ತಕ ಭಂಡಾರದಲ್ಲಿ ಸುಮಾರು ಒಂದು ವರ್ಷ ಕಾಲ ಲೈಬ್ರೇರಿಯನ್ನಾಗಿ ಕೆಲಸ ಮಾಡಿದರು. ಇಲ್ಲಿದ್ದಾಗ ಇವರಿಗೆ ಮದ್ರಾಸಿನ ಅನೇಕಾನೇಕ ಯುರೋಪಿಯನ್ ಮತ್ತು ದೇಶೀಯ ಅಧಿಕಾರಿಗಳ ಮತ್ತು ಇತರ ಪ್ರಮುಖರ ಪರಿಚಯಕ್ಕೆ ಅವಕಾಶ ದೊರೆಯಿತು. ೧೮೯೫ನೇ ವರ್ಷದಲ್ಲಿ ಮದ್ರಾಸಿನಲ್ಲಿ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಭೂಗರ್ಭಶಾಸ್ತ್ರವನ್ನು ಬಿ. ಏ.ಗೆ ಓದಿಕೊಳ್ಳಲು ಅವಕಾಶ ಕಲ್ಪಿಸಿದಾಗ ಮಾ॥ಯವರಿಗೆ, ಪ್ರತಿ ಆರು ತಿಂಗಳಿಗೆ ೬೦೦ ರೂ. ವೇತನದ ಮೇಲೆ ಉಪಾಧ್ಯಾಯರಾಗಿ (Temporary Lecturer) ನೇಮಿಸಿದರು. ೧೮೯೬ರಲ್ಲಿ ಇವರು ಎಮ್. ಏ. ಪರೀಕ್ಷೆಯಲ್ಲಿಯೂ ಜಯಿಸಿದರು. ಮತ್ತು ಅಲ್ಲಿಂದ ಕಂಚಿತ್ಕಾಲದೊಳಗಾಗಿ ಇವರನ್ನು ಪ್ರೋತ್ಸಾಹನಾ ನಿಧಿಯ ೧೦೦ ರೂ. ಸಂಬಳದ ಮೇಲೆ ಅದೇ ಉದ್ಯೋಗದಲ್ಲಿ ಅಸಿ. ಪ್ರೊಫೆಸ್ಸರಾಗಿ ಸ್ಥಿರಪಡಿಸಿದರು.

೧೯೦೪ರಲ್ಲಿ ಇವರನ್ನು ಮದ್ರಾಸ್ ವಿದ್ಯಾಶಾಖೆಯ ಗಜೆಟಿಡ್ ಆಫೀಸರಾಗಿ ನಿಯಮಿಸಿ, ೧೯೧೬ರಿಂದ ಮುಂದೆ ಮುಖ್ಯ ಪ್ರೊಫೆಸರ್ ಪದವಿಗೇರಿಸಿದರು. ೧೯೨೦ರಲ್ಲಿ ಇವರನ್ನು ಇಂಡಿಯನ್ ಎಜ್ಯುಕೇಶನಲ್ ಸರ್ವಿಸಿಗೆ (I. E. S.) ಬಡತಿ ಮಾಡಿದರು, ಮತ್ತು ೧೯೨೩ರಲ್ಲಿ ಪೆನ್ಶನು ಪಡೆಯುವ ವರೆಗೂ (ಸುಮಾರು ೩೮ ವರ್ಷ ಕಾಲ) ಇವರು ಒಂದೇ ಕಡೆ ಒಂದೇ ಕೆಲಸ ಮಾಡಿಕೊಂಡಿದ್ದರು.

ಇವರ ನವುಳಿಯ ಮಹತಿಯನ್ನು ಗಮನಿಸಿ ಪ್ರಭುತನಪದವರು ಇವರಿಗೆ ೧೯೩೪ರಲ್ಲಿ 'ರಾವ್ ಬಹದ್ದೂರ್' ಎಂಬ ಪ್ರಶಕ್ತಿಯನ್ನು ಕೊಟ್ಟು ಗೌರವಿಸಿದರು. ಮತ್ತು ಸುಮಾರಾಗಿ ಇದೇ ವೇಳೆಗೆ ಇವರು ಮದ್ರಾಸಿನಲ್ಲಿ ಆನರರಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟರು.

ಮಾ॥ ನಾರಾಯಣರಾಯರು ಮದ್ರಾಸು ಯೂನಿವರ್ಸಿಟಿಯ ಸಿನೇಟು, ಸಿಂಡಿಕೇಟು, ಬೋರ್ಡು ಆಫ್ ಸ್ಟಡೀಸ್ (ಕನ್ನಡ ಮತ್ತು ತೆಲುಗು)ಗಳಲ್ಲಿ ಬಹುಕಾಲ ಸದಸ್ಯರಾಗಿದ್ದರು. ಹಲವು ಸಲ ಕನ್ನಡಕ್ಕೂ ತೆಲುಗಿಗೂ ಅತ್ಯುಚ್ಚ ಪರೀಕ್ಷೆಗಳಿಗೆ ಪರೀಕ್ಷಕರಾಗಿರುತ್ತಿದ್ದರು. ಇದಲ್ಲದೆ ವೈಸೂರು ವಿಶ್ವವಿದ್ಯಾಲಯದೊಡನೆಯೂ ಇವರಿಗೆ ನಿಕಟವಾದ ಸಂಬಂಧ ವಿದ್ದಿತು. ಮದ್ರಾಸು ಗೌ॥ ಟೆಕ್ಸ್ಟ್ ಬುಕ್ ಕಮಿಟಿ, ಸ್ಕೂಲ್ ಬುಕ್ ಅಂಡ್ ಲಿಟರೇಚರ್ ಸೊಸೈಟಿ ಇತ್ಯಾದಿ ಸಂಸ್ಥೆಗಳಲ್ಲಿ ಸದಸ್ಯರಾಗಿ ಬಹುಕಾಲ ಕೆಲಸ ಮಾಡಿರುವರು. ಬೆಂಗಳೂರಲ್ಲಿ ಸಾಹಿತ್ಯ ಪರಿಷತ್ತಿನ ಮೆಂಬರರಾಗಿದ್ದು, ಒಂದೆರಡು ಸಮ್ಮೇಳನಗಳಿಗೂ ಹಾಜರಿದ್ದರು. ಕನ್ನಡದಲ್ಲಿ ಫಿಜಿಯಾಗ್ರಫಿ ಮತ್ತು ಜಿಯಾಲಜಿಗೆ ಸಂಬಂಧಪಟ್ಟಂತೆ 'ಭೂಮಿಶಾಸ್ತ್ರ' ವೆಂಬ ಉತ್ತಮವಾದ ಪುಸ್ತಕವನ್ನು ಬರೆದು ಪ್ರಚುರಗೊಳಿಸಿರುವರು. ಕನ್ನಡದ ಅಭಿವೃದ್ಧಿಯ ವಿಷಯದಲ್ಲಿ ಇವರಿಗೆ ತುಂಬ ಆದರವಿತ್ತು.

ಇವರ ಸ್ವಭಾವವು ಶಾಂತನಾಗಿಯೂ ಜೀವನವು ಸರಳವಾಗಿಯೂ ಇದ್ದಿತು. ಮಿತಭಾಷಿಗಳಾದರೂ ಸ್ನೇಹಿತರಲ್ಲಿ ನರ್ಮಿಲ ಮನಸ್ಸಿನಿಂದ ಧಾರಾಳವಾಗಿ ಮಾತನಾಡುತ್ತಿದ್ದರು. ಆಹಾರವಿಹಾರಗಳಲ್ಲಿ ಖಂಡಿತವಾದ ಕ್ರಮಬದ್ಧತೆಯಿದ್ದಿತು. ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳಲ್ಲಿ ಪ್ರಗತಿಪರವಾದ ಅಭಿಪ್ರಾಯವುಳ್ಳವರಾಗಿದ್ದರು. ಹಲವೆಲ್ಲ ದಾನ ಧರ್ಮಗಳನ್ನು ಮಾಡಿ ತಮ್ಮ ಸಂಪಾದನೆಯನ್ನು ಸದ್ವಿನಿಯೋಗಪಡಿಸಿರುವರು.

ಇವರಿಗೆ ಹುಟ್ಟಿದ ಮೂರು ಮಂದಿ ಹೆಣ್ಣು ಮಕ್ಕಳಲ್ಲಿ ಇಬ್ಬರು ವಿವಾಹಿತರಾಗಿ ಸುಖಿಗಳಾಗಿರುವರು. ಕೀರ್ತಿಶೇಷರ ಆತ್ಮಕ್ಕೆ ಪರಮಾತ್ಮನು ಚಿರ ಶಾಂತಿಯನ್ನು ಕೊಡಲೆಂದು ಪ್ರಾರ್ಥಿಸಿ, ಅವರ ನಿಧನದಿಂದ ಸಂತಪಿಸುವ ಇವರ ಬಂಧುಬಳಗದವರಿಗೆ ನಮ್ಮ ಸಹಾನುಭೂತಿಯನ್ನು ಅರ್ಪಿಸುವೆವು.

ನೀವು ಕಳೆದುಕೊಳ್ಳಲೇ ಬಾರದ ಆನಂದವಿದೇ

ಫೊಟೋಗ್ರಾಫಿ



ಸ್ವಲ್ಪ ಸ್ವಲ್ಪ ವೆಚ್ಚದಿಂದ, ಫೊಟೋಗ್ರಾಫಿ ಉಂಟು ಮಾಡುವ ಅಪ್ಪಟವಾದ ಆನಂದವನ್ನು ಬೇರೆ ಯಾವ ವಿನೋದಕಾಲಕ್ಷೇಪವೂ ಉಂಟುಮಾಡದು. ಅದು ತಾನೇ ಅಪ್ಪು ಮನೋಹರವಲ್ಲದೆ, ನೀವು ತೆಗೆಯುವ ಆ ಛಾಯಾಚಿತ್ರಗಳಾದರೂ ಶಾಶ್ವತವಾದ ಆನಂದವನ್ನೇ ಕೊಡುತ್ತಿವೆ. "ಕೋಡಕ್"ನಲ್ಲಿ ತೆಗೆಯುವ ಚಿತ್ರಗಳಿಗೂ, ಕೋಡಕ್ ಫಿಲ್ಮುಗಳಿಗೂ ವೆಚ್ಚ ಬಹಳ ಸುಲಭ. "ಕೋಡಕ್"ನ್ನು ಬರೇ ರೂ. 3/12ರ ಅಲ್ಪ ಬೆಲೆಯಲ್ಲಿಯೇ ಕೊಂಡುಕೊಳ್ಳಬಲ್ಲಿರಿ ಮತ್ತೂ ಆರಂಭದಿಂದಲೇ ಅತ್ಯುತ್ಕೃಷ್ಟವಾದ ಫಲವನ್ನು ಪಡೆಯಲೂ ಶಕ್ತರಾಗುವಿರಿ. ಒಬ್ಬ "ಕೋಡಕ್"ನ ವ್ಯಾಪಾರಿಯೊಡನೆ ಅಲೋಚಿಸಿ ನೀವು ಇಂದಿನಿಂದಲೇ ಚಿತ್ರಗಳನ್ನು ತಯಾರಿಸುವ ಆನಂದವನ್ನು ಅನುಭವಿಸಿರಿ.



ಕೋಡಕ್ ಲಿಮಿಟೆಡ್
(ಇಂಗ್ಲೆಂಡಿನಲ್ಲಿ ಇನ್‌ಕಾರ್ಪರೇಟ್ ಆಗಿದೆ)
ಬೊಂಬಯಿ
ಕಲ್ಕತ್ತಾ
ಲಾಹೋರ್
ಮದ್ರಾಸ್

'ಮೂಲ್ಕಿ ಗ್ರೇಂಡ್ ರೇಫಲ್'

೫೦ ಮತ್ತು ೫೦ಕ್ಕಿಂತ ಹೆಚ್ಚು ಪುಸ್ತಕಗಳನ್ನು ಪಡಕೊಂಡ ಮಹನೀಯರ ಹೆಸರುಗಳು:—

೧. ಶ್ರೀಮತಿ ಲೀಲಾವತಿ ಬ್ಯಾ ಅನಂತಯ್ಯ ೮೫೩ ಪುಸ್ತಕಗಳು; ೨. ಮು. ರಾ. ರಾ. ಎಂ. ಆರ್. ಪೂಂಜ, ಅವರ್ಗಳ್ ೫೦೪; ೩. ಮು. ರಾ. ರಾ. (ಡಾಕ್ಟರ್) ಎನ್. ಎನ್. ಅಡ್ಯಂತಾಯ ಅವರ್ಗಳ್ (ಕಾರ್ಕಳ) ೫೦೦; ೪. ಜ್ಯೋಂಟ್ ಮೆನೇಜರ್ಸ್ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ೫೦೦; ೫. ಸೆಕ್ರೆಟರಿ, ಸಿ. ಪಿ. ಸಿ. ಕಂಪೆನಿ, ಮಂಗಳೂರು ೪೪೦; ೬. ಮು. ರಾ. ರಾ. ಎಂ. ಚಂದಯ್ಯ ಶೆಟ್ಟಿ, ಅವರ್ಗಳ್ ೩೭೬; ೭. ಮು. ರಾ. ರಾ. (ಡಾಕ್ಟರ್) ಎಂ. ಆರ್. ಕಾಮತ್ ಅವರ್ಗಳ್ ೩೩೫; ೮. ಆರ್. ಆರನ್ಹಾ ಎಸ್ಕ್ವಾಯರ್, ೧೫೫; ೯. ಮು. ರಾ. ರಾ. ವಿ. ಕೆ. ಪ್ರಭು ಯಂ. ಅವರ್ಗಳ್ ೧೫೦; ೧೦. ಮು. ರಾ. ರಾ. ನಾಗೇಶ ಎ. ಶೆಣೈ ಅವರ್ಗಳ್ (ಮುಂಬೈ) ೧೧೦; ೧೧. ಮು. ರಾ. ರಾ. ವಿ. ವಿ. ಸೂರ್ಯನಾರಾಯಣ ಶೆಟ್ಟಿ ಅವರ್ಗಳ್ (ರೋಬರ್ಟ್‌ಸನ್ ಪೇಟೆ) ೧೦೦; ೧೨. ಎಂ. ಬಿ. ಇಡ್ಡಿ ಸಬ್ಬ ಎಸ್ಕ್ವಾಯರ್ ೧೦೦; ೧೩. ಮು. ರಾ. ರಾ. ಎ. ಎನ್. ರಾಜಗೋಪಾಲ ರಾವ್ ಅವರ್ಗಳ್ ೭೦. ೧೪. ಮು. ರಾ. ರಾ. ಎಂ. ಕೆ. ಎಲ್ಲಪ್ಪ ೬೫; ೧೫. ಮು. ರಾ. ರಾ. ಕೆ. ಸಂಜೀವ ಪೈ, ೫೫; ೧೬. ಮು. ರಾ. ಬಿ. ರಘುರಾಮ ರಾವ್ ಅವರ್ಗಳ್ (ಸೇಲಂ) ೫೦; ೧೭. ಮು. ರಾ. ರಾ. ಟಿ. ನರಹರಿ ಶೆಣೈ, ಅವರ್ಗಳ್ ೫೦; ೧೮. ಮು. ರಾ. ರಾ. ಬೋಳ ರಘುರಾಮ ರಾವ್ (ಕಣ್ಣಿಕೋಟೆ) ೫೦. ಮಹಾಜನರು ಇನ್ನೂ ಇನ್ನೂ ಯೋಗ್ಯ ಪ್ರೋತ್ಸಾಹ ಕೊಟ್ಟು ಈ ಸೋದ್ಯಮವನ್ನು ಯಶಸ್ವಿಗೊಳಿಸುವಂತೆ ಸಹಾಯ ಕೊಟ್ಟು ನಡಿಸುವೀ ಕಾಗಿ ವಿನಂತಿ. ಬಿ. ಭೋಜ ರಾವ್, ಕಾರ್ಯದರ್ಶಿ.

ನೋಟೀಸು.

ಮಂಗಳೂರು, ತಾ. 16-10-36.

ಮಂಗಳೂರು ತಾಲೂಕು ಕೊಂಪದವು ಗ್ರಾಮದಲ್ಲಿರುವ ಕರಿಕುಡುಂಬಿ ಜಾತಿಯ ಸಾಂತೇ ಗೌಡನ ವಿಧವೆ ಸಾಂಡ್ಲೆಂಮ್ಮ ವ ಸದ್ರಿ ಸಾಂತೇ ಗೌಡನ ಮಗ ಪುತ್ತು ಗೌಡ 1 ಕೂಡಾ ಎರಡು ಜನರು ಈ ಮೂಲಕ ಸರ್ವ ಜನರಿಗೆ ತಿಳುವಳಿಕೆ ಹುಗ್ಗಿ ಪ್ರಕಟಿಸುವದೇನೆಂದರೆ:—

। ನಾವು ಮಕ್ಕಳ ಕಟ್ಟು ಆಚರಿಸುವ ಕರಿಕುಡುಂಬಿಯವರ ಜಾತಿಯವರಾಗಿದ್ದು ನಾವು ವ 1ನೇಯವಳ ಮಗ ವ 2ನೇಯವನ ತಮ್ಮನಾದ ಬಾಬು ಗೌಡ ಕೂಡಾ ಒಂದೇ ಅವಿಭಕ್ತ ಕುಟುಂಬದವರಾಗಿದ್ದು ವಿಳಗೃಹಕೃತ್ಯದಲ್ಲಿರುವೆ ಸಮಯ ನನ್ನ ಕುಟುಂಬದಲ್ಲಿ ಸಾಲ ವಗೈರೆ ಇಲ್ಲದೆಯೂ ವ ಇಷ್ಟಾನುಸಾರ ಸಾಲ ವಗೈರೆ ಮಾಡುವ ಅಗತ್ಯವು ಕೂಡಾ ಇಲ್ಲದೆಯೂ ಕುಟುಂಬದ ಯಜಮಾನನಾಗಿರುತ್ತಿದ್ದ ನನ್ನ ಪೈಕಿ 1ನೇಯವಳ ಗಂಡ ವ 2ನೇಯವನ ತಂದೆ ಸಾಂತೇ ಗೌಡನು ಮೃತಪಟ್ಟ ಲಾಗ್ಯಾತು ನನ್ನ ಅವಿಭಕ್ತ ಕುಟುಂಬದಲ್ಲಿ ನನ್ನ ಪೈಕಿ 2ನೇಯವನು ಆಡಳ್ತೆಯನ್ನು ನಡಿಸಿಕೊಂಡು ಸದ್ರಿ ಬಾಬ ಗೌಡನ ಜೀವನವನ್ನು ಸರಿಯಾಗಿ ನಡಿಸಿಕೊಂಡು ಬರುತ್ತಿರುವಲ್ಲಿ—ಸದ್ರಿ ಬಾಬ ಗೌಡನು ಚಿಕ್ಕ ವ್ಯಾಯದವನ, ಕಡಿಮೆ ಬುದ್ಧಿಯವನಾಗಿದ್ದು ಆತನು ನನ್ನ ಅವಿಭಕ್ತ ಕುಟುಂಬದಲ್ಲಿ ಜೀವಿಸಿಕೊಂಡು ಬರುತ್ತಿರುವಲ್ಲಿ—ಆತನಿಗೆ ಯಾವ ವಿಧದಿಂದಲೂ ಸಾಲದ ತಗಾದೆಯು ವ ಸಾಲ ಮಾಡುವ ಅಗತ್ಯವು ಕೂಡಾ ಇಲ್ಲದೆ ಇರುವಲ್ಲಿ—ತಮ್ಮ ಸ್ವಂತ ಉಪಯೋಗದ ಬಗ್ಗೆ ದುರ್ಲಭ್ಯ ಪಡಿಯುವ ಕೆಟ್ಟ ಯಿರಾಧೆಯಿಂದ ಸದ್ರಿ ಬಾಬ ಗೌಡನನ್ನು ದುರ್ಬೋಧಿಸಿ ವುಸಲ್ಯಾಶಿ ಯೇನೊಂದೂ ಪ್ರತಿಫಲ ಕೊಡದೆ ನನ್ನ ದ್ವೇಶಿಕರಾದ ಕೆಲವರು ಆತನಿಂದ ತಮಗೆ ಇಷ್ಟವಿದ್ದ ರೀತಿಯಲ್ಲಿ ದಸ್ತೈವಜುಗಳು ವಗೈರೆಯನ್ನು ಬರಿಸಿಕೊಂಡಿದ್

ಆರೋಗ್ಯ ವಿಜ್ಞಾನ.

(ಆಶುತೋಷ)

ಬಸುರಿಯರಿಗೆ

ಬಸುರಿ ಹೆಂಗುಸು ಸುಖದಿಂದ ಹೆರುವು ದಾದರೆ ಅದೊಂದು ಅವಳಿಗೆ ಪುನರ್ಜನ್ಮವೆಂದೇ ನ್ನಮ್ಮವರ ಯೋಚನೆ. ಈ ಯೋಚನೆಗೆ ನಮ್ಮ ಯ ಅಜ್ಞಾನವೂ ಅಶಿಕ್ಷಿತ ಸೂಲಗಿತ್ತಿಯರೂ ಲ್ಪ ಮಟ್ಟಿಗೆ ಕಾರಣರಾಗುತ್ತಾರೆ. ಬಸುರಿ ಂಗಸನ್ನು ಒಳ್ಳೆ ಅನುಭವವುಳ್ಳ ಸೂಲಗಿತ್ತಿ ಯವರ ವಶಕ್ಕೆ ಬಿಟ್ಟರೆ ಯಾವ ಹೆದರಿಕೆಗೂ ಕಾರ ವಿಲ್ಲ. ಅಥವಾ ಸವಿೂಪದಲ್ಲಿರುವ ಪ್ರಸವ ಗೃಹಗಳಿಗೆ ಕಳುಹಿಸಬೇಕು. ಪ್ರಸವಗೃಹ (ಆಸ್ಪ)ಗಳಲ್ಲಿ ಗರ್ಭಿಣಿಗೆ ಅಪಾಯವಾಗದಂತೆ ಾಕ್ಟರರುಗಳೂ ಸೂಲಗಿತ್ತಿಯರೂ ಹೆರಿಸು ರು.

ಬಸುರಿ ಹೆಂಗುಸರನ್ನು ಡಾಕ್ಟರರಿಂದ ಪ ೀಕ್ಷೆ ಮಾಡಿಸುವುದುತ್ತಮ. ಡಾಕ್ಟರರು ಪ್ರಸ ಕ್ಕೆ ಅಪಾಯ ಬರುವ ಕಾರಣಗಳನ್ನು ಮೊದ ೀ ತಿಳಿದುಕೊಂಡು ಅದರ ನಿವಾರಣೋಪಾಯ ನ್ನು ಸೂಚಿಸಿದರೆ. ಅಕ್ರಮಪ್ರಸವ ಮೊದ ಾದವನ್ನು ತಪ್ಪಿಸಲು ಡಾಕ್ಟರರೇ ಸಮರ್ಥರು. -ಬಾಲವಿವಾಹಗಳು ಕೂಡ ಪ್ರಸವಿಸುವ ೀಯರ ಮರಣಕ್ಕೆ ಕಾರಣವಾಗಿವೆ.

ಪ್ರಸವಕಾಲ ಸವಿೂಪಿಸಿದ ಹೆಂಗುಸು ುಚಿಯಾದ ಮತ್ತು ಆರೋಗ್ಯಕರವಾದ ಸ್ಥಳ ಲ್ಲಿ ವಾಸಿಸಬೇಕು. ಬಸುರಿಸೊಳಗಿನ ಶಿಶು ಗೆ ತಾಯ ಶುದ್ಧರಕ್ತವೇ ಪೋಷಕವಾದುದ ಂದ ಗರ್ಭಿಣಿಯು ಆದಷ್ಟು ನಿರ್ಮಲ ವಾತಾ ರಣದಲ್ಲೇ ಇರಬೇಕು. ಗರ್ಭಿಣಿಯರು ಮಲ ುವ ಕೋಣೆಯು ನಿಶ್ಶಬ್ದವಾಗಿಯೂ ತುಂಬ ಾಳಿಯಾಡುವ ಸ್ಥಳವಾಗಿಯೂ ಇರಬೇಕು.

ಗರ್ಭಿಣಿಯರು ಆಯಾಸ ಬರ್ಸುವ ಕೆಲಸ ಮಾಡಕೂಡದಾದರೂ ಬೆಳಗ್ಗೆ ಮತ್ತು ಸಂಜೆಗೆ ಳ್ಳೆ ಹವೆಯಲ್ಲಿ ಸುತ್ತಾಡಿ ಶರೀರಕ್ಕೆ ವ್ಯಾಯಾ ವು ತೆಗೊಳ್ಳಬೇಕು. ಕೋಪ, ದುಃಖ ಮೊದ ಾದವುಗಳಿಗೆಡೆಗೊಡಬಾರದು. ದಿನಕ್ಕೆ ಎಂಟು ಂಟೆಗೆ ಕಡಮೆಯಿಲ್ಲದಷ್ಟು ನಿದ್ರೆ ಮಾಡಬೇಕು. ರ್ಭಿಣಿಯರು ತಮ್ಮ ಶರೀರವನ್ನು ಯಾವಾ ಲೂ ಶುಚಿಯಾಗಿಟ್ಟಿರಬೇಕು. ಬಟ್ಟೆಬರೆ ಳು ಆದಷ್ಟು ಹಗುರವೂ ಸಡಿಲವೂ ಆಗಿರಬೇ ಆಹಾರವು ಲಘುವಾಗಿ ಸುಲಭವಾಗಿ ಜೀ ರ್ಣವಾಗುವುಗಳಾಗಿರಬೇಕು. ಹಣ್ಣು, ಹಾಲು ುತ್ತವು. ಮಾದಕಪದಾರ್ಥಗಳನ್ನೂ ನಂಜು, ುಷ್ಣಗಳುಳ್ಳ ಆಹಾರವನ್ನೂ ಸೇವಿಸಕೂಡದು. ಿ ನಡುಗಿಸುವ ವಾಹನಗಳಲ್ಲಿ ಪ್ರಯಾಣ ಮಾಡುವುದು ಅಪಾಯಕರ. ಹಲ್ಲು-ಬಾಯಿ ಳನ್ನು ದಿನಕ್ಕೆರಡು ಬಾರಿ ತೊಳೆದು ಶುಚಿಯಾ ಡಲೇ ಬೇಕು.

* * * *

ಆರೋಗ್ಯದಲ್ಲಿರಬೇಕಾದರೆ?

ಧನಿಕನಾಗಿರುವುದಕ್ಕಿಂತಲೂ ಆರೋಗ್ಯ ರಂತನಾಗಿರುವುದೇ ಮೇಲೆಂದು ಎಲ್ಲರಿಗೂ ೊತ್ತಿದೆ. ರೋಗ ಬಂದ ಮೇಲೆ ಮದ್ದು ಪಾಡಿ ಾಸಿಮಾಡುವುದಕ್ಕಿಂತ ರೋಗ ಬಾರದಂತೆ ೋಡಿಕೊಳ್ಳುವುದು ಎಷ್ಟೋ ಉತ್ತಮ. ರೋ ವಿಲ್ಲದಿರುವುದೇ ಆರೋಗ್ಯ.

ಉತ್ತಮ ಆಹಾರ, ನಿರ್ಮಲವಾದ ಗಾಳಿ, ೂರ್ಯಕಿರಣ, ನಿರ್ಮಲತ್ವ ಇವೆಲ್ಲಾ ಆರೋ ್ಯರಕ್ಷಣೆಗೆ ಸಹಕಾರಿಗಳು. ಹಣ್ಣುಹಂಪಲು ಗಳೂ ಹಸಿ ತರಕಾರಿಗಳೂ ಆರೋಗ್ಯಕ್ಕೆ ಹಿತ. ಪ್ರಕೃತಿನಿಯಮವನ್ನು ಸಾಧ್ಯವಿದ್ದಷ್ಟು ಅನು ಸರಿಸಿದರೆ ರೋಗರುಜೆಗಳಿಂದ ದೂರವಾಗಿರ ಬಹುದು.

ಕೆಲವು ಸಾಂಕ್ರಾವಿುಕ ರೋಗಗಳು ಬರ ುವಿಕ್ಕೆ ನಮ್ಮ ವೈಮೇಲಿನ ಮತ್ತು ಸುತ್ತುಮು ಕ್ಕಲಿನ ಅಶುಚಿಯೇ ಕಾರಣವಾಗಿದೆ. ಆದ್ದರಿಂದ ನಾವು ಆಹಾರವಿಹಾರಗಳಲ್ಲಿ ಆದಷ್ಟು ಪರಿ ುದ್ಧರಾಗಿರಬೇಕು.

ಯಾವಾಗಲೂ ಬಿಟ್ಟೇಬಿಡುತ್ತಿದ್ದರು!
ನಾನು ನಿಮ್ಮೊಡನೆ ಆಟವಾಡಬಹುದೋ?
ನೀನು ನಮಗೆ ಬೇಡ — ನಿನಗೆ ಓಡಲು ಸಹ ಕ್ಕೆಲಾಗದು.
ರಾಮುರಿನ ವಿಚಾರದಲ್ಲಿ ನನಗೆ ಯೋಚನೆಯಾಗಿದೆ ಆತನುಯಾ ವಾಗಲೂ ಕೆಮ್ಮುತ್ತಲೇ ಇದ್ದಾನೆ
ಅವನನ್ನು ವೈದ್ಯರಿಗೆಕೆ ತೋರಿಸ- ಬಾರದೂ?
ಆದ್ದರಿಂದ ನಿಮ್ಮನ್ನುನೋಡ್ಡಬೇ ಕೆಂದುಯೋಚಿಸಿದೆ. ವೈದ್ಯರೆ.
ಬೆಳೆಯುವ ಮಕ್ಕಳು ಅನೇಕ ವೇಳೆ ತಮಗೆ ಮತ್ತೆ ಕೂಡಿಸಲು ಸಾ ಧ್ಯವಿರುವುದಕ್ಕಿಂತ ಶೀಘ್ರವಾಗಿ ಬಲ ವನ್ನು ವೆಚ್ಚುಮಾ ಡುವರು ಮತ್ತು ದೌರ್ಬಲ್ಯದಿಂದನ ರಳುವರು. ನಾನು ಮಾಗಲೂಹೊಟ್ಟಿಕ್ಕೆ ಶಿ ಫಾರಸುಮಾ ಡುತ್ತೇನೆ.
ಸರಿ — ಪುತ್ತರಪ್ರಿಯಳು
ಅನಂತರ
ಅಮ್ಮಾ ವಂದನೆಗಳು — ನಾನು ಸುಬ್ಬುವಿನೊಂದಿಗೆ ಕ್ರಿಕೇಟ್ ಆಡಲು ಹೋಗುತ್ತೇನೆ.
ಮಕ್ಕಳು ತಮ್ಮ ಶಕ್ತಿಯ ಸಂಚಯವನ್ನು ಅನೇಕ ಸಲ ಮಿತಿಮೀರಿ ವೆಚ್ಚಮಾಡುತ್ತವೆ.
ಮಗು ಅಸಡ್ಡೆಯಿಂದಿದ್ದರೆ, ದಣಿದಿದ್ದರೆ, ಅದಕ್ಕೆ ಹಲವು ಸಲ ಕಾರಣವು, ಆ ಮಗು ತನ್ನ ಶಕ್ತಿಸಂಚಯವನ್ನು ಮಿತಿಮೀರಿ ಖರ್ಚುಮಾಡುತ್ತದೆ—ಶಕ್ತಿಕುಂದಿ ಕಷ್ಟಪಡು ತ್ತಿದೆ ಎಂಬುದೇ. ನೋಡಿ, ಮಕ್ಕಳು ತಮ್ಮ ಬೆಳವಣಿಗೆಯಲ್ಲಿಯೂ ಅಲ್ಲದೆ ಆಡುವುದರ ಲ್ಲಿಯೂ, ಅತ್ತಿತ್ತ ಓಡಾಡುವುದರಲ್ಲಿಯೂ ಕೂಡ, ಬೆಳೆದವರಿಗಿಂತಲೂ ಹೆಚ್ಚಾಗಿ, ತಮ್ಮ ಆಕಾರಕ್ಕೂ ಮಿಕ್ಕಿದ ಶಕ್ತಿಯನ್ನೇ ಉಪಯೋಗಿಸಿಕೊಳ್ಳುತ್ತಿವೆ—ಈ ಕಾರಣದಿಂದ ಈ ಅಯಾಸವು ಅವುಗಳಿಗೆ ವಿಪರೀತವಾಗುತ್ತಿದೆ ಎಂಬಲ್ಲಿ ಆಶ್ಚರ್ಯವಿಲ್ಲ.
ನಡುಪ್ರಾತಃಕಾಲದಲ್ಲಿಯೂ, ಮಲಗುವಾಗಲೂ ಕ್ರಮವಾಗಿ ಹಾರ್ಲಿಕ್ಸನ್ನು ಉಪ ಯೋಗಿಸುವುದರಿಂದ, ಮಕ್ಕಳು ಬೆಳೆಯಲೂ, ಪ್ರತ್ಯೇಕ ಶಕ್ತಿಯನ್ನು ಪಡೆಯಲೂ ಅತ್ಯವ ಶ್ಯವಾಗಿರುವ ಅವೇ ಯಾವತ್ತೂ ಪುಷ್ಟಿಕರವಾದ ಸಾಧನಗಳನ್ನೇ, ಅದು ಒದಗಿಸಿಕೊಡು ತ್ತಿದೆ. ಮಕ್ಕಳು ಅದರ ರುಚಿಯನ್ನು ಮೆಚ್ಚುತ್ತವೆ ಮತ್ತೂ ಅವರಲ್ಲಿ ಅದು ಒಂದು ಹೊಸ ಚೈತನ್ಯವನ್ನೂ, ಪುಷ್ಟಿಯನ್ನೂ ಉಂಟುಮಾಡುತ್ತದೆ.
ಬ್ರಿಸಿಯೂ ಗಿಯೂ ಗಲಿ ತಣ್ಣಗಾಗಲಿ ಜೀಗ. ತಯಾರಿಸಬಹುದು. ಹೊ ರ್ಲಿಕ್ಸ್‌ಮಿಕ್ಸ್‌ರಿಂದ ಮಾಡಿದ ರಂತೂ ಬಲುರುಚಿ. ಎಲ್ಲಾ ಅಂಗಡಿಗಳಲ್ಲೂ ದೊರೆ ಯುತ್ತದೆ ಇಲ್ಲವಾದರೆ ೧೪ ಆಣೆ ಸ್ಟ್ಯಾಂಪನ್ನು ಪೋ. ಬಾ. ತಿರ್ಲಿ ಕಲಿಕತ್ತೆಗೆ ಕಳಿ ಸಿ ಕಳುಹಿಸುತ್ತಾರೆ.
HORLICK'S
ಹಾರ್ಲಿಕ್ಸ್ ಹಾಲಿನೆಯನ್ನು ಉಂಟುಮಾಡುವದು

ನೋಟೀಸು.

ದ. ಕ. ಮಂಗಳೂರು
ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್‌ನಲ್ಲಿ
S. C. No: 629/36.
ಐತಪ್ಪ ಜಾಟ — ವಾದಿ.
ಮತ್ತು ಅಂತಕ್ಕೆ ಹೆಂಗಸು — ಪ್ರತಿವಾದಿ.

ಅಂತಕ್ಕೆ ಹೆಂಗಸು, ಜತ್ತಪ್ಪ ರೈಯ ಹೆಂಡತಿ, ಮಂಗಳೂರು ತಾಲೂಕು ಬಾಳೆಪುಣಿ ಕಸಬಾ ಗ್ರಾಮದ ಉಮಿಯದಲ್ಲಿರುವವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ನೀವು ವಾದಿಗೆ ತಾ. 10 – 6 – 1934 ರಲ್ಲು ರೂಪ್ಯಾ 68/-ಕ್ಕೆ ಬರಕೊಟ್ಟ ಡಿಮಾಂ ಡು ಪ್ರೊವಿಸರಿ ನೋಟಿನ ಅಸಲು ಬಡ್ಡಿ ಐವೆಜುಗಳನ್ನು ಬರಮಾಡಿಕೊಳ್ಳುವರೆ ವಾದಿ ಯು ನಿಮ್ಮ ಮೇಲೆ ಮೇಲ್ಕಂಡ ವ್ಯಾಜ್ಯ ದಾಕಲುಮಾಡಿರುತ್ತಾನೆ. ಮತ್ತು ಸದರಿ ವ್ಯಾ ಜ್ಯವು ತಾ. 3—12—36ಕ್ಕೆ ಆಖೈರು ತನ್ನಿ ಬಗ್ಗೆ ಇಟ್ಟಿರುತ್ತದೆ. ಆ ದಿನಸ ನೀವು ಪೂ ರ್ವಾಹ್ನ 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜರಾಗುವರೆ ತಪ್ಪಿದಲ್ಲಿ ಸದರಿ ವ್ಯಾಜ್ಯವು ಸದರಿ ತಾರೀಕಿಗೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು ಎಂಬ ಸಂಗತಿ ಈ ಮೂಲಕ ತಿಳಿಸೋಣವಾಗಿಯದೆ.

Mangalore, 30-11-1936. } A. Shanker Alva, *Vakil for Plaintiff.*

WIN RS. 25,000

PRIZE WILL BE GIVEN TO EVERY COMPETITOR!!

Last posting date 15-12-36 **Result 31-12-36**

The first Prize of Rs. **20,000/—** will be awarded to the sender of a correct solution (agreeing with our sealed Solution in every respect which is deposited with **our Bankers.**) In case of tie or ties it will be distributed **equally. A Special Prize of Rs. 2,000/—** will be awarded to the sender of the **largest** number of solutions, another special prize of **Rs. 2,000** would be **awarded** to the first correct coupon sender and **Cash and valuable Consolation Prizes of Rs. 1,000/—** will be divided among the other Competitors at the discretion of the Manager. **Thus every Competitor gets a Prize.**

What to do:—Fill up the eight blanks in the Square with figures from zero to twenty (0 to 20) to make the total of 30 when added down, across and diagonally without changing 10 from the centre and no figure should be repeated in the same square.

	10	

Total 30

Rules:—**Entrance fee Re. 1/—** Per solution (each answer.) Prize will vary according to Entries. Any number of Solutions (Answers) on plain papers are accepted. Money order receipts must accompany the Solutions. Name and Address should be written on the M.O. coupon. Manager's decision is final and legally binding in all matters and is an express condition of the entry. Local entries accepted between 11 A.M. to 5 P.M. Send a Self-addressed stamped envelope with the solution for result, all entries and fees to:—

INDIAN INDUSTRY,
Bank Street, Fort, BOMBAY.

ವಿಜ್ಞಾನ ವಿಷಯ

'ವಿಜ್ಞಾನಿ'

ದಕ್ಷಿಣ ಧ್ರುವದಲ್ಲಿ

ಮನುಷ್ಯಸೃಷ್ಟಿಯ ಆದಿಯುಗದಲ್ಲಿ ಮನುಷ್ಯನು ಈ ಪ್ರಕೃತಿಯನ್ನು ಮೊತ್ತಮೊದಲು ಕಣ್ಣು ತೆರೆದು ನೋಡಿ ಯಾವ ಆಶ್ಚರ್ಯ-ಆನಂದಗಳನ್ನು ಪಡೆದನೋ ಆ ಕಾಲವು ಕಳೆದು ಇಂದಿಗೆ ಲಕ್ಷಾಂತರ ವರ್ಷಗಳು ಸಂದುವು. ಅಂದಿನಿಂದ ಇಂದು ವರೆಗೂ ಮನುಷ್ಯರು ಸೃಷ್ಟಿಯ ರಹಸ್ಯವನ್ನು ಕಂಡು ಹಿಡಿಯಲಿಕ್ಕಾಗಿ ಭೂ, ಜಲ, ವಾಯುಗಳಲ್ಲಿ ಅತಿಕಷ್ಟವನ್ನು ಸಹಿಸಿ ಸಂಚರಿಸಿ ಜ್ಞಾನಭಂಡಾರವನ್ನು ವೃದ್ಧಿಮಾಡಿದರೆ, ಮಾಡುತ್ತಿರುವರು, ಮಾಡುವರು. ನಮ್ಮ ಜ್ಞಾನಪಿಪಾಸೆಗೆ ಅಂತ್ಯವೇ ಇಲ್ಲ. ನಮಗೆ ಇನ್ನೂ ಇನ್ನೂ ಹೊಸ ವಿಷಯಗಳನ್ನು ತಿಳಿಯಬೇಕೆಂಬ ಕುತೂಹಲವು ಹೆಚ್ಚುತ್ತಲಿದೆ. ಪೃಥ್ವಿಯ ಊರ್ಧ್ವ (ಉತ್ತರ) ಮತ್ತು ಅಧೋ (ದಕ್ಷಿಣ) ಭಾಗಗಳಲ್ಲಿ ಮನುಷ್ಯರು ತಿಳಿಯಬೇಕಾದ ಅನೇಕ ರಹಸ್ಯಗಳು ಹಾಗೇ ಉಳಿದಿದ್ದುವು. ಆಧುನಿಕ ವಿಜ್ಞಾನಯುಗದವರು ವಿಜ್ಞಾನದ ಸಹಾಯದಿಂದ ಪ್ರಯತ್ನಪಟ್ಟು ಈ ಉತ್ತರ ಧ್ರುವ-ದಕ್ಷಿಣ ಧ್ರುವಗಳೆಂಬ ಹಿಮಾಚ್ಛನ್ನ ದೇಶಗಳಿಗೆ ಅಭಿಯಾನ ಮಾಡಿ (ಹೋಗಿ) ಅನೇಕ ಜ್ಞಾನಗಳನ್ನು ಸಂಗ್ರಹಿಸಿದರು. ಯುರೋಪಿನ ಜನರು ನಡೆಸಿದ ದಕ್ಷಿಣ ಮೇರುವಿನ ಅಭಿಯಾನವನ್ನು ವರ್ಣಿಸುವುದೇ ಈ ಲೇಖದ ಉದ್ದೇಶ.

ಹದಿನಾರನೇ ಶತಮಾನದ ಆರಂಭದಲ್ಲೇ ದಕ್ಷಿಣ ಮೇರುವಿನ ಆವಿಷ್ಕಾರದ ಲಾಲಸೆಯು ಜನರಲ್ಲಿ ಉಂಟಾಗಿತ್ತೆಂದು ಹೇಳಬಹುದು. ಅಂದಿನಿಂದ ಎಷ್ಟೋ ಮಂದಿ ಜ್ಞಾನಪಿಪಾಸುಗಳು ಧ್ರುವಗಳ ಶೋಧನೆಗಾಗಿ ತಮ್ಮ ಪ್ರಾಣವನ್ನರ್ಪಿಸಿದರು. ಜೇಮ್ಸ್ ಕುಕ್, ಕೇಪ್ಟನ ರೌಸ, ಕೇಪ್ಟನ್ ಲಾಸೆನ್, ಎಮಂಡ ಸನ್, ಸ್ಕಾಟ್ ಮೊದಲಾದವರ ಸಾಹಸಪೂರ್ಣವಾದ ಅಭಿಯಾನ, ಆವಿಷ್ಕಾರಗಳಿಂದ ದಕ್ಷಿಣ ಮೇರುವಿನ ಸ್ವರೂಪದ ವಿಷಯದಲ್ಲಿ ಸ್ವಲ್ಪಮಟ್ಟಿಗೆ ತಿಳಿದುಬಂದಿದೆ. ದಕ್ಷಿಣ ಧ್ರುವಪ್ರದೇಶದ ವಿಸ್ತಾರವೇನೂ ಕಡಿಮೆಯಿಲ್ಲ. ಅಗಾಧ ಜಲರಾಶಿಯಿಂದ ಆವೇಷ್ಟಿತವಾದ ಈ ಮಹಾದೇಶದ ಕ್ಷೇತ್ರಫಲವು ೫೦ ಸಾವಿರ ವರ್ಗ ಮೈಲುಗಳಷ್ಟಿವೆ. ದಕ್ಷಿಣ ಮೇರು ಬಿಂದು ಸ್ಥಾನವು ಈ ಮಹಾಭೂಭಾಗದ ಮಧ್ಯಭಾಗದಲ್ಲೇ ಬರುತ್ತದೆ. ಉತ್ತರ ಧ್ರುವದ ಪ್ರಕೃತಿಗೂ ದಕ್ಷಿಣ ಧ್ರುವದ ಪ್ರಕೃತಿಗೂ ಬಹಳ ಹೆಚ್ಚು ಕಡಮೆಯಿದೆ. ಉತ್ತರ ಧ್ರುವ ಪ್ರದೇಶದಲ್ಲಿ ಹತ್ತು ಲಕ್ಷಕ್ಕಿಂತ ಹೆಚ್ಚು ಮೂಲನಿವಾಸಿಗಳಾದ ಮನುಷ್ಯರು ವಾಸಮಾಡುತ್ತಾರೆ. ಅನೇಕ ಜೀವಜಂತುಗಳೂ ಖನಿಜಗಳೂ ಇವೆ. ದಕ್ಷಿಣ ಧ್ರುವದಲ್ಲಿ ಯಾವ ಮನುಷ್ಯಜಾತಿಯೂ ವಾಸಮಾಡುವುದಿಲ್ಲ. ಸಣ್ಣ ಸಣ್ಣ ಹುಳಹುಪ್ಪಟೆಗಳನ್ನು ಬಿಟ್ಟು ಇತರ ಪ್ರಾಣಿಗಳಾಗಲೀ ಗಿಡಬಳ್ಳಿಗಳಾಗಲೀ ಅಲ್ಲಿ ಬೆಳೆಯುವುದಿಲ್ಲ. ಖನಿಜಗಳೂ ಬಹಳ ಕಡಮೆಯಾಗಿವೆ. ಈ ದಕ್ಷಿಣ ಮೇರುವಿಗೂ ಪೃಥ್ವಿಯ ಇತರ ಭಾಗಗಳಿಗೂ ಸಂಬಂಧವಿದ್ದಂತೆ ತೋರುವುದಿಲ್ಲ. ಈ ಪ್ರದೇಶದಲ್ಲಿ ಹ್ವೇಲ್ ಎಂಬ ಮೀನುಗಳು ಬೇಕಾದಷ್ಟು ದೊರಕುತ್ತವೆ. ಈ ಇಪ್ಪತ್ತನೇ ಶತಮಾನದಲ್ಲಿ ದಕ್ಷಿಣ ಧ್ರುವಕ್ಕೆ ಪ್ರಯಾಣ ಬೆಳೆಸಿದವರಲ್ಲಿ ಅಮೆರಿಕದ ಎಡ್ಮಿರಲ್ ಬರ್ಡರೇ ಮುಖ್ಯಸ್ಥರು. ಇವರು ೧೯೨೯ರಲ್ಲಿ ದಕ್ಷಿಣ ಧ್ರುವಕ್ಕೆ ಪ್ರಯಾಣ ಬೆಳೆಸಿ ಮೊದಲು ಹೋದವರಿಗಿಂತ ೧೫೦೦ ಮೈಲು ದಕ್ಷಿಣಕ್ಕೆ ಮುಂದುವರಿದು ಅಮೆರಿಕದ ಧ್ವಜವನ್ನೂರಿದರು. ಆ ಪ್ರಯಾಣಕಾಲದಲ್ಲಿ ಇವರೊಂದಿಗೆ ಸಹಾಯಕರೂ ಹದಿನಾಲ್ಕು ತಿಂಗಳು ಅಲ್ಲಿ ವಾಸಿಸಿದರು. ಇವರು ದಕ್ಷಿಣ ಧ್ರುವದಲ್ಲಿ ಹೋಗಿ ತಂಬು ಮಾಡಿದ ಸ್ಥಳಕ್ಕೆ 'ಲಿಟಲ್ ಅಮೆರಿಕ'ವೆಂದು ಹೆಸರಿಟ್ಟರು. ಆ ಪ್ರಯಾಣಕಾಲದಲ್ಲಿ ಅನೇಕ ವೈಜ್ಞಾನಿಕ ತಥ್ಯಗಳನ್ನಿವರು ಕಂಡುಕೊಂಡರು. ಜ್ಞಾನಪಿಪಾಸುಗಳಾದ ಎಡ್ಮಿರಲರು ಪುನಃ ೧೯೩೩ನೇ ಅಕ್ಟೋಬರ್ ಹನ್ನೆರಡರಂದು ಧ್ರುವದರ್ಶನಕ್ಕಾಗಿ ತನ್ನ ಸಹಚರರೊಂದಿಗೆ ಎರಡು ಹಡಗುಗಳಲ್ಲಿ ಬೋಸ್ಟನ್ ನಗರದಿಂದ ಹೊರಟರು. ಈ ಯಾತ್ರಿಕರು ದಶಂಬರ್ ೧೯ನೇ ತಾರೀಕಿನಂದು ಮೇರು ಪ್ರಾಂತದ ಗಡಿಗೆ ಬಂದು ಮೊದಲನೇ ಸಾರಿ ವಾಸಮಾಡಿದ ಸ್ಥಳವನ್ನು ಕಂಡರು. ಆ ಸ್ಥಳವು ಹಿಮದಿಂದ ಮುಚ್ಚಿಹೋಗಿತ್ತು. ಅಲ್ಲಿ ನಾಲ್ಕು ವರ್ಷಗಳ ಹಿಂದೆ ಅವರು ಬಿಟ್ಟುಹೋದ ಸಾಮಾನುಗಳೆಲ್ಲಾ ಕೆಡದೆ ಹಾಗೇ ಉಳಿದಿತ್ತು. ಈ ೫೫ನೇ ಇಸ್ವಿಯ ಪ್ರಯಾಣದಲ್ಲಿ ಯಾತ್ರಿಕರು ಹದಿನೇಳು ತಿಂಗಳು ಕಾಲ ಮೇರುಪ್ರದೇಶದಲ್ಲಿ ಸಂಚರಿಸಿ, ಅಲ್ಲಿಯ ಭೂಗೋಲ, ಭೂತತ್ವ, ಪ್ರಾಣಿತತ್ವ, ಜಲ-ವಾಯುತತ್ವ, ಸಮುದ್ರತತ್ವ, ಜೀವವಿದ್ಯೆ, ಉದ್ಭಿಜತತ್ವ ಮೊದಲಾದ ಅನೇಕ ವಿಷಯಗಳಲ್ಲಿ ಅಗತ್ಯವಿರುವ ನೂತನ ವೈಜ್ಞಾನಿಕ ವಿಷಯಗಳನ್ನು ಸಂಗ್ರಹಿಸಿದರು.

ಜೇಮ್ಸ್ ಕುಕನು ನಿರ್ದೇಶಿಸಿದ ಸ್ಥಳಕ್ಕೆ ಇವರು ದಶಂಬರ ೨೧ರಲ್ಲಿ ಮುಟ್ಟಿದರು. ನೀರುಗಡ್ಡೆಗಳಿಂದ ಮುಚ್ಚಿದ ಆ ಸ್ಥಳದಿಂದಲೂ ಅವರು ಅತಿಕಷ್ಟದಿಂದ ತುಸುದೂರ ಮುಂದುವರಿದರು. ಅಲ್ಲಿಂದ ಮುಂದೆ ಹಡಗಿನಲ್ಲಿ ಹೋಗಲು ಸಾಧ್ಯವೇ ಇಲ್ಲವೆಂದಾಯಿತು. ಎಡ್ಮಿರಲ್ ಬರ್ಡರು ಕೆಲವೇ ಮಂದಿ ಯನ್ನು ಕರೆದುಕೊಂಡು ವಾಯುಯಾನದ ಮೇಲೆ ಸುಮಾರು ೨೧೪ ಮೈಲು ದಕ್ಷಿಣಕ್ಕೆ ಪ್ರಯಾಣ ಮಾಡಿದರು, ನೀರುಗಡ್ಡೆಗಳ ಹೊರತು ನೆಲವು ಕಾಣಿಸಿಗದಿದ್ದುದರಿಂದ ಪುನಃ ಹಡಗು ಇದ್ದಲ್ಲಿಗೇ ಹಿಂದಿರುಗಿ ಪೂರ್ವದ ಕಡೆಗೆ ಪ್ರಯಾಣ ಬೆಳೆಸಿದರು. ಕೆಲ ದಿನಗಳ ವರೆಗೆ ಸೂರ್ಯದರ್ಶನವೇ ಇಲ್ಲದ ನೀರುಗಡ್ಡೆಗಳ ಅಪಾಯದೆಡೆಯಲ್ಲಿ ಸಾವಿರ ಮೈಲುಗಳ ವರೆಗೆ ಮುಂದುವರಿದರು. ಅಲ್ಲಿಂದ ಪುನಃ ವಿಮಾನವನ್ನೇರಿ ಭಯಂಕರವಾದ ವಾಯುಮಂಡಲದಲ್ಲಿ ಸಂಚರಿಸಿ ಅನೇಕ ವೈಜ್ಞಾನಿಕ ತತ್ವಗಳನ್ನು ಕಂಡುಕೊಂಡು ಲಿಟಲ್ ಅಮೇರಿಕಕ್ಕೆ ಹಿಂದಿರುಗಿದರು. ಅಲ್ಲಿ ಬಂದು ಹಡಗು ಬದಲಾಯಿಸಿಕೊಂಡರು. ಅವರು ವಾಸಮಾಡುತ್ತಿದ್ದ ಲಿಟಲ್ ಅಮೇರಿಕಕ್ಕೆ ಹಡಗು ಬರುವುದು ಬಹಳ ಕಷ್ಟವಾಗಿ ಎರಡು ಮೈಲು ದೂರದಲ್ಲಿ ನಿಲ್ಲಬೇಕಾಗಿತ್ತು. ಅಲ್ಲಿಂದ ಹಡಗಿನಲ್ಲಿದ್ದ ಸಾಮಾನುಗಳನ್ನು ವಿಮಾನದಲ್ಲಿ ತರಬೇಕಾಯಿತು. ವೈಜ್ಞಾನಿಕ ಆವಿಷ್ಕಾರಗಳಿಗಾಗಿ ಅವರು ಅನೇಕ ಯಂತ್ರಗಳನ್ನು ಕೊಂಡುಹೋಗಿದ್ದರು. ಈ ಯಂತ್ರಗಳನ್ನು ನಿಶ್ಚಿತ ಸ್ಥಾನಕ್ಕೆ ಸಾಗಿಸಲಿಕ್ಕೆ ಬಹಳ ಕಷ್ಟವಾಯಿತು. ವಿದ್ಯುದ್ಗೃಹ, ರೇಡಿಯೋ ಸ್ಟೇಶನ್ ಮೊದಲಾದುವನ್ನು ಲಿಟಲ್ ಅಮೇರಿಕದಲ್ಲಿ ಸ್ಥಾಪಿಸಿದರು. ಅಲ್ಲದೆ ಲೆಬೊರೆಟರಿ, ಒಬಜರ್ವೇಟರಿ, ಮೊದಲಾದುವನ್ನೂ ತಾವು ತಂದ ಫಿಲ್ಮುಗಳನ್ನು ನೋಡಲಿಕ್ಕಾಗಿ ಸಿನೆಮಾ ಹೌಸನ್ನೂ ಸ್ಥಾಪಿಸಿಕೊಂಡರು. ಇಷ್ಟು ಹೇಳಿದಾಗ ಈ ಲಿಟಲ್ ಅಮೇರಿಕವು ಒಂದು ದ್ವೀಪವೆಂದು ಭಾವಿಸಕೂಡದು. ಇದು ಕೂಡ ದೊಡ್ಡದೊಂದು ನೀರುಗಡ್ಡೆ. ಕಾರಣಾಂತರಗಳಿಂದ ಇದು ಬೇರೆ ಕಡೆಗೆ ಚಲಿಸಬಹುದು ಅಥವಾ ಒಡೆದುಹೋಗಬಹುದು. ಇಂತಹ ಭಯಂಕರ ಅಪಾಯಸ್ಥಳದಲ್ಲಿ ಅವರು ೧೨ ತಿಂಗಳು ಕಾಲ ವಾಸಮಾಡಿದರು.

ನಕ್ಷತ್ರಮಂಡಲದ ವಿಷಯದಲ್ಲಿ ಇವರಿಗೆ ತುಂಬಾ ಅನುಭವ ದೊರಕಿತು. ಧೂಮಕೇತುವಿನ ವಿಷಯವಾಗಿ ವೈಜ್ಞಾನಿಕರಲ್ಲಿದ್ದ ಜ್ಞಾನವು ಬಹುಮಟ್ಟಿಗೆ ಪರಿವರ್ತನೆಹೊಂದಿತು. ಡಾ॥ ಫುಲ್ಟರರು ಒಂದೇ ರಾತ್ರಿಯಲ್ಲಿ ೬೫೦೦ಕ್ಕಿಂತ ಹೆಚ್ಚು ಧೂಮಕೇತುಗಳನ್ನು ನೋಡಿ ಪರೀಕ್ಷಿಸಿದರು. ಅಲ್ಲಿಯ ತಾಪಮಾನವು ಶೂನ್ಯಕ್ಕಿಂತ ೬೦ ಡಿಗ್ರಿ ಕೆಳಗಿತ್ತು. ಧೂಮಕೇತುಗಳ ಗತಿ ಗಂಟೆಗೆ ೧೫೦ ಮೈಲುಗಳಿಗೆ ವಿೂರಿತ್ತು. ಅಲ್ಲಿಯ ಎಷ್ಟೋ ನೀರುಗಡ್ಡೆಗಳು ಬಹು ಆಳದ ವರೆಗೂ ಹೂಳಿಹೋಗಿದ್ದುವು.

ಜಲಚರ ಪ್ರಾಣಿಗಳ ವಿಷಯವಾಗಿ ಬಹಳ ಅನುಸಂಧಾನ ನಡೆಸಿ ಕೆಲವು ಪ್ರಾಣಿಗಳು ಆಶ್ಚರ್ಯರೀತಿಯಿಂದ ಜೀವಿಸುವುದನ್ನು ಕಂಡುಕೊಂಡರು. ನೀರುಗಡ್ಡೆಗಳ ಮಧ್ಯದ ನೀರು ಅತಿಶೀತವಾಗಿರುವುದಿಲ್ಲ. ಅತಿಶೀತದಿಂದ ನೀರು ಗಡ್ಡೆಕಟ್ಟಿದಾಗ ತುಸು ಉಷ್ಣವುಳ್ಳ ನೀರು ಅಡಿಗೆ ಹೋಗಿರುತ್ತದೆ. ಇದರಿಂದ ಜಲಜಂತುಗಳ ಜೀವನಕ್ಕೆ ಸಹಾಯವಾಗುತ್ತದೆ. ಸೀಲ್ ಮೀನುಗಳು ವಾಯುಸೇವನೆಗಾಗಿ ನೀರುಗಡ್ಡೆಗಳನ್ನೊಡೆದು ಮೇಲಕ್ಕೆ ಬರುವುದೊಂದು ವಿಶೇಷ ವಿಷಯವಾಗಿದೆ. ಈ ಪ್ರದೇಶದಲ್ಲಿ ಪೆಂಗುಇನ್ ಎಂಬ ಪಕ್ಷಿಗಳು ಬೇಕಾದಷ್ಟು ದೊಂಕುತ್ತವೆ. ಈ ಅತಿಶೀತಪ್ರದೇಶದ ವಾಯುಮಂಡಲವು ಪೃಥ್ವಿಯ ಇತರ ಭಾಗದ ವಾಯುಮಂಡಲದಲ್ಲಿ ಬೇಕಾದಷ್ಟು ಹೆಚ್ಚು ಕಡಮೆ ಮಾಡುತ್ತದೆ. ಧ್ರುವಪ್ರದೇಶದ ಶೀತಗಾಳಿಯು ಉಷ್ಣಪ್ರದೇಶಕ್ಕೆ ಬೀಸಿ ಅಲ್ಲಿನ ಉಷ್ಣವಾಯುವನ್ನು ಹಿಂದಕ್ಕೆ ತರುತ್ತದೆ. ಅನ್ವೇಷಣಕ್ಕಾಗಿ ಹೋದ ವೈಜ್ಞಾನಿಕರು ವಾಯುವಿನ ಗತಿಯ ವಿಷಯವಾಗಿ ತುಂಬ ಜ್ಞಾನವನ್ನು ಸಂಗ್ರಹಿಸಿದರು.

ಸಪ್ತಂಬರ ೨೭ಕ್ಕೆ ಸೂರ್ಯನು ಕಂಡುಬಂದನು. ಯಾತ್ರಿಕರು ವಿಮಾನದಲ್ಲಿ ಹೊರಟು ೧೭೫ ಮೈಲು ಮುಂದೆ ಹೋದಾಗ ೫ ಸಾವಿರ ಫೀಟು ಎತ್ತರದ ಒಂದು ಪರ್ವತವೂ ಪುನಃ ೨೭೦ ಮೈಲು ಮುಂದುವರಿದಾಗ ೪೫೦೦ ಫೀಟು ಎತ್ತರದ ಪರ್ವತವೂ ಕಾಣಿಸಿಕ್ಕಿತು. ಈ ಪರ್ವತಗಳಲ್ಲಿ ಹಲವು ಜಾತಿಯ ಬಳ್ಳಿಗಳು ಹರಡಿದ್ದುವು. ಮತ್ತು ಕೆಲವು ಪ್ರಾಣಿಗಳ ಅಸ್ತಿಪಂಜರಗಳೂ ಬಿದ್ದಿದ್ದುವು. ಅಲ್ಲಲ್ಲಿ ಜಲಾಶಯಗಳೂ ಕಂಡುಬಂದುವು. ಆದರೆ ಈ ಜಲಾಶಯಗಳ ನೀರು ಮಾತ್ರ ಗಡ್ಡೆಕಟ್ಟಿತ್ತು. ಆ ಜಲಾಶಯಗಳಲ್ಲಿ ಕೆಲವು ನೀರುಹೂಗಳಿದ್ದುವು. ಅಣುವೀಕ್ಷಣ ಯಂತ್ರದಿಂದ ನೋಡಲಾಗಿ ಆ ಹೂಗಳಲ್ಲಿ ಕೆಲವು ಕ್ರಿಮಿಗಳು ಸಹ ಜೀವಿಸಿದ್ದುದು ಕಂಡುಬಂತು. ತಾಪಮಾನದ ಶೂನ್ಯದಿಂದ ೬೦೦ ಡಿಗ್ರಿ ಕೆಳಗೆ ಕೂಡ ಜೀವಿಗಳು ಜೀವಿಸಿದ್ದವೆಂಬುದು ಆಶ್ಚರ್ಯವಲ್ಲವೇ? ಲಿಟಲ್ ಅಮೇರಿಕದಿಂದ ವಿಮಾನದಲ್ಲಿ ಹೊರಟು ೬೭ ದಿನ ಸಂಚರಿಸಿ ಅನೇಕ ವಿಷಯಗಳನ್ನು ಕೆಂಡುಕೊಂಡು ಯಾತ್ರಿಕರು ಹಿಂದಿರುಗಿದರು.

೪೪ನೇ ಮೇ ೧೦ರಲ್ಲಿ ಎಡ್ಮಿರಲರು ಅಮೇರಿಕಕ್ಕೆ ಹಿಂದಿರುಗಿ ಮುಟ್ಟಿದರು. ಅಮೇರಿಕದಲ್ಲಿ ಇವರ ಸ್ವಾಗತಸಮಾರಂಭದಲ್ಲಿ ಪ್ರೆಸಿಡೆಂಟ್ ರೂಜ್ವೆಲ್ಟರೇ ಸ್ವತಃ ಭಾಗವಹಿಸಿದ್ದರು. ಈ ಪ್ರಯಾಣದಿಂದ ದಕ್ಷಿಣ ಮೇರುವಿನ ಭೂಪಟದಲ್ಲಿ ೭೪ ಅಕ್ಷಾಂಶದಿಂದ ಮುಂದೆ ೧॥ ಲಕ್ಷ ವರ್ಗ ಮೈಲು ಸ್ಥಳವುಂಟೆಂಬುದನ್ನು ಅನಂತರ ತೋರಿಸಿದರು. ಈ ಪ್ರಯಾಣಕಾಲದಲ್ಲಿ ರೇಡಿಯೋದ ಸಹಾಯವು ಅಷ್ಟಿಷ್ಟಲ್ಲ. ಎಷ್ಟೋ ಸಲ ರೇಡಿಯೋದಿಂದ ಅಮೇರಿಕೆಯೊಡನೆ ಇವರು ಮಾತುಕತೆ ನಡೆಸಿದರು. ಈ ಪ್ರಯಾಣದ ಈ ವರ್ಣನೆಯು ಒಂದು ಎಳ್ಳಷ್ಟು ಮಾತ್ರ. ಇದರ ವಿಸ್ತಾರ ವರ್ಣನೆಯು ಅಮೇರಿಕೆಯ 'ನೇಶನಲ್ ಜೋಗ್ರಫಿಕಲ್ ಮೆಗಜಿನ್'ನಲ್ಲಿ ಬಂದಿದೆ.

FOR YOUR DIAMONDS
ENQUIRE AT
SOWCAR
SRINIVAS RANGAPAI
SOWCAR MAHAL,
Car Street,
MANGALORE.

ಕುಡಿಯಿರಿ! ಕುಡಿಯಿರಿ!!

ಕಣನ್ ದೇವನ್
ಟೀ

ಶುದ್ಧತ್ಥೆ, ಸುವಾಸನೆ
ಮತ್ತೂ ಶಕ್ತಿಗಳಿಗಾಗಿ
ಹೆಸರ್ಗೊಂಡದ್ದು.

ರಿಜಿಸ್ಟ್ರಿಯಾದ
ಟ್ರೇಡ್‌ಮಾರ್ಕ್.

ಚಿಕ್ಕ ಪ್ಯಾಕಿಂಗ್
ಎಲ್ಲರ ಉಪ
ಯೋಗಕ್ಕೆ ಸುಲಭ
ವಾಗಿದೆ.

ಆಹ್ಲಾದಕರವಾದ
ಪಾನೀಯ

SOLE SOUTH KANARA AGENTS:-
THE KERALA TEA SYNDICATE,
PONANI-MALABAR.

ಢೋಲ್ ಬಜಾವ್

ಹಾಗ್ಬಂತು; ಹೀಗ್ಬಂತು; ಆನೆ ಬಂತು; ಕುದುರೆ ಬಂತು; ನ್ ಬಂದ್ರೇನ್ರೀ? ನನುಗೇನ್ಬಂತು? ಹೇಳಿ! ಎನ್ನುವುದು ಾಮಾನ್ಯ.

ಊರಿಗೆ ಕೊಳೆರೋಗ ಬಂತು; ಅದರ ಹಿಂದೇನೇ ರೆವಿನ್ಯೂ ಅಽಕಾರರ ಸವಾರಿ ಬಂತು; ಮಿನಿಸ್ಟರರ ಸವಾರಿ ಬಂತು; ಿ. ಸಾಂಬಮೂರ್ತಿ ಸವಾರಿಯೂ ಬಂತು. ಇಷ್ಟಾದರೂ ನುಗೇನ್ಬಂತು?' ಎಂತಲೇ ನೂತು. ಸರಿ, ಒಂದು ನಾಟಕ ಂಪೆನಿ ಬೇರೇ ಬಂತು!—ಈಗ

ಆದರೂ ಹೇಳುವವರು ಹೇಳ್ತಾಲೇ ಇದ್ದರು. 'ನಾಟಕ ಂಪೆನಿ ಬಂದರೆ ಏನು? ಸರಕಸ್ ಬಂದರೆ ಏನು? ಅವರೇನು ನುಗೆ ದುಡ್ಡೂ ಕಾಸೂ ಕೊಡುತ್ತಾರೆಯೇ? ಬಂದರೆ ಮಿಸ್ಸರ್ ನ್‌ಬೋಟ್ ಜ್ಯಾಕಿನಂಥಾ 'ದಾನಶೂರ ಕರ್ಣ' ಬರಬೇಕು ರಿಗೆ. ಮಿಕ್ಕವೆಲ್ಲಾ ಏನು ಮಹಾಸಾಮ್ರಾಜ್ಯ?' ಎಂತ.

ಕೊನೆಗೆ ನೋಡಿದರೆ, ಆ ಕಂಪೆನಿಯೂ ಒಂದು 'ಸಾಮ್ರಾ 'ವೇ; ಆದರೆ ವಿಜಯನಗರ ಸಾಮ್ರಾಜ್ಯವಲ್ಲ; ಪುತ್ತೂರಿನ ಸರಾ ಸಾಹಿತ್ಯ ಸಾಮ್ರಾಜ್ಯವಿದೆಯಲ್ಲಾ—ಅದರ ತಮ್ಮ.

ಈ 'ಸಾಹಿತ್ಯ ಸಾಮ್ರಾಜ್ಯ'ದವರು, ಕಳೆದ ತುಳುಸಿ ಹಬ್ಬದ ನ ಆಡಿದರು,—ಮೊದಲಿನ ನಾಟಕ 'ಭೂಕೈಲಾಸ'! ಸಾಂಬ ಮೂರ್ತಿಗಳ ದರ್ಶನವಾದ ಮೇಲೆ, ಕೈಲಾಸದ ಭೇಟ್ಟಿ ಮಾಡಿ ದ್ದೂ ಸರಿಯಾದ್ದೇ.

ನಾಟಕಕ್ಕೆ ನಾನು ಹೋಗಿರಲಿಲ್ಲ. ಆದರೂ, ಯಾಕೋ ನೋ, ನಾನು ಹೋಗದೇನೇ, ನಾಟಕ ಬಹಳ ಚೆನ್ನಾಗಿತ್ತಂತಪ್ಪ! ನಾಗಂದ್ರು ದುಡ್ಡು ಕೊಟ್ಟು ನೋಡಿ ಬಂದವರೇ!

ಫ್ರೀ ಪಾಸುಗಳು ಎಷ್ಟು ಹೆಚ್ಚುವುವೋ, ನಾಟಕ ಅಷ್ಟೂ ಷ್ಟು ಚೆನ್ನಾಗುವುದು ಊರಿನ ವಾಡಿಕೆ. ಆದರೆ ಇವರ ನಾಟಕ ನಾಗಾಗಲಿಲ್ಲವೆಂತ ಅನೇಕ ಮಂದಿ ಪಾಸ್ ಸಿಕ್ಕದವರಿಗೆ ಃಖವಂತೆ. ಅವರ ಆತ್ಮಕ್ಕೆ ಭಗವಂತನೇ ಶಾಂತಿ ಕೊಡ ೀಕ್ರಪ್ಪೋ!

ಶ್ರೀ. ಸುಬ್ಬಯ್ಯ ನಾಯುಡೂರವರ 'ರಾವಣ'—ಬಹಳ ರ್ಜರಿ; ಅಭಿನಯ ಬಹಳ ಸೊಗಸು; ಈತ ನಮ್ಮ ಕರ್ಣಾಟ ದ ಒಳ್ಳೇ ಆಕ್ಟರು ಅಂದವರೇ, 'ಇವರ ಮಿಲಟರಿ ಮಾದರಿ ಾಸೆ ತಮಾಸೆ ನೋಡಬೇಕು' ಅಂತಲೂ ಅಂದುಕೊಂಡರು!

ಶ್ರೀ. ನಾಗೇಂದ್ರಪ್ಪನವರ 'ನಾರದ'—ಅದೇನು ಕಡಿಮೆ? ತ ನಮ್ಮ ದಿವಂಗತ ವರದಾಚಾರ್ಯರ ಕಂಪೆನಿಯ 'ಹಳೇ ಾದೇವಿ'ಯಷ್ಟೆ. ಕನ್ನಡ ಜಿಲ್ಲೆಗೆ ಈತ 'ಮನೆಯ ಮಗು' ಇದ್ದ ಾಗೆ. ವರದಾಚಾರ್ಯರ ಜೀವರತ್ನನಿದು; ಕಾರಣ? ಕರ್ಣಾ ಿಕ ನಾಟಕಕಲೆಗೂ ಇದು ಜೀವರತ್ನನೇ ತಾನೇ?

ಆ ನಮ್ಮ ಕರ್ಣಾಟಕದ ಹೆಣ್ಣು ಮಗಳ 'ಮಂಡೋದರಿ' ಾದರೂ, ಚೆ ನ್ನಾ ಗಿ ದ್ದು , ಅಭಿನಯ 'ಫಸ್ಟ್ ಕ್ಲಾಸು' ರದ್ರಪ್ಪ!

ಇನ್ನು ಆ ಮಹಾಮಾಯೆಯ ಪಾತ್ರವನ್ನು ನಿರ್ವಹಿಸಿದ ಹೆಣ್ಣು ಮಗಳಾದರೂ, ಕರ್ಣಾಟಕ ರಂಗಭೂಮಿಗೆ ಕೀರ್ತಿ ುನ್ನು ತರತಕ್ಕವಳೇ ಸರಿ! ಒಟ್ಟಿನಲ್ಲಿ ಇವರಿಬ್ಬರು ಮಹಿಳೆ ಮರೂ, ತಮ್ಮ ಗ್ರಾಮೋಫೋನಿನ ಖ್ಯಾತಿ, ಟಾಕಿಯ ಪ್ರಖ್ಯಾತಿ ಿಗೂ ಅರ್ಹರೆನಿಸಿರುವುದು ಇವರ ಇಂದಿನ ಭೂಮಿಕೆಗಳ ದರ್ಶನದಿಂದ ಸತ್ಯವೆನಿಸಿದೆ. ಸಾರ್ಥಕವೆನಿಸಿದೆ.

ಇವರ ಎರಡನೆ ನಾಟಕವೂ 'ಭೂಕೈಲಾಸ'ವೇ. ಕಾರಣ? ೊದಲು ದಿನ, 'ಕೈಲಾಸ'ದರ್ಶನಕ್ಕಾಗಿ, 'ಕಡಾ' ಸಿಕ್ಕದೆ ಕಡಾ' ಮಾಡಿ ಬಂದವರಿಗೆ ಜಾಗನೂ ಸಿಕ್ಕಿರಲಿಲ್ಲ. ಅಂದ್ರೆ ೈಲಾಸವೇ ಕಡ' ಎಂದಾಗಿತ್ತು. ಆದರೆ ಅನರಿಲ್ಲಾ ಎರಡನೆ ಸಲ 'ಕೈಲಾಸ' ಕಂಡರು! ಕೈ ಮುಗಿದರು. ಕಾರ್ತಿಕ ಮಾಸ ಲ್ಲಿ ದೀಪ-ನಮಸ್ಕಾರ ಇವು ಸಶೇಷವಾದ ವಿಶೇಷ!

ವೋಟರ್ ಚಾರ್ಜೂ ಕಮ್ಮಿ; ನಾಟಕದವರ ಚಾರ್ಜೂ ಮ್ಮಿ. ಹಾಗಿರುವಾಗ ನಮ್ಮ ಹಳ್ಳಿಪಳ್ಳಿಯವರು, ಚಿಳ್ಳೆಪಿಳ್ಳೆ ಟ್ಟಿಕೊಂಡು ಇಲ್ಲಿಗೆ ಬರಬೇಕು; ಒಂದು ನಾಟಕವಾದರೂ ಭೂಕೈಲಾಸ' ನೋಡಬೇಕು. ಅದು ನೋಡಬೇಕಾದ್ದೇ ಂತ ಕನ್ನಡ ಬಾರದ ತಮಿಳುದೇಶದವರೂ ಕೂಡ, ಸಾವಿ ರಾರು ರುಪಾಯಿ ಸುರಿದಿದ್ದಾರೆ. 'ಶಭಾಸ್' ಎಂತ ಕೊಂಡಾಡಿ ್ದಾರೆ. ನಾವು ಕನ್ನಡಿಗರು; ಇವರೂ ಕನ್ನಡಿಗರು. ಅಂದ ಮ್ಮಾಲೆ, ಮನೆಯಲ್ಲಿ ಅವರಿಗೆ ಯಾವ ಮನ್ನಣೆ ಮಣೆ ತಾನೇ ೊಡಬೇಡ?—ಅಂತ ಅದಕ್ಕಾಗಿ ಎಲ್ಲರೊಟ್ಟಿಗೆ ನನ್ನದೂ ಒಂದು ಢೋಲ್ ಬಜಾವ್'!

ನಮ್ಮಪ್ಪ ಬದುಕಿದ್ದಾಗ ಒಂದು ಸಮಾಚಾರ ಹೇಳತಾ ದ್ದೂ. ಕಥೆಯಲ್ಲ; ನಡೆದದ್ದೇ.

